ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 17 ಶುಕ್ರವಾರ 2023

ಸಂಪುಟ: 43 | ಸಂಚಿಕೆ: 300 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಮಂಡ್ಯದ ಸಭೆಯಲ್ಲಿ ಡಾ.ಅಶ್ವತ್ಥನಾರಾಯಣ ಹೇಳಿಕೆ; ಸಿದ್ದರಾಮಯ್ಯರ ಟಿಪ್ಪು ರೀತಿ ಹೊಡೆದು ಹಾಕಬೇಕು...!?

ವಿಧಾನಸಭೆಯಲ್ಲಿ 'ಗದ್ದಲ'

ಸಚಿವರ ವಿರುದ್ಧ ಕಾನೂನು ಕ್ರಮಕ್ಕೆ 'ಕೈ' ಶಾಸಕರ ಆಗ್ರಹ

ಬೆಂಗಳೂರು, ಫೆ. 16(ಕೆಎಂಶಿ)–ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ವಿರುದ್ಧ ಉನ್ನತ ಶಿಕ್ಷಣ ಸಚಿವ ಡಾ. ಅಶ್ವತ್ಥ್‌ನಾರಾಯಣ್ ನೀಡಿದ ಹೇಳಿಕೆ ವಿಧಾನಸಭೆಯಲ್ಲಿಂದು ತೀವ್ರ ಚರ್ಚೆಗೆ ಗ್ರಾಸವಾಗಿ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ವಾಕ್ಸಮರವೇ ನಡೆದು ಸದನವನ್ನು ಮುಂದೂಡಿದ ಪ್ರಸಂಗ ಜರುಗಿತು.

ಶೂನ್ಯವೇಳೆಯಲ್ಲಿ ವಿರೋಧ ಪಕ್ಷದ ಉಪನಾಯಕ ಯು.ಟಿ.ಖಾದರ್ ವಿಷಯ ಪ್ರಸ್ತಾಪಿಸುತ್ತಿದ್ದಂತೆ ಮಧ್ಯೆ ಪ್ರವೇಶಿಸಿದ ಡಾ.ಅಶ್ವತ್ಥ್‌ನಾರಾಯಣ್ ಮಂಡ್ಯದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಟಿಪ್ಪುಗೆ ಹೋಲಿಕೆ ಮಾಡಿದ್ದೇನೆ. ಕಾಂಗ್ರೆಸ್ ಸೋಲಿಸಬೇಕು ಎಂದು ಹೇಳಿದ್ದೇನೆ. ನನ್ನ ಮಾತಿನಿಂದ ನೋವಾಗಿದ್ದರೆ ವಿಷಾದ ವ್ಯಕ್ತಪಡಿಸುತ್ತೇನೆ ಎಂದರು.

ಯುದ್ಧ ಕಾಲದಲ್ಲಿ ಇಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿದ್ದೇವೆ. ಅಂದು ಯುದ್ಧ ನಡೆಯುತ್ತಿತ್ತು. ಇಂದು ಚುನಾವಣೆ ನಡೆಯುತ್ತದೆ. ನಾನು ರಾಜಕೀಯ ಪರಿಭಾಷೆಯಲ್ಲಿ ಮಾತನಾಡಿದ್ದೇನೆಯೇ ಹೊರತು, ವೈಯಕ್ತಿಕವಾಗಿ ಅವರ ಬಗ್ಗೆ ದ್ವೇಷವಿಲ್ಲ ಎಂದು ಸ್ಪಷ್ಟಪಡಿಸಿದರು. ಸಿದ್ದರಾಮಯ್ಯ ಅವರ ಬಗ್ಗೆ ನನಗೆ ಗೌರವವಿದೆ. ರಾಜಕೀಯವಾಗಿ ಮತ್ತು ಸೈದ್ಧಾಂತಿಕವಾಗಿ ಬಿನ್ನಾಭಿಪ್ರಾಯವಿದೆ. ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಸೋಲಿಸಬೇಕು ಎಂದು ನಮ್ಮ ಕಾರ್ಯಕರ್ತರಿಗೆ ಕರೆ ಕೊಟ್ಟಿದ್ದೆ. ಟಿಪ್ಪು ಒಬ್ಬ ಮತಾಂಧ. ಆತನನ್ನು ಯಾರು ವೈಭವೀಕರಿಸುತ್ತಾರೋ ಅಂಥವರನ್ನು ಸೋಲಿಸಲು ಹೇಳಿದ್ದೆ. ಕಳೆದ ಹಲವು ದಿನಗಳಿಂದ ಟಿಪ್ಪುವನ್ನು ಅತಿಯಾಗಿ ವೈಭವೀಕರಿಸಲಾಗುತ್ತಿದೆ. ಹೀಗಾಗಿ ಈ ಮಾತು ಹೇಳಿದ್ದೇನೆ ಎಂದು ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡರು. ಟಿಪ್ಪು ಒಬ್ಬ ನರಹಂತಕ ಅಂಥವರನ್ನು ವೈಭವೀಕರಿಸಿದವರಿಗೆ ಇದೇ ರೀತಿ ಹೇಳಬೇಕಾಗುತ್ತದೆ ಎಂದರು. ಆಗ ಸದನದಲ್ಲಿ ಕೋಲಾಹಲ, ಗದ್ದಲ, ಮಾತಿನ ಚಕಮಕಿ, ಆರೋಪ–ಪ್ರತ್ಯಾರೋಪ ನಡೆದು ಯಾರು ಏನು ಹೇಳುತ್ತಿದ್ದಾರೆ

▶ 8ನೇ ಪುಟಕ್ಕೆ



ಮುಗಿಸಿ ಅಂದರೆ ಏನರ್ಥ; ಜನರಿಗೆ ಪ್ರಚೋದನೆ ನೀಡಿದಂತೆ ಅಲ್ಲವೇ

ಬೆಂಗಳೂರು, ಫೆ.16– ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವಥ್ ನಾರಾಯಣ ಹೇಳಿಕೆಗೆ ಸಿದ್ದರಾಮಯ್ಯ ಖಾರವಾಗಿ ಪ್ರತಿಕ್ರಿಯಿಸಿದ್ದಾರೆ. 'ಟಿಪ್ಪುವನ್ನು ಹೊಡೆದು ಹಾಕಿದಂತೆ ಸಿದ್ದರಾಮಯ್ಯನನ್ನು ಹೊಡೆದು ಹಾಕೋಣ' ಎಂದರೆ ಆ ಮಾತಿನ ಅರ್ಥವೇನು ಹೇಳಿ, ಸಿದ್ದರಾಮಯ್ಯನನ್ನು ಕೊಂದುಬಿಡಿ ಎಂದು ಸಾರ್ವಜನಿಕರಿಗೆ ಪ್ರಚೋದನೆ ನೀಡಿದಂತಲ್ಲವೇ, ಹೊಡಿ ಬಡಿ ಎಂಬುದು ಬಿಜೆಪಿಯವರ ಸಂಸ್ಕೃತಿ. ಸಿದ್ದರಾಮಯ್ಯರನ್ನು ಮುಗಿಸಿ ಅಂದರೇ ಏನು ಅರ್ಥ ಇದು. ಟಿಪ್ಪು ಸುಲ್ತಾನ್ ರೀತಿ ನನ್ನನ್ನು ಮುಗಿಸಿ ಅಂದರೆ ಇದರರ್ಥ ಏನು ಎಂದು ಇಂದು ಮಾಧ್ಯಮ ಪ್ರತಿನಿಧಿಗಳ ಮುಂದೆ ಮಾತನಾಡುವಾಗ ಸಿದ್ದರಾಮಯ್ಯ ಕೇಳಿದ್ದಾರೆ. ಪ್ರಧಾನಮಂತ್ರಿ ಮೋದಿ, ಅಮಿತ್ ಶಾ ಈ ಬಗ್ಗೆ ಪ್ರತಿಕ್ರಿಯೆ ನೀಡಲಿ. ಇದು ಸರೀನಾ, ತಪ್ಪಾ ಅಂತಾ ಪ್ರಧಾನಿ ಮೋದಿ,



▶ 8ನೇ ಪುಟಕ್ಕೆ

ಸಚಿವ ಸ್ಥಾನದಿಂದ ಸಿ.ಎನ್.ಅಶ್ವತ್ಥನಾರಾಯಣ ವಜಾಕ್ಕೆ ಕಾಂಗ್ರೆಸ್ ಒತ್ತಾಯ

ಬೆಂಗಳೂರು, ಫೆ.16– ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯನವರನ್ನೂ ಹೊಡೆದು ಹಾಕಿ ಎಂಬ ಪ್ರಚೋದನಾಕಾರಿ ಹೇಳಿಕೆ ನೀಡಿರುವ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರನ್ನು ರಾಜ್ಯ ಸಚಿವ ಸಂಪುಟದಿಂದ ವಜಾಗೊಳಿಸಬೇಕೆಂದು ಕಾಂಗ್ರೆಸ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಒತ್ತಾಯಿಸಿದೆ. ಈ ಸಂಬಂಧ ಸಾಮಾಜಿಕ ಜಾಲತಾಣ ಟ್ವೀಟರ್‌ನಲ್ಲಿ ಟ್ವೀಟ್ ಮಾಡಿರುವ ಕಾಂಗ್ರೆಸ್, ಅಶ್ವತ್ಥನಾರಾಯಣ ಅವರ ಹೇಳಿಕೆ ಬಿಜೆಪಿಯ ಕೊಲೆಗಡುಕ ಮನಸ್ಥಿತಿಯನ್ನು ಅನಾವರಣಗೊಳಿಸಿದೆ. ಬಹುಶಃ ರಾಜ್ಯ ಬಿಜೆಪಿ ಹೇಳುತ್ತಿದ್ದ ಯುಪಿ ಮಾಡೆಲ್ ಇದೇ ಇರಬಹುದು. ಬಸವರಾಜ ಬೊಮ್ಮಾಯಿ ಅವರಿಗೆ ಕನಿಷ್ಠ ನೈತಿಕತೆ ಇದ್ದರೆ ಅಶ್ವತ್ಥ ನಾರಾಯಣ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಿ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದೆ. ಇಷ್ಟು ದಿನ ವಿಪಕ್ಷಗಳ ನಾಯಕರಿಗೆ ಐಟಿ, ಇಡಿಗಳ ಮೂಲಕ

▶ 8ನೇ ಪುಟಕ್ಕೆ

ಕಾಂಗ್ರೆಸ್ ಸೋಲಿಸಬೇಕು ಎನ್ನುವ ಅರ್ಥದಲ್ಲಷ್ಟೇ ನಾನು ಆ ಮಾತು ಆಡಿದ್ದೇನೆ

ಬೆಂಗಳೂರು, ಫೆ.16– ಮಾಜಿ ಸಿಎಂ ವಿಪಕ್ಷ ನಾಯಕ ಸಿದ್ದರಾಮಯ್ಯನವರ ಬಗ್ಗೆ ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವಥ್ ನಾರಾಯಣ ಆಡಿರುವ ಮಾತು ಈಗ ಆಡಳಿತ ಮತ್ತು ವಿಪಕ್ಷ ನಾಯಕರ ಮಧ್ಯೆ ವಾಗ್ವಾಳಿಗೆ ಕಾರಣವಾಗಿದೆ.



ಡಾ.ಅಶ್ವಥ್‌ನಾರಾಯಣ ಹೇಳಿದ್ದೇನು: ಮಂಡ್ಯದಲ್ಲಿ ನಿನ್ನೆ ಬಿಜೆಪಿ ಪ್ರಚಾರ ಸಭೆಯಲ್ಲಿ ಡಾ. ಅಶ್ವಥ್‌ನಾರಾಯಣ ಮಾತನಾಡುತ್ತಾ ಆವೇಶಭರಿತರಾದರು. ಹಿಂದಿನಿಂದಲೂ ಟಿಪ್ಪು ಸುಲ್ತಾನ್–ವೀರ್ ಸಾವರ್ಕರ್ ವಿಚಾರದಲ್ಲಿ ಮಾತಿನಲ್ಲಿ ಬಡಿದಾಡುವ, ಚುನಾವಣೆಯ ಅಸ್ತ್ರವಾಗಿ ತೆಗೆದುಕೊಂಡಿರುವ ರಾಜಕೀಯ ಪಕ್ಷಗಳು ಈ ಬಾರಿಯೂ ಅದನ್ನೇ ಪ್ರಸ್ತಾಪಿಸುತ್ತಿದೆ. ನಿಮಗೆ ಟಿಪ್ಪು ಬೇಕಾ, ವೀರ ಸಾವರ್ಕರ್ ಬೇಕಾ ಹೇಳಿ, ಟಿಪ್ಪು ವಿಚಾರದಲ್ಲಿ ಸಿದ್ದರಾಮಯ್ಯನವರು ಮಾಡಿದ ರಾಜಕೀಯ ನಿಮಗೆಲ್ಲಾ ಗೊತ್ತಿದೆ, ಹಿಂದೂ

▶ 8ನೇ ಪುಟಕ್ಕೆ

ಬಿಜೆಪಿ ಸರ್ಕಾರದ ಕಡೇ ಬಜೆಟ್ ಇಂದು ಮಂಡನೆ


ಕಾಂಗ್ರೆಸ್ ಪ್ರಣಾಳಿಕೆಗೆ ಸೆಡ್ಡು ಹೊಡೆಯಲು ಮುಖ್ಯಮಂತ್ರಿ ಬೊಮ್ಮಾಯಿ ನಿರ್ಧಾರ

ಬೆಂಗಳೂರು, ಫೆ.16– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ಸರ್ಕಾರದ ಕಡೆಯ ಬಜೆಟ್, ಅದೂ ಎಲೆಕ್ಷನ್ ಬಜೆಟ್‌ನ್ನು ನಾಳೆ (ಶುಕ್ರವಾರ) ಮಂಡಿಸಲಿದ್ದಾರೆ. ಜನಪ್ರಿಯ ಯೋಜನೆಗಳನ್ನೊಳಗೊಂಡ ಬಜೆಟ್ ಕೊಡುವತ್ತ ಮುಖ್ಯಮಂತ್ರಿ ಬೊಮ್ಮಾಯಿ ಚಿತ್ತವಿದೆ. ಎಲೆಕ್ಷನ್‌ಗೂ, ಪಕ್ಷಕ್ಕೂ ಬೂಸ್ಟ್ ಎಂಬ ಸೂತ್ರದ ಛಾಯೆ ಬಜೆಟ್ ಮೇಲೆ ಬೀಳುವ ಸಾಧ್ಯತೆಯಿದೆ.

ವಿಧಾನಸಭೆಯಲ್ಲಿ ಶುಕ್ರವಾರ ಬೆಳಗ್ಗೆ 10:30ಕ್ಕೆ ಸಿಎಂ ಬಸವರಾಜ ಬೊಮ್ಮಾಯಿ ತಮ್ಮ 2ನೇ ಬಜೆಟ್ ಮಂಡಿಸಲಿದ್ದಾರೆ. ತೆರಿಗೆ ಸಂಗ್ರಹದಲ್ಲಿ ನಿಗದಿತ ಗುರಿಗಿಂತ ಹೆಚ್ಚು ಸಂಗ್ರಹವಾಗಿದೆ ಎನ್ನಲಾಗಿದ್ದು, ಬಜೆಟ್ ಗಾತ್ರ ಸುಮಾರು 3 ಲಕ್ಷ ಕೋಟಿ ರೂ. ದಾಟುವ ಸಾಧ್ಯತೆ ಇದೆ. 2023–24ನೇ ಸಾಲಿನ ರಾಜ್ಯ ಬಜೆಟ್ ನಿರೀಕ್ಷೆಗಳೂ ಹೆಚ್ಚು, ಸವಾಲುಗಳೂ ಹೆಚ್ಚು. ಪಕ್ಕಾ ಚುನಾವಣಾ ಲೆಕ್ಕಾಚಾರಗಳೊಂದಿಗೆ ಆಯವ್ಯಯ ಮಂಡನೆಗೆ ಮುಖ್ಯಮಂತ್ರಿ ಮುಂದಾಗಿದ್ದಾರೆ. ಉಚಿತ ಘೋಷಣೆಗಳನ್ನೂ ಒಳಗೊಂಡ ಜನತೆಗೆ ತೆರಿಗೆ ಹೊರೆ ಇಲ್ಲದ ಬಜೆಟ್ ಮಂಡನೆಗೆ ಪ್ಲಾನ್ ಮಾಡಿದ್ದು, ಕಾಂಗ್ರೆಸ್‌ಗೆ ಟಕ್ಕರ್ ಕೊಡಲು ಜನಪ್ರಿಯ ಉಚಿತ ಸ್ಕೀಮ್‌ಗಳೂ ಹೆಚ್ಚಿರುವ ಸಾಧ್ಯತೆ ಇದೆ. ರೈತರು, ಕಾರ್ಮಿಕರು, ಮಹಿಳೆಯರು, ಎಸ್‌ಸಿ, ಎಸ್‌ಟಿ, ಹಿಂದುಳಿದ ಜಾತಿ ವರ್ಗಗಳ ಕಲ್ಯಾಣಕ್ಕೆ ಒತ್ತು ಕೊಡುವುದು ಖಚಿತವಾಗಿದೆ.

ಬೊಮ್ಮಾಯಿ ಬಜೆಟ್ ನಿರೀಕ್ಷೆಗಳೇನು: ಕಾಂಗ್ರೆಸ್‌ನ ಗೃಹ ಲಕ್ಷ್ಮಿ ಯೋಜನೆಗೆ ಸೆಡ್ಡು ಹೊಡೆಯಲು ಸ್ತ್ರೀ ಶಕ್ತಿ ಯೋಜನೆ ಜಾರಿ, ಪ್ರತಿ ಕುಟುಂಬದ ಗೃಹಿಣಿಗೆ ಆರ್ಥಿಕ ಸಹಾಯ ನೀಡುವ ಯೋಜನೆ ಸ್ತ್ರೀ ಶಕ್ತಿ ಯೋಜನೆ ಜಾರಿ, ರೈತರಿಗೆ ಬಡ್ಡಿರಹಿತ ಸಾಲ ಸೌಲಭ್ಯ 3 ಲಕ್ಷದಿಂದ 5 ಲಕ್ಷ ರೂ.ಗೆ ಹೆಚ್ಚಳ, ಮಹಿಳೆಯರಿಗೆ ಸ್ತ್ರೀ ಶಕ್ತಿ ಸಂಘಗಳ ಮೂಲಕ ಸಾಲ ಯೋಜನೆ ಜಾರಿ, ರಾಜ್ಯದೆಲ್ಲೆಡೆ ನಮ್ಮ ಕ್ಲಿನಿಕ್‌ಗಳ ಹೆಚ್ಚಳ, ಹೋಬಳಿ ಮಟ್ಟದ ತನಕ ನಮ್ಮ ಕ್ಲಿನಿಕ್. ಬೆಂಗಳೂರು ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್ ಘೋಷಣೆ, ವಿವಿಧ ಸಮುದಾಯಗಳ ಅಭಿವೃದ್ಧಿಗೆ ಪ್ರತ್ಯೇಕ ನಿಗಮಗಳ ಸ್ಥಾಪನೆ, ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸಲು ಹೆಚ್ಚು ಹಣ ಮೀಸಲಿಡುವ ಘೋಷಣೆ, ಬೆಂಗಳೂರು ಟ್ರಾಫಿಕ್ ಸಮಸ್ಯೆ ನಿವಾರಣೆಗೆ ಪ್ರತ್ಯೇಕ ಯೋಜನೆ ಘೋಷಣೆ, ಕುಲ ಕಸುಬು ಆಧಾರಿತ ಸಮುದಾಯಗಳಿಗೆ ಸಹಾಯಧನ, ರಾಜ್ಯ ಸರ್ಕಾರಿ ನೌಕರರಿಗೆ 7ನೇ ವೇತನ ಆಯೋಗ ವರದಿ

▶ 8ನೇ ಪುಟಕ್ಕೆ



ಬ್ರಾಹ್ಮಣ, ಆರ್ಯ ವೈಶ್ಯ ನಿಗಮಕ್ಕೆ 10 ಕೋಟಿ ಅನುದಾನ

ಬೆಂಗಳೂರು, ಫೆ16– ಆರ್ಯ ವೈಶ್ಯ ನಿಗಮ ಮಂಡಳಿ ಮತ್ತು ಬ್ರಾಹ್ಮಣ ನಿಗಮ ಮಂಡಳಿಗೆ ಈ ಬಜೆಟ್‌ನಲ್ಲಿ ತಲಾ 10 ಕೋಟಿ ಅನುದಾನ ನೀಡುತ್ತೇನೆ. ಸ್ಥಗಿತಗೊಂಡಿರುವ ವಿದ್ಯಾರ್ಥಿ ವೇತನ ಬಿಡುಗಡೆಗೂ ಆದೇಶ ನೀಡುತ್ತೇನೆ ಎಂದು ಸಿಎಂ ಬೊಮ್ಮಾಯಿ ತಿಳಿಸಿದ್ದಾರೆ.

ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಜೆಡಿಎಸ್‌ನ ಸದಸ್ಯರು, ಆರ್ಯ ವೈಶ್ಯ ನಿಗಮ ಮತ್ತು ಬ್ರಾಹ್ಮಣ ನಿಗಮಕ್ಕೆ ಸರಿಯಾಗಿ ಅನುದಾನ ನೀಡುತ್ತಿಲ್ಲ. ಹೆಚ್ಚು ಅನುದಾನಕ್ಕೆ ಮನವಿ ಮಾಡಿದ್ದೇವೆ. ಆದರೂ ಅನುದಾನ ಕೊಟ್ಟಿಲ್ಲ. ಎರಡು ಸಮಾಜಕ್ಕೂ ಈ ಸರ್ಕಾರ ಅನ್ಯಾಯ ಮಾಡಿದೆ. ಕುಮಾರಸ್ವಾಮಿ ಸಿಎಂ ಆಗಿದ್ದಾಗ 100 ಕೋಟಿ ಅನುದಾನ ಬಿಡುಗಡೆ ಮಾಡಿದ್ದರು. ಕಾಮನ್ ಸಿಎಂ ಎಲ್ಲಾ ವರ್ಗಕ್ಕೂ ಕಾಮನ್ ಸಿಎಂ ಆಗಿ ಕೆಲಸ ಮಾಡಬೇಕು ಎಂದು ಆಗ್ರಹಿಸಿದರು.

ಇದಕ್ಕೆ ಉತ್ತರ ನೀಡಿದ ಮುಖ್ಯಮಂತ್ರಿ ಬೊಮ್ಮಾಯಿ, ಬ್ರಾಹ್ಮಣ ನಿಗಮದಲ್ಲಿ 6 ಕೋಟಿ ಇದೆ. ಇದನ್ನು ಬಳಕೆ ಮಾಡಿಕೊಳ್ಳಿ. ಆರ್ಯ ವೈಶ್ಯ ನಿಗಮದಲ್ಲಿ ಅನುದಾನ ಇದೆ. ಹೆಚ್ಚುವರಿ ಅನುದಾನ ಕೊಡುತ್ತೇವೆ. ಆರ್ಯ ವೈಶ್ಯ ನಿಗಮ ಉತ್ತಮವಾಗಿ ಕೆಲಸ ಮಾಡುತ್ತಿದೆ. ಎಲ್ಲವನ್ನೂ ಆನ್‌ಲೈನ್ ವ್ಯವಸ್ಥೆಯಲ್ಲಿ ಮಾಡುತ್ತಿದೆ. ಆರ್ಯ ವೈಶ್ಯ ನಿಗಮ ಮತ್ತು ಬ್ರಾಹ್ಮಣ ನಿಗಮಕ್ಕೆ ಈ ಬಜೆಟ್‌ನಲ್ಲಿ ತಲಾ 10 ಕೋಟಿ ನೀಡುತ್ತೇನೆ ಎಂದು ಭರವಸೆ ನೀಡಿದರು. ಅಲ್ಲದೇ ವಿದ್ಯಾರ್ಥಿ ವೇತನವನ್ನೂ ಕೂಡಲೇ ಬಿಡುಗಡೆ ಮಾಡುವಂತೆ ಆದೇಶ ಮಾಡುತ್ತೇನೆ ಎಂದರು.

ಪದವಿ ಕಾಲೇಜು 1050 ಸಹಾಯಕ ಪ್ರಾಧ್ಯಾಪಕರ ಶೀಘ್ರವೇ ನೇಮಕ

ಬೆಂಗಳೂರು, ಫೆ 16(ಕೆಎಂಶಿ)–ಸರ್ಕಾರಿ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ 1050 ಸಹಾಯಕ ಪ್ರಾಧ್ಯಾಪಕರನ್ನು ಶೀಘ್ರದಲ್ಲೇ ನೇಮಕ ಮಾಡಲಾಗುವುದೆಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ವಿಧಾನಸಭೆಗೆ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಡಾ.ಅವಿನಾಶ್ ಉಮೇಶ್ ಜಾಧವ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ ಒಟ್ಟು 6500 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳು ಮಂಜೂರಾಗಿವೆ. ಇದರಲ್ಲಿ 5000 ಹುದ್ದೆಗಳು ಭರ್ತಿಯಾಗಿವೆ. ಹೊಸದಾಗಿ 1050 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡಲು ಲಿಖಿತ ಪರೀಕ್ಷೆ ನಡೆಸಲಾಗಿದೆ ಎಂದರು. ಬಾಕಿ ಉಳಿದಿರುವ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡಲಾಗುವುದು. ಯಾವ ಕಾಲೇಜಲ್ಲಿ ಬೋಧಕರ ಕೊರತೆ ಇದೆಯೋ ಅಂತಹ ಕಡೆ ಆದ್ಯತೆ ಮೇರೆಗೆ ಭರ್ತಿ ಮಾಡುವುದಾಗಿ ಭರವಸೆ ನೀಡಿದರು. ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಹುದ್ದೆಗಳನ್ನು ಭರ್ತಿ ಮಾಡಲು ನಮಗೆ ಹೆಚ್ಚುವರಿಯಾಗಿ 8000 ಹುದ್ದೆಗಳು ಬೇಕಾಗುತ್ತವೆ. ಅತಿಥಿ ಉಪನ್ಯಾಸಕರ ಮೂಲಕವೂ ಕೊರತೆ ಇರುವ ಕಡೆ ಪಾಠ ಪ್ರವಚನಗಳಿಗೆ ತೊಂದರೆಯಾಗದಂತೆ ಕ್ರಮ ಕೈಗೊಂಡಿದ್ದೇವೆ ಎಂದು ವಿವರಿಸಿದರು. ಈ ವೇಳೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು, ಎಲ್ಲೆಲ್ಲಿ ಹುದ್ದೆಗಳು ಖಾಲಿ ಇವೆಯೋ ಅಂತಹ ಕಡೆ ಭರ್ತಿ ಮಾಡಬೇಕು ಎಂದು ಸಚಿವರಿಗೆ ಸಲಹೆ ಮಾಡಿದರು.

ಕಾಂಗ್ರೆಸ್‌ನಲ್ಲಿ ಹತ್ತು ಮಂದಿ ಸಿಎಂ ರೇಸ್‌ನಲ್ಲಿದ್ದಾರೆ; ಅವರಲ್ಲಿ ನಾನೂ ಒಬ್ಬ

ಮಧುಗಿರಿ, ಫೆ.16– ಕಾಂಗ್ರೆಸ್‌ನಲ್ಲಿ ಸಿಎಂ ಗಾದಿಗೆ ಆಕಾಂಕ್ಷಿಗಳ ಪಟ್ಟಿ ಬೆಳೆಯುತ್ತಲೇ ಇದೆ. ಈ ವಿಷಯದಲ್ಲಿ ಕಾಂಗ್ರೆಸ್ ನಾಯಕರು ಆಗಾಗ ಸುದ್ದಿಯಾಗುತ್ತಾರೆ. ಚುನಾವಣೆ ಹೊತ್ತಿನಲ್ಲಿ ಪೈಪೋಟಿ ಬೆಳೆಯುತ್ತಲೇ ಇದೆ. ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಮಧ್ಯೆ ಈ ವಿಚಾರಕ್ಕೆ ಮುಸುಕಿನ ಗುದ್ದಾಟ ನಡೆಯುತ್ತಿರುತ್ತದೆ. ರೇಸ್‌ಗೆ ಈಗ ಮತ್ತೊಬ್ಬರ ಸೇರ್ಪಡೆಯಾಗಿದೆ. ಅವರು ಡಾ.ಜಿ.ಪರಮೇಶ್ವರ್. ತುಮಕೂರು ಜಿಲ್ಲೆ ಮಧುಗಿರಿಯಲ್ಲಿ ಮಾತನಾಡುವ ವೇಳೆ ದಲಿತ ಸಮುದಾಯದ ನಾಯಕ ಪರಮೇಶ್ವರ್, ಕಾಂಗ್ರೆಸ್‌ನಲ್ಲಿ 10 ಮಂದಿ ಸಿಎಂ ಆಗುವ ಕನಸು ಹೊತ್ತಿದ್ದಾರೆ, ಆ ಹತ್ತು ಮಂದಿಯಲ್ಲಿ ನಾನೂ ಒಬ್ಬ ಎಂದು ಹೇಳಿದ್ದು, ಸಿಎಂ ಕುರ್ಚಿಗೆ ತಾನು ಕೂಡ ಪ್ರಬಲ ಆಕಾಂಕ್ಷಿ ಎಂದಿದ್ದಾರೆ.



ನಮ್ಮಲ್ಲಿ ಜಾತಿ ಆಧಾರದ ಮೇಲೆ ಮುಖ್ಯಮಂತ್ರಿ ಮಾಡಲ್ಲ, ಯಾರು ಸಮರ್ಥರಿದ್ದಾರೆ ಅಂಥವರನ್ನು ಸಿಎಂ ಮಾಡ್ತಾರೆ. ನಾನು ಯಾಕೆ ರಾಜಕೀಯ ಮಾಡ್ತಾ ಇದ್ದೀನಿ ಹೇಳಿ. ಅಧಿಕಾರಕ್ಕೆ ಬರಬೇಕು ಅಂತ ತಾನೇ ರಾಜಕಾರಣ ಮಾಡ್ತಿರೋದು. ಮುಖ್ಯಮಂತ್ರಿ ಆಗಬೇಕು ಅನ್ನೋ ಆಸೆ ಎಲ್ಲರಿಗೂ ಇರುತ್ತೆ, ಅಧಿಕಾರಕ್ಕೆ ಬಂದ ಮೇಲೆ ಹೈಕಮಾಂಡ್ ತೀರ್ಮಾನ ಮಾಡುತ್ತದೆ ಎಂದರು. ನಮ್ಮ ಗುರಿ ಮೊದಲು ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವುದು. ನಂತರ ಸಿಎಂ ಯಾರಾಗುತ್ತಾರೆ ಎಂದು ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಹೈಕಮಾಂಡ್ ತೀರ್ಮಾನಕ್ಕೆ ನಾವೆಲ್ಲರೂ ಬದ್ಧರಾಗಿದ್ದೇವೆ ಎಂದರು.

ಫೆ.19 ರಂದು ಆಟೋನಗರ ನಿರ್ಮಾಣಕ್ಕೆ ಗುದ್ದಲಿ ಪೂಜೆ

ವಾಹನ ಮೆಕ್ಯಾನಿಕ್‌ಗಳ ಬೇಡಿಕೆ ಈಡೇರಿಸುವ ಹಲವು ವರ್ಷದ ರಾಮದಾಸ್ ಕನಸು ಸಾಕಾರ ಸನ್ನಿಹಿತ

ಮೈಸೂರು, ಫೆ.16(ಆರ್‌ಕೆ)– ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಬಹು ನಿರೀಕ್ಷಿತ ಆಟೋನಗರ ಯೋಜನೆ ಅನುಷ್ಠಾನಗೊಳಿಸಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ) ಮುಂದಾಗಿದೆ.

ಮೈಸೂರಿನ ನಂಜನಗೂಡು ರಸ್ತೆಯ ಬಂಡಿಪಾಳ್ಯ ಬಳಿ ಮಂಡಕಳ್ಳಿ ಗ್ರಾಮದ ಸರ್ವೆ ನಂಬರ್ 64ರ 10.10 ಎಕರೆ ಪ್ರದೇಶದಲ್ಲಿ ಉದ್ದೇಶಿತ ಆಟೋನಗರ ನಿರ್ಮಾಣ ಕಾಮಗಾರಿಗೆ ಫೆ.19 ರಂದು ಬೆಳಗ್ಗೆ 10.30 ಗಂಟೆಗೆ ಕೆ.ಆರ್. ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ಹಾಗೂ ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಗುದ್ದಲಿ ಪೂಜೆ ನೆರವೇರಿಸುವರು.



ನಂಜನಗೂಡು ರಸ್ತೆಯ ನಕ್ಷತ್ರ ಕನ್‌ವೆನ್ಷನ್ ಹಾಲ್ ಪಕ್ಕದಲ್ಲಿರುವ 10.10 ಎಕರೆ ಪ್ರದೇಶದಲ್ಲಿ 4.5 ಕೋಟಿ ರೂ. ಅಂದಾಜು ವೆಚ್ಚದ ಆಟೋನಗರ ನಿರ್ಮಿಸಿ ರಸ್ತೆ, ನೀರು, ವಿದ್ಯುತ್, ಒಳಚರಂಡಿ, ಶೌಚಾಲಯ, ಸ್ನಾನಗೃಹ ಸೇರಿದಂತೆ ವಾಹನ ರಿಪೇರಿ ಮಾಡುವ ಮೆಕ್ಯಾನಿಕ್‌ಗಳಿಗೆ ಅಗತ್ಯ ಮೂಲಸೌಕರ್ಯ ಕಲ್ಪಿಸಿಕೊಡಲು ಮುಡಾ ಮುಂದಾಗಿದೆ.

ಮೈಸೂರು ನಗರದಲ್ಲಿ ನಾಲ್ಕು ಚಕ್ರ ಹಾಗೂ ಭಾರೀ ವಾಹನಗಳ ರಿಪೇರಿ ಮಾಡಲು ಜಾಗವಿಲ್ಲದ ಕಾರಣ ಮೆಕ್ಯಾನಿಕ್‌ಗಳು ರಸ್ತೆಯಲ್ಲೇ ಕಂಡ ಕಂಡಲ್ಲಿ ಕಾರ್ಯಕ್ಕಿಳಿದಿದ್ದಾರೆ. ಇದರಿಂದ ವಾಹನ ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ಇದನ್ನು ಗಮನಿಸಿ ಕೆ.ಆರ್.ಕ್ಷೇತ್ರದ ಶಾಸಕ ಎಸ್.ಎ. ರಾಮದಾಸ್ ಒಂದೇ ಜಾಗದಲ್ಲಿ ವಾಹನಗಳ ರಿಪೇರಿಗಾಗಿ ವ್ಯವಸ್ಥೆ ಕಲ್ಪಿಸಬೇಕೆಂದು ಆಟೋನಗರ ಯೋಜನೆಗೆ ಆಸಕ್ತಿ ವಹಿಸಿದ್ದರಿಂದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಯೋಜನೆ ರೂಪಿಸಲಾಗಿತ್ತು.

ಅದಕ್ಕಾಗಿ ನಂಜನಗೂಡು ರಸ್ತೆಯಲ್ಲಿ ಮಂಡಕಳ್ಳಿ ಗ್ರಾಮದ ಸರ್ವೆ ನಂಬರ್ 64 ರಲ್ಲಿ 10.10 ಎಕರೆ ಮುಡಾ ಜಾಗ ಗುರ್ತಿಸಿ ಈ ಹಿಂದೆ ಗುದ್ದಲಿ ಪೂಜೆಯನ್ನು ನೆರವೇರಿಸಲಾಗಿತ್ತಾದರೂ, ಕೆಲ ಭೂ ಮಾಲೀಕರು ಕೋರ್ಟ್ ಮೊರೆ ಹೋಗಿದ್ದರಿಂದ ಯೋಜನೆ ನೆನೆಗುದಿಗೆ ಬಿದ್ದಿತ್ತು. ಇದೀಗ ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥವಾಗಿರುವುದರಿಂದ ಆಟೋನಗರ ನಿರ್ಮಾಣ ಕಾಮಗಾರಿಗೆ ದಿನಾಂಕ ನಿಗದಿಪಡಿಸಲಾಗಿದೆ ಎಂದು ಶಾಸಕ ರಾಮದಾಸ್ ತಿಳಿಸಿದ್ದಾರೆ.

ಬೈಕ್, ಕಾರು, ಜೀಪು, ಬಸ್, ಲಾರಿಗಳಂತಹ ವಾಹನಗಳನ್ನು ಒಂದೆಡೆ ರಿಪೇರಿ ಮತ್ತು ಸರ್ವೀಸ್ ಮಾಡಲು ಅನುಕೂಲವಾಗುವಂತೆ ಮಳಿಗೆಗಳನ್ನು ನಿರ್ಮಿಸಿ ಮೂಲ ಸೌಕರ್ಯ ಒದಗಿಸಲು ಉದ್ದೇಶಿಸಿ ಮುಡಾದಿಂದ ಯೋಜನೆ ಅನುಷ್ಠಾನ ಮಾಡಲು ಸಿದ್ಧತೆ ನಡೆಸಿದೆ ಎಂದು ಅವರು ತಿಳಿಸಿದರು. ಮೈಸೂರು ನಗರದಲ್ಲಿ ಜನ

▶ 2ನೇ ಪುಟಕ್ಕೆ

ಇನ್ನೊಂದು ತಿಂಗಳಲ್ಲಿ ಮೈಸೂರು ಪುರಭವನ ಆವರಣದ


ಬಹುಮಹಡಿ ವಾಹನ ನಿಲುಗಡೆ ಕಾಮಗಾರಿ ಪೂರ್ಣ

●ದಶಕಕ್ಕೂ ಅಧಿಕ ಕಾಲದಿಂದ ಕುಂಟುತ್ತಾ ಸಾಗಿರುವ ಕಾಮಗಾರಿ ●ನಮ್ಮ ಅಧಿಕಾರಿ ವರ್ಗದ 'ಮಾದರಿ' ಅಭಿವೃದ್ಧಿ ಯೋಜನೆಗೆ ಸಾರ್ವಜನಿಕರ ಆಕ್ರೋಶ

ಮೈಸೂರು, ಫೆ.16(ಜಿಎ)– ಮೈಸೂರಿನ ಪುರಭವನ ಆವರಣದಲ್ಲಿ ಪ್ರಗತಿಯಲ್ಲಿರುವ ಬಹು ಹಂತದ ಪಾರ್ಕಿಂಗ್(ಮಲ್ಟಿ ಲೆವೆಲ್ ಪಾರ್ಕಿಂಗ್ ಲಾಟ್) ಕಾಮಗಾರಿ ಇನ್ನೊಂದು ತಿಂಗಳಲ್ಲಿ ಪೂರ್ಣಗೊಳ್ಳುವ ಸಾಧ್ಯತೆ ಇದೆ. ಈ ಮೂಲಕ ನಗರದ ಕೇಂದ್ರ ಭಾಗದ ಪಾರ್ಕಿಂಗ್ ಸಮಸ್ಯೆಗೆ ಶೀಘ್ರ ಪರಿಹಾರ ದೊರಕಲಿದೆ.

ಬಹು ಹಂತದ ಪಾರ್ಕಿಂಗ್ ಯೋಜನೆ ದಶಕಕ್ಕೂ ಹಿಂದಿನದು. ಇದು ನಗರದ ಅತ್ಯಂತ ಸುದೀರ್ಘ ಅಭಿವೃದ್ಧಿ ಕಾಮಗಾರಿ ಎಂದರೂ ತಪ್ಪಾಗಲಾರದು. ಪ್ರಮುಖ ವಾಣಿಜ್ಯ ಪ್ರದೇಶದಲ್ಲಿ ವಾಹನ ನಿಲುಗಡೆಯೇ ಒಂದು ದೊಡ್ಡ ಸವಾಲು. ಇದಕ್ಕೆ ಸಮರ್ಪಕ ವ್ಯವಸ್ಥೆ ಕಲ್ಪಿಸಿದರೆ ಸಾರ್ವಜನಿಕರಿಗೆ ಅನುಕೂಲವಾಗುವುದರ ಜೊತೆಗೆ ಹೆಚ್ಚು ಗ್ರಾಹಕರ ಭೇಟಿಯಿಂದ ವ್ಯಾಪಾರ ವಹಿವಾಟಿಗೆ ಉತ್ತೇಜನ ದೊರಕುತ್ತದೆ ಎಂಬ ಉದ್ದೇಶದಿಂದ 12 ವರ್ಷಗಳ ಹಿಂದೆಯೇ ಯೋಜನೆ ರೂಪಿಸಿ, ಕಾಮಗಾರಿಗೆ ಚಾಲನೆ ನೀಡಲಾಗಿತ್ತು.

ಟೆಂಡರ್‌ದಾರರ ನಾನಾ ವಿವಾದ, ಸಮಸ್ಯೆಯಿಂದ ಕಾಮಗಾರಿ ಕುಂಠಿತಗೊಂಡಿತ್ತಲ್ಲದೆ ಮರು ಟೆಂಡರ್ ಕರೆಯುವ ಪರಿಸ್ಥಿತಿ ಸೃಷ್ಟಿಯಾಯಿತು. ವಿಳಂಬವಾಗಿಯಾದರೂ ಕಾಮಗಾರಿಗೆ ಮರು ಚಾಲನೆ ಸಿಕ್ಕಿ, ಸದ್ಯ ಈಗ ಕೊನೆ ಹಂತದ ಕಾಮಗಾರಿ ತ್ವರಿತವಾಗಿ ನಡೆಯುತ್ತಿದ್ದು ಇನ್ನೊಂದು ತಿಂಗಳಲ್ಲಿ ಪೂರ್ಣಗೊಳ್ಳುವ ಸಾಧ್ಯತೆಯಿದೆ. ಈ ಬಹು ಹಂತದ ಪಾರ್ಕಿಂಗ್‌ನಲ್ಲಿ 600ಕ್ಕೂ ಹೆಚ್ಚು ನಾಲ್ಕು ಚಕ್ರ ವಾಹನಗಳು ಹಾಗೂ ಸಾವಿರಕ್ಕೂ ಹೆಚ್ಚು ದ್ವಿಚಕ್ರ ವಾಹನಗಳ ನಿಲುಗಡೆ ಮಾಡಬಹುದಾಗಿದ್ದು, ಕಾಮಗಾರಿ ಪೂರ್ಣವಾದ ಬಳಿಕ ಡಿ.ದೇವರಾಜ ಅರಸು ರಸ್ತೆ, ಸಯ್ಯಾಜಿರಾವ್ ರಸ್ತೆ, ಅಶೋಕ ರಸ್ತೆ, ಅರಮನೆ, ಗಾಂಧಿ ಚೌಕ ಸೇರಿದಂತೆ ಸುತ್ತಮುತ್ತಲ ಪ್ರದೇಶದ ಪಾರ್ಕಿಂಗ್ ಸಮಸ್ಯೆಗೆ ಪರಿಹಾರ ಸಿಗಲಿದೆ.




ವಿಳಂಬವಾಗಿದ್ದೇಕೆ?: ಮೈಸೂರು ನಗರಪಾಲಿಕೆ ವತಿಯಿಂದ ಮೊದಲು 18.28 ಕೋಟಿ ರೂ. ಅಂದಾಜು ಮೊತ್ತದ ಬಹು ಹಂತದ ಪಾರ್ಕಿಂಗ್ ಯೋಜನೆ ಟೆಂಡರ್ ಅನ್ನು ಹೈದರಾಬಾದ್ ಮೂಲದ ಛಾಬ್ರಿಯಾ ಅಸೋಸಿಯೇಟ್ಸ್ ಸಂಸ್ಥೆಗೆ ನೀಡಿತ್ತು. ನಂತರ 12 ಕೋಟಿ ರೂ. ಹಣವನ್ನೂ ಬಿಡುಗಡೆ ಮಾಡಲಾಗಿತ್ತು. ಆದರೆ ನಂತರದಲ್ಲಾದ ಕೆಲ ಗೊಂದಲಗಳಿಂದಾಗಿ ಕಾಮಗಾರಿ ಅರ್ಧಕ್ಕೆ ನಿಂತಿತು. ಪರಿಣಾಮ ಯೋಜನೆ ನೆನೆಗುದಿಗೆ ಬಿದ್ದಿತು. ಈ ವಿಚಾರದ ಬಗ್ಗೆ ಕೌನ್ಸಿಲ್ ಸಭೆಗಳಲ್ಲೂ ಚರ್ಚೆ ನಡೆದಿತ್ತು. ಹಲವು ವರ್ಷಗಳ ಬಳಿಕ ಮರು ಟೆಂಡರ್ ಮೂಲಕ ಬಾಕಿ ಕಾಮಗಾರಿಗೆ ಕೈಗೆತ್ತಿಕೊಂಡ ಗುತ್ತಿಗೆದಾರರು, ಪ್ಲಾಸ್ಟರಿಂಗ್, ದ್ವಿಚಕ್ರ ಹಾಗೂ ನಾಲ್ಕು ಚಕ್ರದ ವಾಹನಗಳ ಪಾರ್ಕಿಂಗ್ ಲಾಟ್‌ಗೆ ಫ್ಲೋರಿಂಗ್, ವಾಟರ್ ಪ್ರೂಫಿಂಗ್ ಇನ್ನಿತರ ಕಾಮಗಾರಿಗಳಿಗಾಗಿ ಹೆಚ್ಚುವರಿ ರ್‍ಯಾಂಪ್ ನಿರ್ಮಿಸಬೇಕಾಯಿತು. ಮಳೆಗಾಲದಲ್ಲಿ ನೀರು ನಿಲ್ಲದಂತೆ ಸರಾಗವಾಗಿ ಚರಂಡಿ ಸೇರುವ

▶ 2ನೇ ಪುಟಕ್ಕೆ

> **"ಮೊದಲ ಅಂತಸ್ತಿನಲ್ಲಿ ಪಾರ್ಕಿಂಗ್ ಮಾಡಲು ಅವಕಾಶ ಕಲ್ಪಿಸಿದ್ದು, ಯಾವುದೇ ಶುಲ್ಕ ಪಡೆಯುತ್ತಿಲ್ಲ. ಕಾಮಗಾರಿ ಪೂರ್ಣಗೊಂಡ ನಂತರ ಪ್ರತ್ಯೇಕ ಟೆಂಡರ್ ಕರೆದು ಶುಲ್ಕ ನಿಗದಿಪಡಿಸಲಾಗುತ್ತದೆ. ಸದ್ಯ ಬಹುತೇಕ ಕಾಮಗಾರಿ ಅಂತಿಮ ಹಂತಕ್ಕೆ ತಲುಪಿದ್ದು, ತಿಂಗಳೊಳಗೆ ಕಾಮಗಾರಿ ಪೂರ್ಣಗೊಂಡು ಸಂಪೂರ್ಣ ಮಲ್ಟಿ ಲೆವೆಲ್ ಪಾರ್ಕಿಂಗ್ ಲಾಟ್ ಸಾರ್ವಜನಿಕರಿಗೆ ಮುಕ್ತಗೊಳ್ಳಲಿದೆ.** –ಲಕ್ಷ್ಮೀಕಾಂತ ರೆಡ್ಡಿ, ಆಯುಕ್ತ, ಮೈಸೂರು ಮಹಾನಗರ ಪಾಲಿಕೆ

ಫೆ.20ಕ್ಕೆ ಸಂತಕವಿ ಸರ್ವಜ್ಞ ಜಯಂತಿ



ಮೈಸೂರು,ಫೆ.16– ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಫೆ.20ರಂದು ಮಧ್ಯಾಹ್ನ 12.30 ಗಂಟೆಗೆ ಸಂತಕವಿ ಶ್ರೀ ಸರ್ವಜ್ಞ ಜಯಂತಿಯನ್ನು ಕರ್ನಾಟಕ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದ್ದು, ಜಯಂತಿ ಅಂಗವಾಗಿ ಬೆಳಗ್ಗೆ 9.30 ಗಂಟೆಗೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಕಲಾಮಂದಿರದವರೆಗೆ ಮೆರವಣಿಗೆಯನ್ನು ಏರ್ಪಡಿಸಲಾಗಿದೆ.

ಕಾರ್ಯಕ್ರಮವನ್ನು ಸಹಕಾರ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ವಿಧಾನಸಭಾ ಸದಸ್ಯ ಎಲ್. ನಾಗೇಂದ್ರ ವಹಿಸುವರು.

ಶ್ರೀ ಬಸವ ಕುಂಬಾರಗುಂಡಯ್ಯ ಸ್ವಾಮೀಜಿಗಳ ದಿವ್ಯ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಮುಖ್ಯ ಅತಿಥಿಗಳಾಗಿ ಮಹಾಪೌರರಾದ ಶಿವಕುಮಾರ್, ಲೋಕಸಭಾ ಸದಸ್ಯರಾದ ಪ್ರತಾಪ್ ಸಿಂಹ, ಶ್ರೀನಿವಾಸ್ ಪ್ರಸಾದ್ ಹಾಗೂ ಸುಮಲತಾ ಅಂಬರೀಶ್ ಭಾಗವಹಿಸುವರು. ಅತಿಥಿಗಳಾಗಿ ವಿಧಾನಸಭಾ ಶಾಸಕರಾದ ತನ್ವೀರ್ ಸೇಠ್, ಸಾರಾ ಮಹೇಶ್, ಜಿ.ಟಿ.ದೇವೇಗೌಡ, ಕೆ.ಮಹದೇವ್, ಹರ್ಷವರ್ಧನ್, ಅಶ್ವಿನ್‌ಕುಮಾರ್, ಹೆಚ್.ಪಿ.ಮಂಜುನಾಥ್, ಎಸ್.ಎ.ರಾಮದಾಸ್, ಡಾ.ಯತೀಂದ್ರ.ಎಸ್, ಅನಿಲ್‌ಕುಮಾರ್.ಸಿ ಹಾಗೂ ವಿಧಾನಪರಿಷತ್ತಿನ ಶಾಸಕರಾದ ಡಾ.ಡಿ.ತಿಮ್ಮಯ್ಯ, ಮರಿತಿಬ್ಬೇಗೌಡ, ಸಿ.ಎನ್.ಮಂಜೇಗೌಡ, ಎಚ್.ವಿಶ್ವನಾಥ್ ಹಾಗೂ ಮಧು ಜಿ.ಮಾದೇಗೌಡ ಒಳಗೊಂಡಂತೆ ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರು ಉಪಸ್ಥಿತರಿರುವರು. ಸಮಾರಂಭದ ಅತಿಥಿಗಳಾಗಿ ಪಾಲಿಕೆಯ ಉಪ ಮೇಯರ್ ಡಾ.ಜಿ.ರೂಪ ಹಾಗೂ ಮುಖ್ಯ ಭಾಷಣಕಾರರಾಗಿ ಚಾಮರಾಜನಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಮಹೇಶ್ ಹರವೆ ಭಾಗವಹಿಸುವರು. ಬೆಳಗ್ಗೆ 10 ಗಂಟೆಗೆ ಶ್ರೀಧರ್ ಮತ್ತು ತಂಡದವರಿಂದ ಸುಗಮ ಸಂಗೀತವನ್ನು ಆಯೋಜಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫೆ.19ಕ್ಕೆ ಛತ್ರಪತಿ ಶಿವಾಜಿ ಜಯಂತಿ



ಮೈಸೂರು, ಫೆ.16– ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಫೆ.19 ರಂದು ಮಧ್ಯಾಹ್ನ 12 ಗಂಟೆಗೆ ಕರ್ನಾಟಕ ಕಲಾಮಂದಿರದಲ್ಲಿ "ಛತ್ರಪತಿ ಶ್ರೀ ಶಿವಾಜಿ ಮಹಾರಾಜರ ಜಯಂತಿ" ಹಮ್ಮಿಕೊಳ್ಳಲಾಗಿದ್ದು, ಜಯಂತಿಯ ಅಂಗವಾಗಿ ಬೆಳಗ್ಗೆ 10 ಗಂಟೆಗೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಕಲಾಮಂದಿರದವರೆಗೆ ಮೆರವಣಿಗೆ ಹೊರಡಲಿದೆ.

ಕಾರ್ಯಕ್ರಮವನ್ನು ಸಹಕಾರ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಶಾಸಕ ಎಲ್. ನಾಗೇಂದ್ರ ವಹಿಸಲಿದ್ದು, ಮುಖ್ಯಅತಿಥಿಗಳಾಗಿ ಮೇಯರ್ ಶಿವಕುಮಾರ್, ಲೋಕಸಭಾ ಸದಸ್ಯರಾದ ಪ್ರತಾಪ್ ಸಿಂಹ, ಶ್ರೀನಿವಾಸ್ ಪ್ರಸಾದ್ ಹಾಗೂ ಸುಮಲತಾ ಅಂಬರೀಶ್ ಭಾಗವಹಿಸುವರು.

ಅತಿಥಿಗಳಾಗಿ ವಿಧಾನಸಭಾ ಶಾಸಕರಾದ ತನ್ವೀರ್ ಸೇಠ್, ಸಾರಾ ಮಹೇಶ್, ಜಿ.ಟಿ.ದೇವೇಗೌಡ, ಕೆ.ಮಹದೇವ್, ಹರ್ಷವರ್ಧನ್, ಅಶ್ವಿನ್ ಕುಮಾರ್, ಹೆಚ್.ಪಿ.ಮಂಜುನಾಥ್, ಎಸ್.ಎ.ರಾಮದಾಸ್, ಡಾ. ಯತೀಂದ್ರ .ಎಸ್, ಅನಿಲ್‌ಕುಮಾರ್ .ಸಿ ಹಾಗೂ ವಿಧಾನಪರಿಷತ್ತಿನ ಶಾಸಕರಾದ ಡಾ. ಡಿ.ತಿಮ್ಮಯ್ಯ, ಮರಿತಿಬ್ಬೇಗೌಡ, ಸಿ.ಎನ್.ಮಂಜೇಗೌಡ, ಎಚ್.ವಿಶ್ವನಾಥ್ ಹಾಗೂ ಮಧು ಜಿ.ಮಾದೇಗೌಡ ಒಳಗೊಂಡಂತೆ ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರು ಉಪಸ್ಥಿತರಿರುವರು.

ಬೆಳಗ್ಗೆ 10 ಗಂಟೆಗೆ ಶ್ರೀಕಂಠರಾವ್ ಮತ್ತು ತಂಡದವರಿಂದ ಸುಗಮ ಸಂಗೀತವನ್ನು ಆಯೋಜಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿಧ ತಾಲೂಕಿಗೆ ಲೋಕಾಯುಕ್ತರ ಭೇಟಿ

ಮೈಸೂರು, ಫೆ.16– ಕರ್ನಾಟಕ ಲೋಕಾಯುಕ್ತ ಮೈಸೂರು ಜಿಲ್ಲಾ ವ್ಯಾಪ್ತಿಯ ಪೊಲೀಸ್ ಅಧಿಕಾರಿಗಳು ಫೆ.21 ರಿಂದ 24 ರವರೆಗೆ ವಿವಿಧ ತಾಲೂಕುಗಳಿಗೆ ಭೇಟಿ ನೀಡಲಿದ್ದು, ಸಾರ್ವಜನಿಕರು ಅಹವಾಲುಗಳನ್ನು ಸಲ್ಲಿಸಬಹುದಾಗಿದೆ.


ಮೈಸೂರು ಜಿಲ್ಲೆಯ ತಾಲೂಕು ಕೇಂದ್ರಗಳಲ್ಲಿ, ಸಾರ್ವಜನಿಕ ಮತ್ತು ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಅಧಿಕೃತ ಕೆಲಸಗಳ ಅನಗತ್ಯ ವಿಳಂಬ, ಲಂಚದ ಹಣದ ಬೇಡಿಕೆ ಇತ್ಯಾದಿ ತೊಂದರೆಗಳನ್ನು ನೀಡುತ್ತಿರುವ ಬಗ್ಗೆ ಸಂಬಂಧಪಟ್ಟ ಸಾರ್ವಜನಿಕ ಸರ್ಕಾರಿ ಅಧಿಕಾರಿ, ನೌಕರರ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಅಡಿಯಲ್ಲಿ ಕ್ರಮಬದ್ಧವಾಗಿ ಭರ್ತಿಮಾಡಿದ ದೂರುಗಳನ್ನು ನಮೂನೆ 01 ರಲ್ಲಿ ಮತ್ತು 02 ರಲ್ಲಿ ಪ್ರಮಾಣ ಪತ್ರಗಳನ್ನು ಅಗತ್ಯ ದಾಖಲಾತಿಗಳೊಡನೆ ಸ್ವೀಕರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಫೆ.21 ರಂದು ಟಿ.ನರಸೀಪುರ ತಾಲೂಕು ಪಿಡಬ್ಲ್ಯೂಡಿ ಅತಿಥಿಗೃಹದಲ್ಲಿ, ಫೆ.22 ರಂದು ಕೆ.ಆರ್. ನಗರ ತಾಲೂಕು ಪಿಡಬ್ಲ್ಯೂಡಿ ಅತಿಥಿಗೃಹದಲ್ಲಿ, ಫೆ.23 ರಂದು ಮೈಸೂರು ನಗರ ಮತ್ತು ತಾಲೂಕು ವ್ಯಾಪ್ತಿಗೆ ಸಂಬಂಧಿಸಿದಂತೆ ಚಾಮುಂಡಿ ಅತಿಥಿಗೃಹ, ಜೆಎಲ್‌ಬಿ ರಸ್ತೆ, ಮೈಸೂರು ಇಲ್ಲಿ, ಫೆ.24 ರಂದು ಹುಣಸೂರು ತಾಲೂಕು ಪಿಡಬ್ಲ್ಯೂಡಿ ಅತಿಥಿಗೃಹದಲ್ಲಿ ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ದೂರು ಸಲ್ಲಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು, ಕರ್ತವ್ಯ ಲೋಪವೆಸಗುವ ಭ್ರಷ್ಟ ಸರ್ಕಾರಿ, ಸಾರ್ವಜನಿಕ ನೌಕರರ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ತೆಗೆದುಕೊಳ್ಳಲು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಕರ್ನಾಟಕ ಲೋಕಾಯುಕ್ತ ಮೈಸೂರು ವಿಭಾಗದ ಪೊಲೀಸ್ ಅಧೀಕ್ಷಕರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಇಂದು 87ನೇ ತ್ರಿಮೂರ್ತಿ ಶಿವಜಯಂತಿ ಮಹೋತ್ಸವ

ಮೈಸೂರು, ಫೆ.16– ನಗರದ ಯಾದವಗಿರಿಯಲ್ಲಿನ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ವತಿಯಿಂದ 87ನೇ ತ್ರಿಮೂರ್ತಿ ಶಿವಜಯಂತಿ ಮಹೋತ್ಸವವನ್ನು ಫೆ.17ರಂದು ಶುಕ್ರವಾರ ಬೆಳಗ್ಗೆ 8.30ಕ್ಕೆ ಆಯೋಜಿಸಲಾಗಿದೆ.

ಮೇಲುಕೋಟೆ ವಂಗೀಪುರಂ ನಂಬೀಮಠದ ಶ್ರೀ ಬಿ.ವಿ.ಇಳೈ ಆಳ್ವಾರ್ ಸ್ವಾಮೀಜಿಯವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಶಾಸಕ ಎಲ್.ನಾಗೇಂದ್ರ, ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಹಾಗೂ ಮಾಜಿ ಶಾಸಕ ವಾಸು ಭಾಗವಹಿಸಲಿದ್ದಾರೆ. ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಸಂಸ್ಥೆಯ ಮೈಸೂರು ಉಪವಲಯದ ಮುಖ್ಯ ಸಂಚಾಲಕಿ ರಾಜಯೋಗಿನಿ ಬಿಕೆ ಲಕ್ಷ್ಮೀಜಿಯವರು ವಹಿಸಲಿದ್ದಾರೆ. ಇದಕ್ಕೂ ಮೊದಲು 87 ಮಂದಿ ಮಹಿಳಾಮಣಿಗಳು 87 ಕಲಶಗಳನ್ನು ಹೊತ್ತು ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಇದರ ಜೊತೆಗೆ ಸ್ಪಟಿಕ ಲಿಂಗ ದರ್ಶನ ಹಾಗೂ ಆಧ್ಯಾತ್ಮಿಕ ಚಿತ್ರ ಪ್ರದರ್ಶನ ಇರುತ್ತದೆ. ಸಾರ್ವಜನಿಕರು ಇದರ ಸದುಪಯೋಗಪಡಿಸಿಕೊಳ್ಳಬೇಕೆಂದು ಹಿರಿಯ ಸಮರ್ಪಿತ ಸಹೋದರ ಬಿಕೆ ನರಸಿಂಹಣ್ಣ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ನಿಧನ



ಕೆ.ಶ್ರೀನಿವಾಸ್ ಮೂರ್ತಿ

ಮೈಸೂರು, ಫೆ16–ಕೆಂಪನಪಾಳ್ಯ ನಿವಾಸಿ, ನಿವೃತ್ತ ರೆವಿನ್ಯೂ ಇನ್ಸ್‌ಪೆಕ್ಟರ್ ಕೆ.ಶ್ರೀನಿವಾಸ್ ಮೂರ್ತಿ (90) ಇವರು ಇಂದು (ಗುರುವಾರ) ಮಧ್ಯಾಹ್ನ 3.30ಕ್ಕೆ ತಮ್ಮ ಸ್ವಗೃಹದಲ್ಲಿ ನಿಧನರಾದರು. ಮೃತರು ಪತ್ನಿ, ಪುತ್ರ ಕೆ.ಎಸ್.ದೇವಪ್ರಕಾಶ್ ಮತ್ತು ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಮತ್ತು ಅಪಾರ ಬಂಧುಗಳನ್ನು ಅಗಲಿದ್ದಾರೆ.

ಎಸ್.ಜಯಪ್ಪ




ಮೈಸೂರು, ಫೆ. 16– ಮೈಸೂರಿನ ಜೆಎಸ್‌ಎಸ್ ಪ್ರೌಢಶಾಲೆಯ ನಿವೃತ್ತ ಮುಖ್ಯ ಶಿಕ್ಷಕ, ನಗರ್ಲೆ ಗ್ರಾಮದ ನಿವಾಸಿ ಎಸ್. ಜಯಪ್ಪ(78) ಅವರು ಇಂದು ನಿಧನರಾದರು. ಮೃತರು ಪತ್ನಿ, ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದು ಅಂತ್ಯಕ್ರಿಯೆ ನಾಳೆ (ಫೆ. 17) ಮಧ್ಯಾಹ್ನ 1 ಗಂಟೆಗೆ ಲಲಿತಾದ್ರಿಪುರ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀಮತಿ ಸತ್ಯಭಾಮಾ ವೆಂಕಟೇಶ್ ಮೂರ್ತಿ



ಮೈಸೂರು, ಫೆ.16– ಮೈಸೂರಿನ ಜಯಲಕ್ಷ್ಮಿಪುರಂ ನಿವಾಸಿ ಶ್ರೀಮತಿ ಸತ್ಯಭಾಮಾ ವೆಂಕಟೇಶ್ ಮೂರ್ತಿ(86) ಅನಾರೋಗ್ಯದಿಂದ ಗುರುವಾರ ನಿಧನರಾದರು. ಮೃತರು ಇಬ್ಬರು ಪುತ್ರಿಯರು ಅಳಿಯ ಭಗವಾನ್ ರೋಗಶಾಸ್ತ್ರ ಪ್ರಯೋಗಾಲಯದ ಡಾ.ಎನ್. ಶ್ರೀರಾಮ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಫೆ.18(ಶನಿವಾರ) ರಂದು ಮಧ್ಯಾಹ್ನ ಗೋಕುಲಂನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸೂರ್ಯನಾರಾಯಣ ರಾವ್



ಮೈಸೂರು, ಫೆ.16–ಮೈಸೂರು ತಾಲೂಕು ಇನಾಂ ಉತ್ತನಹಳ್ಳಿ ನಿವಾಸಿ ಹಾಗೂ ವೀಣೆಶೇಷಣ್ಣ ಅವರ ಮೊಮ್ಮಗ ಸೂರ್ಯನಾರಾಯಣ ರಾವ್ ಇಂದು ಮುಂಜಾನೆ ನಿಧನರಾದರು. ಇವರಿಗೆ 83 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಕುಟುಂಬ ಸದಸ್ಯರಾದ ಶಶಿಕಲಾ ರಾಮಪ್ರಸಾದ್, ಶ್ರೀಮತಿ, ಸಿಜಿ.ಮೂರ್ತಿ, ಶಶಿಪ್ರಭಾ, ಮೇಘಾ, ಪ್ರವೀಣ್ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಸಂಜೆ 4 ಗಂಟೆಗೆ ಇನಾಂ ಉತ್ತನಹಳ್ಳಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ಆರ್.ಕ್ಷೇತ್ರದಲ್ಲಿ 'ಸ್ವನಿಧಿ' ಯೋಜನೆ ಪರಿಣಾಮಕಾರಿ ಜಾರಿಗೆ ಫೆ.20ರಿಂದ ನೋಂದಣಿ ಅಭಿಯಾನ

● ಶಾಸಕ ರಾಮದಾಸ್ ಮಾಹಿತಿ ● ಬೀದಿ ಬದಿ ವ್ಯಾಪಾರಿಗಳಿಗೆ ಸರ್ಕಾರಿ ಸವಲತ್ತು ಕಲ್ಪಿಸುವ ಮಹತ್ತರ ಕಾರ್ಯಕ್ರಮ

ಮೈಸೂರು, ಫೆ,16(ಎಂಟಿವೈ)– ಬೀದಿಬದಿ ವ್ಯಾಪಾರಿಗಳಿಗೆ ಆರ್ಥಿಕವಾಗಿ ನೆರವಾಗಲೆಂದು ಕೇಂದ್ರ ಸರ್ಕಾರದ 'ಸ್ವನಿಧಿ' ಯೋಜನೆಯನ್ನು ಕೆ.ಆರ್.ಕ್ಷೇತ್ರದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ನಿರ್ಧರಿಸಲಾಗಿದ್ದು, ಫೆ.20 ರಿಂದ 24ರವರೆಗೆ ನೋಂದಣಿ ಅಭಿಯಾನ ನಡೆಸಲಾಗುತ್ತದೆ ಎಂದು ಶಾಸಕ ಎಸ್.ಎ.ರಾಮದಾಸ್ ತಿಳಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿರುವ ಬೀದಿಬದಿ ವ್ಯಾಪಾರಿಗಳ ನೋಂದಣಿ ಕಾರ್ಯ ನಡೆದಿದೆ. ಬೀದಿ ಬದಿ, ತಳ್ಳುಗಾಡಿ, ಸಣ್ಣ ಸಣ್ಣ ವ್ಯಾಪಾರಿಗಳನ್ನು ಗುರುತಿಸಿ ಕೇಂದ್ರ ಸರ್ಕಾರದ ಸವಲತ್ತುಗಳನ್ನು ತಲುಪಿಸಲು ಈ ಕಾರ್ಯಕ್ರಮ ರೂಪಿಸಲಾಗಿದೆ. ಪ್ರಸಕ್ತ ದಿನದವರೆಗೆ 10205 ಅರ್ಜಿಗಳನ್ನು ಕ್ರೋಢೀಕರಿಸಲಾಗಿದೆ. ಅದರಲ್ಲಿ 9299 ಮಂಜೂರಾತಿ ದೊರಕಿದ್ದು, 8983 ಅರ್ಜಿದಾರರಿಗೆ ಸಾಲ ವಿತರಣೆಯಾಗಿರುತ್ತದೆ. ಕೇಂದ್ರ ಸರ್ಕಾರದ ಹಣಕಾಸು ಇಲಾಖೆಯ ನೆರವಿನೊಂದಿಗೆ ಯೋಜನೆ ಜಾರಿಯಾಗಿದ್ದು, ಈ ಸಂಬಂಧ ಈಗಾಗಲೇ 10205 ಮಂದಿ ಫಲಾನುಭವಿಗಳನ್ನು ಗುರುತಿಸಲಾಗಿದ್ದು, ಇನ್ನೂ 6 ಸಾವಿರ ಜನರ ಆಯ್ಕೆ ಕಾರ್ಯ ಪ್ರಗತಿಯ ಹಂತದಲ್ಲಿದೆ ಎಂದರು.



ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ಮುಂದಾಳತ್ವದಲ್ಲಿ ಎಲ್ಲಾ ಬ್ಯಾಂಕುಗಳಲ್ಲೂ ಯೋಜನೆಗೆ ಪೂರಕವಾದ ನೆರವು ನೀಡುವ ಕೌಂಟರ್‌ಗಳನ್ನು ತೆರೆಯಲಾಗುತ್ತಿದೆ. ಯೋಜನೆಯ ಮೂಲಕ ಮೊದಲ ಹಂತದಲ್ಲಿ 8783 ಫಲಾನುಭವಿಗಳಿಗೆ ಬಡ್ಡಿರಹಿತವಾಗಿ ತಲಾ 10 ಸಾವಿರ ರೂ. ಮೂಲ ಬಂಡವಾಳ ಒದಗಿಸಲಾಗುತ್ತದೆ. ಈ ಮೂಲಕ ಸಣ್ಣಪುಟ್ಟ ವ್ಯಾಪಾರಸ್ಥರು ಬಡ್ಡಿ ಹಾಗೂ ಮೀಟರ್ ಬಡ್ಡಿ ದಂಧೆಕೋರರಿಂದ ಕಿರುಕುಳ ಅನುಭವಿಸುವುದು ತಪ್ಪಲಿದೆ ಎಂದು ತಿಳಿಸಿದರು.

ಯೋಜನೆ ಫಲಾನುಭವಿಗಳಾಗಿ ಕಾರ್ಡ್ ಹೊಂದಿರುವವರಿಗೆ ಎರಡು ಲಕ್ಷ ರೂಪಾಯಿವರೆಗೆ ವಿಮಾ ಸೌಲಭ್ಯ ಒದಗಿಸಲಾಗಿದೆ. ಜೀವನದ ಖಾತ್ರಿಗಾಗಿ ಯೋಜನೆಯೊಳಗೆ ಈ ಎಲ್ಲಾ ಅಂಶಗಳನ್ನು ಅಳವಡಿಸಲಾಗಿದೆ. ಎಲ್ಲರ ಆರೋಗ್ಯ ಕಾಪಾಡುವುದರೊಂದಿಗೆ ಅವರನ್ನು ಮುಖ್ಯವಾಹಿನಿಗೆ ಕರೆತರುವುದು ಯೋಜನೆಯ ಉದ್ದೇಶವಾಗಿದೆ. ಸ್ವನಿಧಿ ಯೋಜನೆಯೊಟ್ಟಿಗೆ ಇ ಶ್ರಮ್ ಕಾರ್ಡ್ ಕೂಡ ನೀಡಲಾಗುತ್ತಿದೆ. ಮೊದಲ ಹಂತದಲ್ಲಿ 10 ಸಾವಿರ ಹಣಕಾಸು ನೆರವು ಪಡೆದವರಿಗೆ ಎರಡನೇ ಹಂತದಲ್ಲಿ 20 ಸಾವಿರ ರೂ. ಹಾಗೂ ನಂತರದಲ್ಲಿ 50 ಸಾವಿರ ರೂ. ನೀಡಲಾಗುವುದು. ಎಲ್ಲಾ ವ್ಯವಹಾರಗಳೂ ಬ್ಯಾಂಕ್ ಮುಖಾಂತರವೇ ನಡೆಯಲಿದೆಯಾದ್ದರಿಂದ ಮೋಸ, ಅನ್ಯಾಯಕ್ಕೆ ಅವಕಾಶವೇ ಇಲ್ಲವಾಗಿದೆ. ಪ್ರಧಾನಮಂತ್ರಿ ಸ್ವನಿಧಿ ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ಭರದ ಸಿದ್ಧತೆ ನಡೆದಿದೆ. ಕೇಂದ್ರ ಸರ್ಕಾರದ ರಾಜ್ಯ ಹಣಕಾಸು ಸಚಿವ ಭಗವದ್ ಕಿಶನ್ ರಾವ್ ಕಾರಡ್ ಅವರು ಮೈಸೂರಿನ ಕೃಷ್ಣರಾಜ ಕ್ಷೇತ್ರದಲ್ಲಿ ಒಟ್ಟಾರೆ ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ ಚಾಲನೆ ನೀಡಲಿದ್ದಾರೆ ಎಂದು ವಿವರಿಸಿದರು.

ಈಗಾಗಲೇ ಮೈಸೂರು ಮಹಾನಗರ ಪಾಲಿಕೆಯ 9 ವಲಯ ಕಚೇರಿಗಳಲ್ಲೂ ಪೊಲೀಸ್ ಇಲಾಖೆಯೊಂದಿಗೆ ವಿಡಿಯೋ ಚಿತ್ರೀಕರಣ ನಡೆಸಿ ಸಮೀಕ್ಷೆ ನಡೆಸಲಾಗಿದೆ. ಸ್ವನಿಧಿ ಯೋಜನೆಗೆ ಹೆಸರು ನೋಂದಣಿ ಅಭಿಯಾನಕ್ಕೆ ಫೆ.20ರಂದು ಬೆಳಗ್ಗೆ 11ಕ್ಕೆ ಸಂಸದ ಪ್ರತಾಪ್ ಸಿಂಹ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶಾಸಕ ಎಲ್.ನಾಗೇಂದ್ರ, ಮೇಯರ್ ಶಿವಕುಮಾರ್, ಉಪ ಮೇಯರ್ ಡಾ.ಜಿ.ರೂಪಾ ಇತರರು ಭಾಗವಹಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಚಾರ ಎಸಿಪಿ ಪರಶುರಾಮಪ್ಪ, ದೇವರಾಜ ವಿಭಾಗದ ಎಸಿಪಿ ಶಾಂತಮಲ್ಲಪ್ಪ ಹಾಗೂ ಪಾಲಿಕೆ ಅಧಿಕಾರಿಗಳಿದ್ದರು.

ವಿದ್ಯಾರ್ಥಿಗಳಿಗೆ ಬಾಲ್ಯದಿಂದಲೇ ಮೌಲ್ಯಶಿಕ್ಷಣ

ವೈದ್ಯ ಸಾಹಿತಿಯೂ ಆದ ಡಾ.ಯೋಗಣ್ಣ ಕರೆ

ಮೈಸೂರು, ಫೆ.16–ಪ್ರಾರಂಭದಿಂದಲೇ ಮಕ್ಕಳಿಗೆ ಸಮತೋಲನ ಆಹಾರ ನೀಡಿ ಆರೋಗ್ಯಕರ ದೇಹ ಮತ್ತು ಮೌಲ್ಯಗಳುಳ್ಳ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ತರಬೇತಿಯನ್ನು ನೀಡಬೇಕೆಂದು ವೈದ್ಯ ಸಾಹಿತಿಯೂ ಆದ ಸುಯೋಗ್ ಆಸ್ಪತ್ರೆ ಅಧ್ಯಕ್ಷರಾದ ಡಾ.ಎಸ್.ಪಿ.ಯೋಗಣ್ಣ ಕರೆನೀಡಿದರು.

ಅವರು ಫೆಬ್ರವರಿ 10ರ ಶುಕ್ರವಾರ ಸಂಜೆ ಸಿಂಧುವಳ್ಳಿಯ ಶ್ರೀ ಗುರು ವಿದ್ಯಾವಿಕಾಸ ಕೇಂದ್ರದ 21ನೇ ವಾರ್ಷಿಕ ಸಮಾರಂಭದಲ್ಲಿ ಶ್ರೀ ಮರಪ್ಪಸ್ವಾಮಿ ಧಾರ್ಮಿಕ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ವೈದ್ಯಕೀಯ ಕ್ಷೇತ್ರದ ಸಾಧನೆಗಾಗಿ ನೀಡಲಾದ "ಬಸವ ಭಾನು" ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು. ಧೂಮಪಾನ, ಮದ್ಯಪಾನ ಇತ್ಯಾದಿ ದುಶ್ಚಟಗಳ ಬಗ್ಗೆ ಅರಿವು ಮೂಡಿಸಿ ಅವುಗಳಿಂದ ದೂರವಿರುವಂತೆ ಎಚ್ಚರಿಕೆಯ ಮನೋವೃತ್ತಿಯನ್ನು ಬಾಲ್ಯದಿಂದಲೇ ವಿದ್ಯಾರ್ಥಿಗಳು ರೂಢಿಸಿಕೊಳ್ಳಲು ಪಾಲಕರು ಮತ್ತು ಶಿಕ್ಷಕರು ಪ್ರಧಾನ ಪಾತ್ರ ವಹಿಸಬೇಕೆಂದರು.

ಮಕ್ಕಳು ತಮ್ಮ ಬಹುತೇಕ ಸಮಯವನ್ನು ಶಾಲೆ ಮತ್ತು ಮನೆಯಲ್ಲಿ ಕಳೆಯುವುದರಿಂದ ಅವರು ಮೌಲ್ಯಗಳನ್ನು ಅಳವಡಿಸಿಕೊಳ್ಳುವಂತಾಗಲು ಪಾಲಕರು ಮತ್ತು ಶಿಕ್ಷಕರು ಹೆಚ್ಚಿನ ಪ್ರಯತ್ನ ವಹಿಸಬೇಕೆಂದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಜೆಎಸ್‌ಎಸ್ ಸಂಸ್ಕೃತ ಕಾಲೇಜಿನ ಪ್ರಾಂಶುಪಾಲರಾದ



ಡಾ.ಸುನಂದ ಭೂಪಾಲಿ ಮಾತನಾಡಿ, ಶಿಕ್ಷಣದಲ್ಲಿ ಜೀವನಮೌಲ್ಯಗಳನ್ನು ಅಳವಡಿಸಿಕೊಂಡಾಗ ಮಾತ್ರ ಶಿಕ್ಷಣಕ್ಕೆ ಮೆರಗು ಬರುವುದಲ್ಲದೆ ವಿದ್ಯಾರ್ಥಿಗಳಿಗೆ ಬದುಕುವ ಮಾರ್ಗವನ್ನು ಕಲಿಸಿಕೊಡುವ ಪ್ರಾಚೀನ ಗುರುಕುಲ ಮಾದರಿಯ ಶಿಕ್ಷಣ ಎಲ್ಲಾ ಕಾಲಕ್ಕೂ ಮಾದರಿ ಎಂದರು. ಕಾರ್ಯಕ್ರಮದಲ್ಲಿ ಬರಡನಪುರ ಮಠದ ಶ್ರೀ ಪರಶಿವಮೂರ್ತಿಗಳು ದಿವ್ಯ ಸಾನಿಧ್ಯ ವಹಿಸಿದ್ದರು. ಸಿಂಧುವಳ್ಳಿ ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಅನ್ನಪೂರ್ಣ, ಗ್ರಾಮದ ಮುಖಂಡರು, ಸಂಸ್ಥೆಯ ಅಧ್ಯಕ್ಷರಾದ ಶ್ರೀ ಸೋಮಶೇಖರ ಸ್ವಾಮೀಜಿ, ಕಾರ್ಯದರ್ಶಿ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿ ಹಾಗೂ ವಿದ್ಯಾರ್ಥಿಗಳ ಪೋಷಕರು ಪಾಲ್ಗೊಂಡಿದ್ದರು. ಇದೇ ಸಂದರ್ಭ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಮಾದಿಗ ಸಮನ್ವಯ ಸಭಾ ಅಸ್ತಿತ್ವಕ್ಕೆ

ಮೈಸೂರು, ಫೆ.16– ಪಿರಿಯಾಪಟ್ಟಣ ತಾಲೂಕು ಸನ್ಯಾಸಿಪುರ ಗ್ರಾಮದಲ್ಲಿ ಮಾದಿಗ ಸಮನ್ವಯ ಸಭಾ ಅಸ್ತಿತ್ವಕ್ಕೆ ತರಲಾಗಿದೆ. ಈ ಸಭಾ ಜ.25ರಂದು ಮೈಸೂರು ಜಿಲ್ಲಾ ನೋಂದಣಾಧಿಕಾರಿಗಳ ಕಚೇರಿಯಲ್ಲಿ ಸಹಕಾರಿ ಸಂಘಗಳ ಕಾಯ್ದೆಯಡಿ ನೋಂದಣಿಯಾಗಿದ್ದು, ಮಾದಿಗ ಸಮಾಜದ ಜನರ ಸಮಸ್ಯೆಗಳ ನಿವಾರಣೆಗೆ ಶ್ರಮಿಸಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕೆ.ಆರ್.ಕ್ಷೇತ್ರದಲ್ಲಿ ಮತ್ತೆ ಟಿಕೆಟ್ ಆಕಾಂಕ್ಷಿ; ಪಕ್ಷದ ನಿರ್ಧಾರಕ್ಕೆ ಬದ್ಧ: ರಾಮದಾಸ್

ಮೈಸೂರು, ಫೆ,16(ಎಂಟಿವೈ)– ರಾಜಕೀಯ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿ 30 ವರ್ಷ ಸಲ್ಲುತ್ತಿದೆ. ಬಿಜೆಪಿಗೆ ನಿಷ್ಠಾವಂತನಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದೇನೆ. ಕೆ.ಆರ್.ಕ್ಷೇತ್ರದಲ್ಲಿ ನಾನೂ ಟಿಕೆಟ್ ಆಕಾಂಕ್ಷಿಯಾಗಿದ್ದೇನೆ. ಪಕ್ಷ ಯಾರನ್ನೇ ಅಭ್ಯರ್ಥಿ ಮಾಡಿದರೂ ಅವರ ಪರವಾಗಿ ಕೆಲಸ ಮಾಡುತ್ತೇನೆ ಎಂದು ಶಾಸಕ ಎಸ್.ಎ.ರಾಮದಾಸ್ ತಿಳಿಸಿದ್ದಾರೆ. ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 2023ರ ಫೆ.5ಕ್ಕೆ ಬಿಜೆಪಿ ಸೇರಿ 3 ದಶಕ ಪೂರ್ಣಗೊಂಡಿದೆ. ಸಾಮಾನ್ಯ ಕಾರ್ಯಕರ್ತನಾಗಿ, ಎರಡು ಬಾರಿ ರಾಜ್ಯ ಯುವ ಮೋರ್ಚಾ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಪಕ್ಷದ ತೀರ್ಮಾನಕ್ಕೆ ಯಾವಾಗಲೂ ಬದ್ಧನಾಗಿರುತ್ತೇನೆ. ಯಾರೇ ಅಭ್ಯರ್ಥಿಯಾದರೂ ಗೆಲ್ಲಿಸುವ ಜವಾಬ್ದಾರಿ ನನ್ನ ಮೇಲೂ ಇದೆ. ಕೆ.ಆರ್.ಕ್ಷೇತ್ರದ ಜನರು ನನಗೆ ಪುನರ್‌ಜನ್ಮ ಕೊಟ್ಟಿದ್ದಾರೆ. ಅವರ ಋಣ ತೀರಿಸಲು ಹತ್ತು ಹಲವು ಕಾರ್ಯಕ್ರಮ ರೂಪಿಸಿದ್ದೇನೆ ಎಂದರು.

ಮುಂಬರುವ ಚುನಾವಣೆಗಾಗಿ ಅಗತ್ಯ ಸಿದ್ಧತೆಯನ್ನು ಮಾಡಿಕೊಳ್ಳಲಾಗುತ್ತಿದೆ. ಹಲವು ತಿಂಗಳಿಂದ ಬೂತ್ ಮಟ್ಟದಿಂದ ಪಕ್ಷ ಸಂಘಟಿಸುತ್ತಿದ್ದೇನೆ. 2.45 ಲಕ್ಷ ಮತದಾರರನ್ನು ಹೊಂದಿರುವ 11 ಸಾವಿರ ಪುಟವುಳ್ಳ ಪಟ್ಟಿ ಸಿದ್ಧಪಡಿಸಿದ್ದೇನೆ. 5 ಜನರಿಗೆ 1 ಸಮಿತಿ ರಚಿಸಿದ್ದೇನೆ. ಅಭಿವೃದ್ಧಿಯಲ್ಲಿ ಹಲವು ಪ್ರಥಮಗಳಿಗೆ ಕಾರಣನಾಗಿದ್ದೇನೆ. ಈ ಚುನಾವಣೆಯಲ್ಲಿಯೂ ಅಭಿವೃದ್ಧಿಯ ಮೇಲೆ ಮತ ಕೇಳುತ್ತೇನೆ ಎಂದರು.

ಪಕ್ಷದ ವರಿಷ್ಠರು ನನಗೆ ಕೃಷ್ಣರಾಜ ಕ್ಷೇತ್ರದೊಂದಿಗೆ ತಿ.ನರಸೀಪುರ ಕ್ಷೇತ್ರದ ಜವಾಬ್ದಾರಿಯನ್ನೂ ಕೊಟ್ಟಿದ್ದಾರೆ. ಈಗಾಗಲೇ ತಿ.ನರಸೀಪುರ ಕ್ಷೇತ್ರದಲ್ಲಿ ಪ್ರವಾಸ ಕೈಗೊಂಡು 30 ಪಂಚಾಯಿತಿಗಳಲ್ಲಿ ಅಧ್ಯಯನ ಮಾಡಿದ್ದೇನೆ. ಆ ಕ್ಷೇತ್ರದಲ್ಲೂ ಸಂಘಟನೆಗೆ ಮುಂದಾಗಿದ್ದೇನೆ. 2023ರ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಗೆಲ್ಲಿಸಲು ಬೇಕಾದ ಎಲ್ಲಾ ತಂತ್ರವನ್ನು ನಡೆಸಲಾಗುತ್ತಿದೆ. ಈ ಬಾರಿ ನರಸೀಪುರ ಕ್ಷೇತ್ರದಲ್ಲಿ ಕಮಲ ಅರಳಲಿದೆ ಎಂದು ಹೇಳಿದರು. ಟಿಪ್ಪು ಸುಲ್ತಾನ್ ಹೊಡೆದು ಹಾಕಿದಂತೆ ಸಿದ್ದರಾಮಯ್ಯರನ್ನು ಹೊಡೆದು ಹಾಕಿ ಎಂದು ಕರೆ ಕೊಟ್ಟಿರುವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿಕೆಗೆ ಪ್ರತಿಕ್ರಿಯಿಸಿದ ಎಸ್.ಎ.ರಾಮದಾಸ್, ವೈಯಕ್ತಿಕವಾಗಿ ಮಾತಾಡುವುದು ಸಲ್ಲದು. ಒಬ್ಬರನ್ನು ಮತ್ತೊಬ್ಬರಿಗೆ ಹೋಲಿಕೆಯೂ ಸರಿಯಲ್ಲ. ಇದು ಸಮಾಜದ ಹಿತದೃಷ್ಟಿಯಿಂದಲೂ ಅಪಾಯಕಾರಿ ಎಂದು ವಿಷಾದಿಸಿದರು.

ರಾಜ್ಯದಲ್ಲಿ ಒಟ್ಟಾರೆ 204.86 ದಶಲಕ್ಷ ಯೂನಿಟ್ ವಿದ್ಯುತ್ ಬೇಡಿಕೆ



ಬೆಂಗಳೂರು, ಫೆ. 16 (ಕೆಎಂಶಿ)–ರಾಜ್ಯದಲ್ಲಿ ಪ್ರತಿದಿನ 204.86 ದಶಲಕ್ಷ ಯುನಿಟ್ ವಿದ್ಯುತ್ ಬೇಡಿಕೆ ಇದೆ ಎಂದು ಪ್ರಾಥಮಿಕ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ವಿಧಾನಸಭೆಗೆ ತಿಳಿಸಿದರು. ಪ್ರಶ್ನೋತ್ತರ ವೇಳೆಯಲ್ಲಿ ರಾಜಾವೆಂಕಟಪ್ಪ ನಾಯಕ್ ಅವರ ಪ್ರಸ್ತಾವಕ್ಕೆ ಇಂಧನ ಸಚಿವ ಸುನಿಲ್ ಕುಮಾರ್ ಅವರ ಪರವಾಗಿ ಉತ್ತರಿಸಿದ ಸಚಿವರು, ಏಪ್ರಿಲ್ 2022ರಿಂದ 2023ರ ಜನವರಿ ಅಂತ್ಯದವರೆಗೆ 204.86 ದಶಲಕ್ಷ ಯುನಿಟ್ ಉತ್ಪಾದನೆಯಾಗುತ್ತಿದೆ. ಬೇಡಿಕೆಗೆ ಅನುಗುಣವಾಗಿ ವಿವಿಧ ಮೂಲಗಳಿಂದ ರೈತರಿಗೆ ವಿತರಣೆ ಮಾಡುವುದಾಗಿ ತಿಳಿಸಿದರು. ವಿವಿಧ ಮೂಲಗಳ ಜಲವಿದ್ಯುತ್‌ನಿಂದ 11247.27 ದಶಲಕ್ಷ ಯೂನಿಟ್ ವಿದ್ಯುತ್ ಪಡೆದುಕೊಳ್ಳಲಾಗುತ್ತಿದೆ. ಶಾಖೋತ್ಪನ್ನ ಮೂಲದಿಂದ 13129.51 ದಶಲಕ್ಷ ಯೂನಿಟ್ ಅನ್ನು ಪಡೆದುಕೊಳ್ಳಲಾಗುತ್ತಿದೆ. ಕೇಂದ್ರ ಸರ್ಕಾರಿ ಸ್ವಾಮ್ಯದ ವಿದ್ಯುತ್ ಉತ್ಪಾದನಾ ಘಟಕಗಳಿಂದ 13153.79 ದಶಲಕ್ಷ ಯೂನಿಟ್ ತೆಗೆದುಕೊಳ್ಳಲಾಗುತ್ತಿದೆ. ಅಸಂಪ್ರದಾಯಿಕ ಮೂಲಗಳಿಂದ 23727.34 ದಶಲಕ್ಷ ಯೂನಿಟ್, ಜಿಂದಾಲ್‌ನಿಂದ 798.83 ದಶಲಕ್ಷ ಯೂನಿಟ್‌ಗಳನ್ನು ಖರೀದಿಸಲಾಗುತ್ತಿದೆ. ಒಟ್ಟು 62687.54 ದಶಲಕ್ಷ ಯೂನಿಟ್‌ಗಳನ್ನು ರಾಜ್ಯ ಸರ್ಕಾರ ಸದ್ಯಕ್ಕೆ ತೆಗೆದುಕೊಳ್ಳುತ್ತಿದೆ. ಒಟ್ಟಾರೆ ರಾಜ್ಯದಲ್ಲಿ ವಿದ್ಯುತ್ ಕೊರತೆ ಎಳ್ಳಷ್ಟೂ ಇಲ್ಲ ಎಂದು ಸ್ಪಷ್ಟಪಡಿಸಿದರು.

ಒಂದನೇ ಪುಟದಿಂದ

ವಾಹನ ನಿಲುಗಡೆ ಕಾಮಗಾರಿ ಪೂರ್ಣ


ವ್ಯವಸ್ಥೆ, ಸಂಪ್ ಹಾಗೂ ಚರಂಡಿ ನಿರ್ಮಾಣ ಇನ್ನಿತರ ಕಾಮಗಾರಿಗಳನ್ನು ನಡೆಸಲಾಯಿತಾದರೂ ಫ್ಲೋರಿಂಗ್ ಕಾಮಗಾರಿಗೆ ನೆಲ ಅಗೆದಾಗ ಒಳಚರಂಡಿ ನೀರು ಉಕ್ಕಿ ಬರಲು ಆರಂಭವಾಗಿತ್ತು. ಜೊತೆಗೆ ಅಕಾಲಿಕ ಮಳೆ, ದಸರಾ ಮಹೋತ್ಸವ ಹೀಗೆ ವಿಭಿನ್ನ ಕಾರಣಗಳಿಂದಾಗಿ ಅಂತಿಮ ಹಂತದ ಕಾಮಗಾರಿಯೂ ವಿಳಂಬವಾಯಿತು.

ಆದಾಗ್ಯೂ ದಸರಾ ವೇಳೆ ಮೊದಲ ಹಂತದಲ್ಲಿ ಪಾರ್ಕಿಂಗ್ ಮಾಡಲು ಅವಕಾಶ ಕಲ್ಪಿಸಲಾಗಿತ್ತು. ಈಗಲೂ ವಾಹನಗಳನ್ನು ನಿಲ್ಲಿಸಬಹುದಾಗಿದ್ದು, ಯಾವುದೇ ಶುಲ್ಕ ನಿಗದಿಪಡಿಸಿಲ್ಲ. ಕಾಮಗಾರಿ ಪೂರ್ಣವಾಗಿ ಸಾರ್ವಜನಿಕರ ಸೇವೆಗೆ ಮುಕ್ತಗೊಳಿಸಿದ ನಂತರ ಶುಲ್ಕ ನಿಗದಿಪಡಿಸಬಹುದು. ಕೆಲ ಪ್ರಮುಖ ರಸ್ತೆಗಳಲ್ಲಿ ಪೇ ಅಂಡ್ ಪಾರ್ಕ್(ಶುಲ್ಕ ಪದ್ಧತಿ) ವ್ಯವಸ್ಥೆ ಜಾರಿಗೆ ತರುವ ಚಿಂತನೆ ಇದ್ದು, ಕೌನ್ಸಿಲ್ ಅನುಮೋದನೆ ಬಳಿಕ ಅನುಷ್ಠಾನಕ್ಕೆ ಬರಬಹುದು. ವರ್ಷದಿಂದ ವರ್ಷಕ್ಕೆ ವಾಹನಗಳ ಸಂಖ್ಯೆಯೂ ಹೆಚ್ಚಾಗುತ್ತಿರುವ ಕಾರಣ ಮಲ್ಟಿ ಲೆವೆಲ್ ಪಾರ್ಕಿಂಗ್ ಹೆಚ್ಚು ಪ್ರಯೋಜನಕಾರಿಯಾಗಲಿದೆ.

ಆಟೋನಗರ ನಿರ್ಮಾಣಕ್ಕೆ ಗುದ್ದಲಿ ಪೂಜೆ

ಮತ್ತು ಸಂಚಾರ ದಟ್ಟಣೆ ಇರುವುದರಿಂದ ವಾಹನಗಳ ರಿಪೇರಿಗೆ ಸ್ಥಳಾವಕಾಶವಿಲ್ಲದೇ ಮೆಕ್ಯಾನಿಕ್‌ಗಳು ಪರದಾಡುವಂತಾಗಿದ್ದು, ಕೆಲಸವಿಲ್ಲದೇ ಕೆಲವರು ಬೀದಿಗೆ ಬಂದಿದ್ದಾರೆ. ಅವರ ಕುಟುಂಬ ತೀವ್ರ ಆರ್ಥಿಕ ಸಂಕಷ್ಟದಲ್ಲಿರುವುದರಿಂದ ಆಟೋನಗರ ನಿರ್ಮಿಸಿ ಸ್ಥಳಾವಕಾಶ ನೀಡುವಂತೆ ಮೈಸೂರು ಸಿಟಿ ಮೋಟಾರು ವಾಹನಗಳ ಮೆಕ್ಯಾನಿಕ್ಸ್ ಸಂಘದ ಅಧ್ಯಕ್ಷ ಬಿ.ಎನ್.ಮಹೇಶ್ ರಾಜೇ ಅರಸ್ ಒತ್ತಾಯಿಸುತ್ತಿದ್ದರು. ಇದೀಗ ಮುಡಾದಿಂದ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲು ದಿನಾಂಕ ನಿಗದಿಪಡಿಸಿರುವುದರಿಂದ ನನೆಗುದಿಗೆ ಬಿದ್ದಿದ್ದ ಆಟೋನಗರ ಯೋಜನೆ ಸಾಕಾರಗೊಳ್ಳುವ ಕಾಲ ಕೂಡಿ ಬಂದಿದ್ದು, ವಾಹನಗಳ ಮೆಕ್ಯಾನಿಕ್‌ಗಳಲ್ಲಿ ಆತ್ಮವಿಶ್ವಾಸ ಮೂಡಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.2.2023 ಶುಕ್ರವಾರ, ಮಳೆ ನಕ್ಷತ್ರ: ಧನಿಷ್ಠ, 6.02.2023ರಿಂದ 18.02.2023
ಶ್ರೀ ಶುಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಪೂಜಾ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಶ್ರೀ ಅಮೃತೇಶ್ವರಸ್ವಾಮಿ ದೇವಸ್ಥಾನ :** 51ನೇ ಮಹಾಶಿವರಾತ್ರಿ ಪೂಜೆ, ಗಣಪತಿ ಹೋಮ, ಸ್ಥಳ: ದೇವಸ್ಥಾನ, ದಿವಾನ್ಸ್ ರಸ್ತೆ, ದೇವರಾಜ ಮೊಹಲ್ಲಾ, ಬೆಳಗ್ಗೆಯಿಂದ

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಮಹಾ ಶಿವರಾತ್ರಿ ಪ್ರಯುಕ್ತ ವಿಶೇಷ ಕಾರ್ಯಕ್ರಮಗಳು, ಬೆಳಗ್ಗೆ 9 ಗಂಟೆಗೆ ಶ್ರೀಚಕ್ರ ಪೂಜೆ, 10ಕ್ಕೆ ಗಿರಿಜಾ ಕಲ್ಯಾಣ, ಸಂಜೆ 6 ಗಂಟೆಗೆ ಶ್ರೀ ವೆಂಕಟಮುಖಿನ್ ಸಂಸ್ಮರಣೆ ಮತ್ತು ತ್ಯಾಗರಾಜ ಸ್ವಾಮಿ ಆರಾಧನೆ–ಪಂಚರತ್ನ ಕೃತಿಗಳ ಸಾಮೂಹಿಕ ಗಾಯನ, ಸ್ಥಳ: ಆಶ್ರಮದ ಆವರಣ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ :** ಸುವರ್ಣ ಮಹೋತ್ಸವ ದತ್ತಿ ಉಪನ್ಯಾಸ ಮತ್ತು ಬಡತನ ಮತ್ತು ಸುಸ್ಥಿರತೆ ಪುಸ್ತಕ ಬಿಡುಗಡೆ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸುವರ್ಣ ಮಹೋತ್ಸವ ವಿಶೇಷ ಉಪನ್ಯಾಸ : ಅಮೆರಿಕದ ಅನಾಲಿಕಟಿಕಲ್ ಮೆಕ್ಯಾನಿಕ್ಸ್ ಅಸೋಸಿಯೇಟ್ಸ್ ಸಂಸ್ಥೆ ಮುಖ್ಯ ತಂತ್ರಜ್ಞರು ಹಾಗೂ ಅಂತಾರಾಷ್ಟ್ರೀಯ ವೃತ್ತಿಪರ ಲೆಕ್ಕ ಪರಿಶೋಧಕರ ಸಂಘದ ಅಧ್ಯಕ್ಷ ಅನೂಪ್ ಎನ್.ಮೆಹ್ತಾ, ಅಧ್ಯಕ್ಷತೆ: ಬೆಂಗಳೂರು ಆದಾಯ ತೆರಿಗೆ ಆಯುಕ್ತ ಮಣಿಯನ್ ಮತಿವಣನ್, ಪುಸ್ತಕ ಬಿಡುಗಡೆ: ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಬೆಳಗ್ಗೆ 10.30ಕ್ಕೆ.

■ **ಶ್ರೀ ನಟರಾಜ ಪ್ರತಿಷ್ಠಾನ, ನಟರಾಜ ವಸತಿ ಪ್ರಥಮ ದರ್ಜೆ ಮಹಿಳಾ ಕಾಲೇಜು:** ಫ್ರೆಶರ್ಸ್ ಡೇ, ಸಾನ್ನಿಧ್ಯ: ಶ್ರೀ ಚಿದಾನಂದ ಸ್ವಾಮೀಜಿ, ಮುಖ್ಯ ಅತಿಥಿಗಳು: ಶೆವರನ್ ಲ್ಯಾಬೋರೇಟರಿ ವ್ಯವಸ್ಥಾಪಕ ನಿರ್ದೇಶಕ ಸ್ಯಾಮ್ ಚೆರಿಯನ್, ಅಧ್ಯಕ್ಷತೆ: ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ, ಉಪಸ್ಥಿತರು: ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ಶಾರದಾ, ಸ್ಥಳ: ಶ್ರೀ ನಟರಾಜ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ವಿಶ್ರಾಂತ ಕುಲಪತಿಗಳ ವೇದಿಕೆ, ಮೈಸೂರು ವಿವಿ ಅಲ್ಯೂಮ್ನಿ ಅಸೋಸಿಯೇಷನ್ :** ವಿದೇಶ ವಿಶ್ವವಿದ್ಯಾನಿಲಯಗಳು ಮತ್ತು ಭಾರತದಲ್ಲಿ ಉನ್ನತ ಶಿಕ್ಷಣದ ಭವಿಷ್ಯ ಕುರಿತು ವಿಚಾರ ಸಂಕಿರಣ, ಉದ್ಘಾಟನೆ : ಪಂಜಾಬ್ ವಿವಿ ವಿಶ್ರಾಂತ ಕುಲಪತಿ ಪ್ರೊ. ಎಸ್.ಎಸ್. ಚಹಾಲ್, ಉಪಸ್ಥಿತರು : ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಎಸ್.ಎನ್. ಹೆಗ್ಡೆ, ಮೈಸೂರು ವಿವಿ ಕುಲಪತಿ ಪ್ರೊ. ಹೆಚ್. ರಾಜಶೇಖರ್, ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್. ರಂಗಪ್ಪ, ಎಫ್‌ವಿಸಿಕೆ ಕಾರ್ಯದರ್ಶಿ ಪ್ರೊ. ಸುರೇಶ್ ಎಸ್. ಹೊನ್ನಪ್ಪಗೋಳ್, ಪ್ರೊ. ಎಸ್. ಶ್ರೀಕಂಠಸ್ವಾಮಿ, ಸ್ಥಳ : ವಿಜ್ಞಾನ ಭವನ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ

■ **ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ಸ್:** ಫೌಂಡೇಷನ್ ವಿಭಾಗದ ವಿದ್ಯಾರ್ಥಿಗಳಿಂದ ವುಡ್ ಪ್ರಿಂಟ್ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 11.30ರಿಂದ.

■ **ಮಹಾರಾಜ ತಾಂತ್ರಿಕ ಮಹಾವಿದ್ಯಾಲಯ, ತಾಂಡವಪುರ:** ಪುನಶ್ಚೇತನ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಕೋಜಿಕೋಡ್‌ನ ಪ್ರೊ.ಸಿ. ರಾಜು, ಆರ್ಕಿಟೆಕ್ಟ್ ಅಕಾಡೆಮಿ ಅಸೋಸಿಯೇಟ್ ಉಪಾಧ್ಯಕ್ಷ ಡಾ. ನವೀನ್ ಪಟೇಲ್, ಅಧ್ಯಕ್ಷತೆ: ಮಹಾರಾಜ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ. ಎಸ್. ಮುರಳಿ, ಸ್ಥಳ: ಮಹಾವಿದ್ಯಾಲಯ ಆವರಣ, ಮಧ್ಯಾಹ್ನ 1.45ಕ್ಕೆ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ :** ಜೆಎಸ್‌ಎಸ್ ಫಾರ್ಮಸಿ ಕಾಲೇಜು ಸುವರ್ಣ ಮಹೋತ್ಸವ ಸಮಾರಂಭ, ಉದ್ಘಾಟನೆ : ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ, ಮುಖ್ಯ ಅತಿಥಿಗಳು : ಸಂಸದ ಪ್ರತಾಪ್ ಸಿಂಹ, ಶಾಸಕ ತನ್ವೀರ್ ಸೇಠ್, ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯ ನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ಸ್ಥಳ: ಶ್ರೀ ರಾಜೇಂದ್ರ ಸಭಾಂಗಣ, ಸಂಜೆ 4ಕ್ಕೆ.

■ **ಫ್ಯಾಸಿಸಂ ಮತ್ತು ಜಾತಿ ನಿರ್ಮೂಲನೆಯಲ್ಲಿ ನಮ್ಮ ಕಾರ್ಯಭಾರಗಳು :** ವಿಚಾರ ಮಂಡನೆ : ಕಾಮ್ರೇಡ್ ಪಿ.ಜೆ. ಜೇಮ್ಸ್, ಪ್ರಾಸ್ತಾವಿಕ ಭಾಷಣ : ವಕೀಲ ಬಿ.ಆರ್. ರಂಗಸ್ವಾಮಿ, ಉದ್ಘಾಟನೆ : ಪ್ರಗತಿಪರ ಚಿಂತಕ ಪ್ರೊ. ಮಹೇಶ್ ಚಂದ್ರಗುರು, ಮುಖ್ಯ ಅತಿಥಿಗಳು : ಮೈಸೂರು ವಕೀಲರ ಸಂಘದ ಕಾರ್ಯದರ್ಶಿ ಎಸ್. ಉಮೇಶ್, ಕಾಮ್ರೇಡ್ ಬಿ. ರುದ್ರಯ್ಯ, ಉಗ್ರನರಸಿಂಹೇಗೌಡ, ಹೊಸಕೋಟೆ ಬಸವರಾಜು, ಅಧ್ಯಕ್ಷತೆ: ಕಾಮ್ರೇಡ್ ಕಂದೇಗಾಲ ಶ್ರೀನಿವಾಸ್, ಸ್ಥಳ: ರೋಟರಿ ಸಭಾ ಭವನ, ಜೆಎಲ್‌ಬಿ ರಸ್ತೆ, ಸಂಜೆ 4ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿಗಳ ಮಠ :** ಪಂಡಿತ್ ಶ್ರೀ ಪ್ರವೀಣಾಚಾರ್ ಹುನುಗುಂದ ಅವರಿಂದ ಭಗವದ್ಗೀತೆಯ 4 ಮತ್ತು 5ನೇ ಅಧ್ಯಾಯದ ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5ರಿಂದ.

■ **ಚಿನ್ಮಯ ಮಿಷನ್ :** ಕೃಷ್ಣರಾವ್ ಪ್ರಕಾಶ್ ಅವರಿಂದ ಬದುಕು ಮತ್ತು ಜೀವನ ಕುರಿತು ಉಪನ್ಯಾಸ, ಸ್ಥಳ: ಚಿನ್ಮಯ ಮಿಷನ್, ಮೈಸೂರು ಆಶ್ರಮದ ದತ್ತ ಸನ್ನಿಧಿ, ಯಜ್ಞಶಾಲೆ, ಸಂಜೆ 6ಕ್ಕೆ.

■ **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ :** ಮಹಾಶಿವರಾತ್ರಿಯ ಪ್ರಯುಕ್ತ ಹಿಮಾಚ್ಛಾದಿತ ಕೈಲಾಸ ಪರ್ವತದ ಮೇಲೆ 21 ಅಡಿ ಎತ್ತರದ ಅತ್ಯಾಕರ್ಷಕ ರುದ್ರಾಕ್ಷಿ ಶಿವಲಿಂಗ 3ಡಿ ಮಾದರಿಯಲ್ಲಿ, ವಿಶೇಷ ಆಕರ್ಷಣೆಗಳು : ಧ್ಯಾನದ ಗುಹೆ, ಆಧ್ಯಾತ್ಮಿಕ ಚಿತ್ರ ಪ್ರದರ್ಶನ, ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ, ವಿಶೇಷ ಉಪನ್ಯಾಸಗಳು, ಅನುಭೂತಿ ವಿಡಿಯೋ ಪ್ರದರ್ಶನ, ದ್ವಾದಶ ಜ್ಯೋತಿರ್ಲಿಂಗ ದರ್ಶನ, ಸ್ಥಳ: ಲಲಿತ ಮಹಲ್ ಅರಮನೆ ಮೈದಾನ, ಆಲನಹಳ್ಳಿ, ಸಂಜೆ 6.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಕನ್ನಡದ ಅನನ್ಯ ಲೇಖಕಿಯರು, ಲೇಖನ– ಪ್ರೊ.ಹೇಮಲತಾ ಎಚ್.ಎಂ., 6.40 ಅರಿವಿನ ಶಿಖರ, ಗಾಯನ– ಸದಾಶಿವ ಪಾಟೀಲ್, ನಿತಿನ್ ರಾಜಾರಾಂ ಶಾಸ್ತ್ರಿ, ವ್ಯಾಖ್ಯಾನ– ಡಾ. ಹೆಚ್.ಎಂ. ಕಲಾಶ್ರೀ, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ಶಿಕ್ಷಣ ಸಂಚಲನ", 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 9.30 ಗಾಂಧೀ ಸ್ಮೃತಿ, 10.00 ವಿ. ವಂಶಿಧರ್–ವೇಣುವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ– ಉಮೇಶ್ ಎಸ್.ಎಸ್., 1.20 ಭಾವಗೀತೆ– ಎನ್.ಆರ್. ವಿನಯ್ ಕುಮಾರ್, ಕೆ.ಜಿ.ಕನಕಲಕ್ಷ್ಮಿ, ಬಿ.ಎಸ್. ವಿಜಯರಾಘವನ್, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರಕುಮಾರ್, 3.00 ಅವಧರಿಸು ಬಾ ಅಮರನಾರೇಯಣ–ಕಾರ್ಯಕ್ರಮ ಸರಣಿ, ಸಂಶೋಧನೆ, ಆಲೇಖ ಮತ್ತು ಸಂಗೀತ ನಿರ್ದೇಶನ– ಟಿ.ಎಸ್. ವಸಂತಮಾಧವಿ ಪರಿಕಲ್ಪನೆ ಮತ್ತು ನಿರೂಪಣೆ–ಡಾ. ಎನ್. ರಘು, 4.00 ಮಹಿಳಾರಂಗ "ನನ್ನ ಕವಿತೆಯ ಕುರಿತು"–ಹೊಸ ತಲೆಮಾರಿನ ಕವಯತ್ರಿಯರ ಜೊತೆ ಮಾತುಕತೆ 4.30 ವೃತ್ತಿ ಮಾರ್ಗದರ್ಶನ–ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಪ್ರೊ.ಕೈಸರ್ ಜಹಾನ್ ಬೇಗಸ್ಮ್ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್ ವಾಣಿ, ಮಳೇ ಆಶ್ರಿತ ಕೃಷಿಯಲ್ಲಿನ ಅನುಭವ ಕುರಿತು ಮಹೇಶ್ ಅವರೊಂದಿಗೆ ಸಂದರ್ಶನ, 9.00 ರಸಮಂಜರಿ –ನಮ್ಮ ವಿವಾಹಗಳ ಶಾಸ್ತ್ರಬದ್ಧತೆ–ಮಾತನಾಡುತ್ತಾರೆ ಗಣಪತಿ ಭಟ್ ಸಂಕನಗುಂಡಿ, ಜಿ. ತೇಜಸ್ವಿನಿ ಅವರಿಂದ ಸಂಸ್ಕೃತದಲ್ಲಿ ಕಥೆ, 9.15 ಜನಪದ ಸಂಗೀತ

ಕಳೆದ ಸಾಲಿನ ಬಜೆಟ್ ಭರವಸೆಗಳೇ ಜಾರಿಯಾಗಿಲ್ಲ...

ಈಗ ಮತ್ತೆ ಬಜೆಟ್ ಬರೀ ಸುಳ್ಳು...ವಂಚನೆ...ಭಾಷಣ ಅಲ್ವೆ: ಡಿಕೆಶಿ



ಮೈಸೂರು, ಫೆ.16(ಎಂಟಿವೈ)– ರಾಜ್ಯದಲ್ಲಿ ಬಿಜೆಪಿ 2018ರ ಚುನಾವಣೆ ವೇಳೆ ನೀಡಿದ್ದ ಪ್ರಣಾಳಿಕೆಯಲ್ಲಿನ ಭರವಸೆಗಳಲ್ಲಿ ಇಂದಿಗೂ ಶೇ.95ರಷ್ಟು ಈಡೇರಿಸಿಲ್ಲ. ಸಿಎಂ ಬಸವರಾಜ ಬೊಮ್ಮಾಯಿ ಮಂಡಿಸಿದ ಕಳೆದ ಸಾಲಿನ ಬಜೆಟ್‌ನಂತೆ ಈ ಸಾಲಿನ ಬಜೆಟ್ ಕೂಡ ಸುಳ್ಳು, ವಂಚನೆ ಹಾಗೂ ಭಾಷಣಕ್ಕೆ ಮೀಸಲಾದ ಬಜೆಟ್ ಆಗಲಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಾಗ್ದಾಳಿ ನಡೆಸಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಬಿಜೆಪಿ ಸರ್ಕಾರ ಅಭಿವೃದ್ಧಿಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ನೀಡಿದ ಭರವಸೆಗಳ ಈಡೇರಿಸುವಲ್ಲಿ ವಿಫಲವಾಗಿದೆ. ಮಂಡಿಸುವ ಬಜೆಟ್‌ಗಳೆಲ್ಲಾ ಭಾಷಣಕ್ಕೆ, ಸುಳ್ಳು ಭರವಸೆಗೆ ಸೀಮಿತಗೊಳ್ಳುತ್ತಿದೆ. 2018ರ ಚುನಾವಣೆ ವೇಳೆ ಜನರಿಗೆ ನೀಡಿದ ಭರವಸೆಯನ್ನೇ ಈಡೇರಿಸಲು ಸಾಧ್ಯವಾಗಿಲ್ಲ. ಚುನಾವಣಾ ನೀತಿ ಸಂಹಿತೆ ಜಾರಿಯಾಗುವ ಮುನ್ನವೇ ಸುಳ್ಳು ಭರವಸೆಯ ಬಜೆಟ್ ಮಂಡನೆ ಮಾಡಲು ಮುಂದಾಗಿದ್ದಾರೆ. ಇದರಿಂದ ಕಳೆದ ವರ್ಷದಂತೆ ಈ ವರ್ಷದ ಬಜೆಟ್ ಬರೀ ಭಾಷಣಕ್ಕೆ ಸೀಮಿತಗೊಳ್ಳಲಿದೆ ಎಂದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 2023–24ನೇ ಸಾಲಿನ ಬಜೆಟ್ ಮಂಡನೆಗೂ ಮುನ್ನ ಹಿಂದಿನ ವರ್ಷದ ಬಜೆಟ್‌ನಲ್ಲಿ ಘೋಷಿಸಿದ ಕಾರ್ಯಕ್ರಮಗಳ ಅನುಷ್ಠಾನಗೊಳಿಸಿದ ರಿಪೋರ್ಟ್ ಕಾರ್ಡನ್ನು ನಾಡಿನ ಜನತೆಯ ಮುಂದಿಡಬೇಕು. ಮಾರ್ಚ್ ಮೊದಲ ವಾರ ಚುನಾವಣಾ ನೀತಿ ಸಂಹಿತೆ ಘೋಷಣೆಯಾಗಲಿದೆ. ತದನಂತರ ಬಿಜೆಪಿ ಮಂಡಿಸುವ ಬಜೆಟ್ ಕಾಗದದಲ್ಲಿ ಉಳಿಯಲಿದೆ ಹಿಂದಿನ ಬಜೆಟ್‌ನಲ್ಲಿ ಘೋಷಿಸಿದ ಕಾರ್ಯಕ್ರಮಗಳಲ್ಲಿ ಏನೇನು ಜಾರಿಗೆ ತಂದಿದ್ದೇನೆ ಎಂದು ಈ ವರ್ಷದ ಬಜೆಟ್ ಮಂಡನೆಗೂ ಮುನ್ನ ತಿಳಿಸಿದರೆ ಜನರಿಗೆ ಅರ್ಥವಾಗುತ್ತದೆ. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿನ ಬೆಳೆ ಸಾಲ ಮನ್ನಾ ಮಾಡಲಿಲ್ಲ. ಕನಿಷ್ಠ ಬೆಂಬಲ ಬೆಲೆ ಯೋಜನೆ, ರೈತರ ಆದಾಯ ಒಂದೂವರೆ ಪಟ್ಟು ಹೆಚ್ಚಿಸಲಿಲ್ಲ. 5 ಸಾವಿರ ಕೋಟಿ ಆವರ್ತ ನಿಧಿ ಎಲ್ಲಿಟ್ಟಿದ್ದಾರೆ, ರೈತರ ಪಂಪ್ ಸೆಟ್‌ಗೆ 10 ಗಂಟೆ ತ್ರಿಫೇಸ್ ವಿದ್ಯುತ್ ಯಾಕೇ ಪೂರೈಸಲಿಲ್ಲ ಎಂದು ಪ್ರಶ್ನಿಸಿದರು.

ಸ್ಲಂ ಮುಕ್ತ ರಾಜ್ಯ ಎಲ್ಲೋಯ್ತು: 2022ರ ಬಜೆಟ್‌ನಲ್ಲಿ ಘೋಷಿಸಿದ್ದ 2.5 ಲಕ್ಷ ಕೋಟಿ ರೂ, ನಲ್ಲಿ 1.4 ಲಕ್ಷ ಕೋಟಿ ಖರ್ಚು ಮಾಡಿದ್ದೇವೆ ಎಂದು ಹೇಳಿ ಕೊಂಡಿದ್ದಾರೆ. ರಾಜ್ಯವನ್ನು ಗುಡಿಸಲು ಮುಕ್ತ ಹಾಗೂ ಸ್ಲಂ ಮುಕ್ತ ನಗರ ಮಾಡುವುದಾಗಿ ಭರವಸೆ ನೀಡಿದ್ದರು. ಆ ಯೋಜನೆ ಏನಾಯ್ತು. ಬಡವರು, ಕಾರ್ಮಿಕರು, ದಲಿತರ ಏಳಿಗೆಗೆ ಯಾವುದೇ ಯೋಜನೆಯನ್ನೂ ಜಾರಿಗೆ ತರಲಿಲ್ಲ. ಎಸ್‌ಸಿ, ಎಸ್‌ಟಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಕೊಡಲಿಲ್ಲ. ಇದು ಪಠ್ಯದಲ್ಲಿ ಇತಿಹಾಸ ತಿರುಚಿದ ಭ್ರಷ್ಟ ಸರ್ಕಾರ. ಬಿಜೆಪಿ ಸರ್ಕಾರದ ಪಾಪದ ಪುರಾಣಗಳ ಬಗ್ಗೆ 170 ಪ್ರಶ್ನೆಗಳನ್ನು ಕೇಳಿದ್ದೇವೆ. ಇದುವರೆಗೆ ಒಂದಕ್ಕೂ ಉತ್ತರವಿಲ್ಲ. ಕೊಟ್ಟ ಮಾತು ಉಳಿಸಿಕೊಳ್ಳಲಾಗದಿದ್ದ ಮೇಲೆ ಯಾಕೇ ಅಧಿಕಾರದಲ್ಲಿ ಇರಬೇಕು. ಬಸವಣ್ಣನವರ ಹೆಸರನ್ನು ಇಟ್ಟುಕೊಂಡಿರುವ ಸಿಎಂ ಬಸವರಾಜ ಬೊಮ್ಮಾಯಿ ನುಡಿದಂತೆ ನಡೆದಿದ್ದೇವೆ ಎಂದು ಧೈರ್ಯದಿಂದ ಜನರ ಮುಂದೆ ಹೇಳಲಿ ಎಂದು ಸವಾಲು ಹಾಕಿದರು. ಚುನಾವಣಾ ಬಜೆಟ್ ಮಂಡಿಸಿ ಜನರಿಗೆ ಮಂಕುಬೂದಿ ಎರಚಲು ಹೊರಟಿದ್ದಾರೆ. ಆಯವ್ಯಯ ಮಂಡಿಸಿದ ಮೇಲೆ ಯಾವ ರೀತಿ ಜನರಿಗೆ ಮೋಸ ಮಾಡಲಾಗುತ್ತದೆ ಎನ್ನುವುದನ್ನು ತಿಳಿಸುತ್ತೇವೆ. ಜನರಿಗೆ ಕೊಟ್ಟ ಭರವಸೆ ಈಡೇರಿಸದ ಸರ್ಕಾರ ಜನರ ಬಳಿಗೆ ಬರುತ್ತಿದೆ. ಜನರೇ ತೀರ್ಮಾನ ಮಾಡಲಿದ್ದಾರೆ ಎಂದರು.

ಸರ್ವಿಸ್ ರಸ್ತೆ ಇಲ್ಲದಿದ್ದರೆ ಟೋಲ್ ಸಂಗ್ರಹ ಯಾಕೆ?: ಮೈಸೂರು–ಬೆಂಗಳೂರು ನಡುವಿನ ದಶಪಥ ರಸ್ತೆಯಲ್ಲಿ ಸರ್ವಿಸ್ ರಸ್ತೆ ನಿರ್ಮಿಸಿ ಟೋಲ್ ಸಂಗ್ರಹಿಸಬೇಕು. ಸರ್ವಿಸ್ ರಸ್ತೆ ನಿರ್ಮಾಣ ಮಾಡುವವರೆಗೂ ಉಚಿತ ಸೇವೆ ನೀಡಬೇಕು. ಬಡವರು, ಕಾರ್ಮಿಕರು, ರೈತರು, ಗ್ರಾಮೀಣ ಜನರು 250 ರೂ. ನೀಡಿ ಸಂಚರಿಸಲಾಗುತ್ತದೆಯೇ? ಪೆಟ್ರೋಲ್ ದರ ದುಬಾರಿಯಾಗಿದೆ. 10 ಸಾವಿರ ಜನರು ಉದ್ಯೋಗ ಕಳೆದುಕೊಂಡಿದ್ದಾರೆ. ಈ ಬಗ್ಗೆ ಯಾಕೇ ಸಂಸದರಾದ ಪ್ರತಾಪಸಿಂಹ, ವಿ. ಶ್ರೀನಿವಾಸ ಪ್ರಸಾದ್ ಸೇರಿದಂತೆ ಬಿಜೆಪಿ ನಾಯಕರು ಮೌನವಾಗಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

2014ರಲ್ಲಿ ಮೈಸೂರಿಗೆ ಬಂದಿದ್ದ ನರೇಂದ್ರ ಮೋದಿ ಅವರು ಮೈಸೂರನ್ನು ಪ್ಯಾರಿಸ್ ಮಾಡುವುದಾಗಿ ಘೋಷಿಸಿದ್ದರು. ಮೋದಿ ಅವರಿಗೆ ಕೈ ಮುಗಿದು ಕೇಳುತ್ತೇನೆ. ಪ್ಯಾರೀಸ್ ರೀತಿ ಮಾಡುವುದು ಬೇಡ. ಅಲ್ಲಿರುವಂತೆ ಒಂದೇ ಒಂದು ರಸ್ತೆ ನಿರ್ಮಿಸುವಂತೆ ಒತ್ತಾಯಿಸಿದರು. ಪ್ರತಾಪಸಿಂಹ ಮೈಸೂರು ಜನತೆ ಕಿವಿ ಮೇಲೆ ಹೂ ಇಟ್ಟುಕೊಂಡಿಲ್ಲ ಎಂಬುದನ್ನು ತಿಳಿದುಕೊಳ್ಳಿ ಎಂದು ಕುಟುಕಿದರು. ಅವರೇ, ಕುಲಪತಿ ಹುದ್ದೆಗೆ 5ರಿಂದ 10 ಕೋಟಿ ರೂ. ಕೊಡಬೇಕು ಎಂದು ಹೇಳಿದ್ದಾರೆ. ಅವರ ಧೈರ್ಯವನ್ನು ಮೆಚ್ಚುತ್ತೇನೆ. ಈ ಆರೋಪದ ವಿರುದ್ಧ ಸಚಿವರು ಯಾಕೇ ಮೌನವಾಗಿದ್ದಾರೆ. ರಾಜ್ಯಪಾಲರು ಇದಕ್ಕೆ ಉತ್ತರ ಕೊಡಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ, ಎಐಸಿಸಿ ಉಸ್ತುವಾರಿ ರೋಸಿ ಜಾನ್, ಮಾಜಿ ಸಚಿವರಾದ ಹೆಚ್.ಎಂ. ರೇವಣ್ಣ, ರಾಣಿ ಸತೀಶ್, ವಿಧಾನಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ದಿನೇಶ್ ಗೂಳಿಗೌಡ, ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ಆರ್.ಧರ್ಮಸೇನ, ಎಐಸಿಸಿ ವಕ್ತಾರೆ ಐಶ್ವರ್ಯ ಮಹದೇವ್, ಕೆಪಿಸಿಸಿ ವಕ್ತಾರರಾದ ಎಂ.ಲಕ್ಷ್ಮಣ್, ಹೆಚ್.ಎ.ವೆಂಕಟೇಶ್, ರಾಜ್ಯಪ್ರಧಾನ ಕಾರ್ಯದರ್ಶಿ ಸೂರಜ್ ಹೆಗಡೆ, ಸೇವಾದಳದ ಮಾಜಿ ಅಧ್ಯಕ್ಷೆ ಪ್ಯಾರಿಜಾನ್, ಮೈಸೂರು ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಮೈಸೂರು ನಗರ ಅಧ್ಯಕ್ಷ ಆರ್. ಮೂರ್ತಿ ಹಾಗೂ ಇನ್ನಿತರರು ಇದ್ದರು.

ನಾಳೆ ಭಾರತ ತಲುಪಲಿರುವ ದಕ್ಷಿಣ ಆಫ್ರಿಕಾದ 12 ಚೀತಾಗಳು




ನವದೆಹಲಿ: ದಕ್ಷಿಣ ಆಫ್ರಿಕಾದಿಂದ ಮತ್ತೆ 12 ಚೀತಾಗಳು ಭಾರತಕ್ಕೆ ಆಗಮಿಸುತ್ತಿವೆ. ಫೆ.18ರಂದು ಚೀತಾಗಳು ಭಾರತಕ್ಕೆ ಬರಲಿವೆ ಎಂದು ಕೇಂದ್ರ ಪರಿಸರ ಖಾತೆ ಸಚಿವ ಭೂಪೇಂದ್ರ ಯಾದವ್ ಹೇಳಿದ್ದಾರೆ.

ಚೀತಾ ಮರು ಪರಿಚಯಿಸುವ ಯೋಜನೆಯಡಿಯಲ್ಲಿ ಪ್ರಧಾನಿ ಮೋದಿ ಅವರು 2022ರ ಸೆಪ್ಟೆಂಬರ್ 17ರಂದು ತಮ್ಮ 72ನೇ ಜನ್ಮದಿನದಂದು ನಮೀಬಿಯಾ ದಿಂದ ತಂದ 8 ಚೀತಾಗಳನ್ನು ಮಧ್ಯಪ್ರದೇಶದ ಕುನು ರಾಷ್ಟ್ರೀಯ ಉದ್ಯಾನವನಕ್ಕೆ ಬಿಟ್ಟಿದ್ದರು

ಆಗ ತಂದುಬಿಟ್ಟಿದ್ದ ಚೀತಾಗಳು ಕುನು ಉದ್ಯಾನವನದಲ್ಲಿ ಪ್ರತಿ 3–4 ದಿನಗಳಿಗೊಮ್ಮೆ ಬೇಟೆಯಾಡುತ್ತಿದ್ದು, ಆರೋಗ್ಯವಾಗಿವೆ. ಆದರೆ ಈ ಪೈಕಿ ಒಂದು ಚೀತಾಗೆ ಕ್ರಿಯಾಟಿನ್ ಮಟ್ಟ ಹೆಚ್ಚಾಗಿ ಅನಾರೋಗ್ಯಕ್ಕೆ ತುತ್ತಾಗಿತ್ತು. ಚಿಕಿತ್ಸೆ ಬಳಿಕ ಆ ಚೀತಾ ಸುಧಾರಿಸಿಕೊಂಡಿದೆ.

ಪ್ರೊ. ಮುಜಾಫರ್ ಅಸಾದಿ ಮೈಸೂರು ವಿವಿ ಹಂಗಾಮಿ ಕುಲಪತಿ

ಮೈಸೂರು, ಫೆ.16(ಆರ್‌ಕೆ)– ಮೈಸೂರು ವಿಶ್ವವಿದ್ಯಾನಿಲಯದ ಹಂಗಾಮಿ ಕುಲಪತಿಯಾಗಿ ಕಲಾ ನಿಕಾಯದ ಡೀನ್ ಪ್ರೊ. ಮುಜಾಫರ್ ಹೆಚ್. ಅಸಾದಿ ಅವರನ್ನು ಸರ್ಕಾರ ನೇಮಿಸಿದೆ.



ಫೆ.17 ರಿಂದ ಜೂನ್ 30 ರವರೆಗೆ ಅಥವಾ ಕುಲಪತಿಗಳ ನೇಮಕವಾಗುವವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಹಂಗಾಮಿ ಕುಲಪತಿಯಾಗಿ ಸೇವೆ ಸಲ್ಲಿಸುವಂತೆ ರಾಜ್ಯಪಾಲರ ಅಧೀನ ಕಾರ್ಯದರ್ಶಿ ಎನ್. ಶಿವಕುಮಾರ್ ಅಧಿಸೂಚನೆ ಹೊರಡಿಸಿದ್ದಾರೆ.

ಪ್ರಸ್ತುತ ಹಂಗಾಮಿ ಕುಲಪತಿ ಪ್ರೊ. ಹೆಚ್.ರಾಜಶೇಖರ್ ಅವರ ಅಧಿಕಾರಾವಧಿಯು ಫೆ.19 ಕ್ಕೆ ಅಂತ್ಯವಾಗಲಿದ್ದು, ಫೆ.18 ಮತ್ತು 19 ರಂದು ರಜಾ ದಿನಗಳಾಗಿರುವುದರಿಂದ ಫೆ.17 ರಂದು ಮಧ್ಯಾಹ್ನ ಅಧಿಕಾರ ವಹಿಸಿಕೊಳ್ಳುವಂತೆ ಪ್ರೊ. ಅಸಾದಿ ಅವರಿಗೆ ಆದೇಶದಲ್ಲಿ ತಿಳಿಸಲಾಗಿದೆ.

2022ರ ನವೆಂಬರ್ 15 ರಂದು ಕುಲಪತಿಗಳಾಗಿದ್ದ ಪ್ರೊ. ಜಿ. ಹೇಮಂತ್‌ಕುಮಾರ್ ಅವರ ಸೇವಾವಧಿ ಅಂತ್ಯಗೊಂಡಿದ್ದ ಹಿನ್ನೆಲೆಯಲ್ಲಿ ಸರ್ಕಾರವು ವಾಣಿಜ್ಯ ನಿಕಾಯದ ಡೀನ್ ಪ್ರೊ ಹೆಚ್. ರಾಜಶೇಖರ್ ಅವರನ್ನು ಮೈಸೂರು ವಿಶ್ವವಿದ್ಯಾನಿಲಯದ ಹಂಗಾಮಿ ಕುಲಪತಿಯನ್ನಾಗಿ ನೇಮಕ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಶ್ರೀ ಮರಳೇಶ್ವರ ದೇವಸ್ಥಾನದಲ್ಲಿ ಮಹಾಶಿವರಾತ್ರಿ

ಮೈಸೂರು, ಫೆ.16–ಮೈಸೂರಿನ ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿರುವ ಶ್ರೀ ಮರಳೇಶ್ವರ ದೇವಾಸ್ಥಾನದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಫೆ.18ರ ಶನಿವಾರದಂದು ಬೆಳಗ್ಗೆ 9.00ಗಂಟೆಗೆ ಗುರು ಪ್ರಾರ್ಥನೆ, ಗಣಪತಿ ಹೋಮ, ಪುಣ್ಯವಚನ, ಕಳಸ ಪ್ರತಿಷ್ಠಾಪನೆ, ನವಗ್ರಹ ಹೋಮ, ಮೃತ್ಯುಂಜಯ ಹೋಮ, ಸುಬ್ರಮಣ್ಯ ಹೋಮ, ದುರ್ಗಾ ಹೋಮ ಏರ್ಪಡಿಸಲಾಗಿದೆ.

12.30ಕ್ಕೆ ಪೂರ್ಣಾಹುತಿ ನಡೆಯಲಿದ್ದು, ನಂತರ ಮಹಾಮಂಗಳಾರತಿ ಹಾಗೂ ಪ್ರಸಾದ ವಿನಿಯೋಗವಿದೆ. ಫೆ.19 ರಂದು 11.00 ಗಂಟೆಗೆ ಅನ್ನ ಸಂತರ್ಪಣೆ ಇರಲಿದೆ ಎಂದು ದೇವಸ್ಥಾನ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ಕೊಡಗಿನ ಎರಡು ಬೆಟ್ಟಗಳಲ್ಲಿ ಕಾಡ್ಗಿಚ್ಚು; ನೂರಾರು ಎಕರೆ ವನ್ಯ ಸಂಪತ್ತು ಭಸ್ಮ

ಮಡಿಕೇರಿ, ಫೆ.16– ಕೊಡಗಿನ ಎರಡು ಬೆಟ್ಟಗಳಲ್ಲಿ ಗುರುವಾರ ರಾತ್ರಿ ಕಾಣಿಸಿಕೊಂಡ ಕಾಡ್ಗಿಚ್ಚಿನಿಂದಾಗಿ ನೂರಾರು ಎಕರೆ ವನ್ಯ ಸಂಪತ್ತು ಸುಟ್ಟು ಭಸ್ಮವಾಗಿದೆ.

ಮಡಿಕೇರಿ ತಾಲೂಕಿನ ನಿಶಾನಿ ಬೆಟ್ಟ ಮತ್ತು ಸೋಮವಾರಪೇಟೆ ತಾಲೂಕಿನ ಕೋಟೆ ಬೆಟ್ಟದಲ್ಲಿ ಇಂದು ರಾತ್ರಿ ಹಠಾತ್ತನೇ ಬೆಂಕಿ ಕಾಣಿಸಿಕೊಂಡಿದ್ದು, ಕ್ಷಣಾರ್ಧದಲ್ಲಿ ಗಾಳಿಗೆ ಹರಡಿದ ಬೆಂಕಿಯಿಂದಾಗಿ ನೂರಾರು ಎಕರೆ ವನ್ಯ ಸಂಪತ್ತು ಸುಟ್ಟು ಭಸ್ಮವಾಗಿದ್ದು, ಅರಣ್ಯ ಇಲಾಖೆ ಸಿಬ್ಬಂದಿ ಬೆಂಕಿ ನಂದಿಸಲು ಹರಸಾಹಸ ಪಡುತ್ತಿದ್ದಾರೆ. ಮಧ್ಯರಾತ್ರಿ ವೇಳೆ ಮಡಿಕೇರಿ ತಾಲೂಕಿನ ನಿಶಾನಿ ಬೆಟ್ಟದಲ್ಲಿ ಬೆಂಕಿ ನಂದಿಸುವಲ್ಲಿ ಅರಣ್ಯ ಸಿಬ್ಬಂದಿ ಯಶಸ್ವಿಯಾಗಿದ್ದು, ಸೋಮವಾರಪೇಟೆ ತಾಲೂಕಿನ ಕೋಟೆ ಬೆಟ್ಟದಲ್ಲಿ ಬೆಂಕಿ ನಂದಿಸುವ ಕಾರ್ಯಾಚರಣೆ ಪತ್ರಿಕೆ ಅಚ್ಚಿಗೆ ಹೋಗುವ ವೇಳೆಯಲ್ಲೂ ಮುಂದುವರೆದಿತ್ತು.

ಕಾನೂನು ಅರಿವಿದ್ದರೆ ಉತ್ತಮ ಬದುಕು ಸಾಧ್ಯ

ಕಾನೂನು ನೆರವು ಅಭಿರಕ್ಷೆ ಕುರಿತು ಹಮ್ಮಿಕೊಂಡಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ನ್ಯಾ. ಜಿ.ಎಸ್.ಸಂಗ್ರೇಶಿ ಅಭಿಮತ

ಮೈಸೂರು, ಫೆ.16– ಕ್ಷಣ ಮಾತ್ರದ ತಪ್ಪಿನಿಂದ ಕಾರಾಗೃಹಕ್ಕೆ ಬರುವಂತಾಗುತ್ತದೆ. ಆದರೆ ಇಲ್ಲಿ ಬಂದ ನಂತರ ಭವಿಷ್ಯದ ಬದುಕಿಗೆ ನಿಮ್ಮನ್ನು ನೀವು ಸಜ್ಜುಗೊಳಿಸಿಕೊಳ್ಳಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಜಿ.ಎಸ್.ಸಂಗ್ರೇಶಿ ತಿಳಿಸಿದರು.



ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮೈಸೂರು ಹಾಗೂ ಕೇಂದ್ರ ಕಾರಾಗೃಹದ ಸಹಯೋಗದೊಂದಿಗೆ ಕಾರಾಗೃಹದ ಬಂಧಿ ನಿವಾಸಿಗಳಿಗೆ ಕಾನೂನು ನೆರವು ಅಭಿರಕ್ಷೆ ಕುರಿತು ಹಮ್ಮಿಕೊಂಡಿದ್ದ ಉಪನ್ಯಾಸ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಸಮಾಜದಲ್ಲಿ ಒಳ್ಳೆಯ ನಾಗರಿಕರಾಗಿ ಬದುಕಬೇಕು. ಅದಕ್ಕೆ ಕಾನೂನಿನ ಅರಿವು ಬಹಳ ಮುಖ್ಯ. ಕಾನೂನಿನ ಅರಿವನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ನೀಡುತ್ತಿದ್ದು, ಅದನ್ನು ತಿಳಿದು ಒಳ್ಳೆಯ ಬದುಕು ಹಾಗೂ ಉತ್ತಮ ಸಮಾಜವನ್ನು ನಿರ್ಮಾಣ ಮಾಡಲು ಸಲಹೆ ನೀಡಿದರು. ಪಶ್ಚಾತಾಪಕ್ಕಿಂತ ಪ್ರಾಯಶ್ಚಿತ್ತ ಮತ್ತೊಂದಿಲ್ಲ ಎಂದು ಹೇಳುತ್ತಾ ಮನಃ ಪರಿವರ್ತನೆ ಹೊಂದಿ ಒಳ್ಳೆಯ ಬದುಕು ಕಟ್ಟಿಕೊಳ್ಳುವಂತೆ ಸೂಚಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ ಮಾತನಾಡಿ, ಕಾನೂನು ನೆರವು ಅಭಿರಕ್ಷೆಯ ಕುರಿತು ಕಾನೂನಿನ ಅರಿವು ಮತ್ತು ನೆರವು ಎಲ್ಲರಿಗೂ ಸರಿಯಾಗಿ ಸಿಗುವಂತೆ ಮಾಡುವ ಉದ್ದೇಶದಿಂದ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರವು ಈ ಕ್ರಮವನ್ನು ಜಾರಿಗೆ ತಂದಿದ್ದು, ಇದರ ಸದುಪಯೋಗಪಡಿಸಿಕೊಳ್ಳುವಂತೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕಿ ಕೆ.ಸಿ.ದಿವ್ಯಶ್ರೀ, ಪ್ರಧಾನ ಕಾನೂನು ನೆರವು ಅಭಿರಕ್ಷಕ ಎಂ.ಎ.ನವೀನ್, ಉಪ ಪ್ರಧಾನ ಕಾನೂನು ನೆರವು ಅಭಿರಕ್ಷಕ ಕೆ.ವಿ.ಆನಂದ್, ಉಪ ಪ್ರಧಾನ ಕಾನೂನು ನೆರವು ಅಭಿರಕ್ಷಕರಾದ ಜ್ಯೋತಿ, ಸಹಾಯಕ ಕಾನೂನು ನೆರವು ಅಭಿರಕ್ಷಕರಾದ ಅಂಜಲಿ ಹಾಗೂ ಕೇಂದ್ರ ಕಾರಾಗೃಹದ ಸಹಾಯಕ ಅಧೀಕ್ಷಕ ವಿಜಯ್ ಎಸ್. ರೋಡಕರ್ ಉಪಸ್ಥಿತರಿದ್ದರು.

ನೈಪುಣ್ಯ ಶಾಲೆಯಲ್ಲಿ ಸ್ವಿಮ್ಮಿಂಗ್ ಪೂಲ್ ಉದ್ಘಾಟನೆ

ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆ ಶಿಕ್ಷಣದ ಅವಿಭಾಜ್ಯ ಅಂಗ: ಪೊಲೀಸ್ ಆಯುಕ್ತ

ಮೈಸೂರು, ಫೆ.16(ಎಸ್‌ಬಿಡಿ)– ಶಿಕ್ಷಣದ ಜೊತೆಗೆ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗೂ ವಾರ್ಷಿಕ ಯೋಜನೆ ರೂಪಿಸುವ ಅಗತ್ಯವಿದೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅಭಿಪ್ರಾಯಿಸಿದರು.



ಮೈಸೂರಿನ ಆರ್.ಟಿ.ನಗರದ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಕ್ಯಾಂಪಸ್‌ನಲ್ಲಿ ಹೊಸದಾಗಿ ನಿರ್ಮಿಸಿರುವ ಈಜು ಕೊಳವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಪಠ್ಯೇತರ ಚಟುವಟಿಕೆಗಳು ಪೂರಕವಾಗಿರುತ್ತವೆ. ಹಾಗಾಗಿ ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಶಿಕ್ಷಣದ ಅವಿಭಾಜ್ಯ ಅಂಗವೆಂದು ಪರಿಗಣಿಸಿ ವಾರ್ಷಿಕ ಯೋಜನೆ ರೂಪಿಸುವುದು ಸೂಕ್ತ ಎಂದರು.

ಮಗುವಿನ ಆಸಕ್ತಿ ವಲಯ ಹಾಗೂ ಪ್ರತಿಭೆ ಆಧರಿಸಿ ಶಿಕ್ಷಣ ನೀಡುವುದು ಉತ್ತಮ. ಆಗ ಮಾತ್ರ ಮಕ್ಕಳ ಪ್ರತಿಭೆಗೆ ಉತ್ತಮ ಪ್ರೋತ್ಸಾಹ ದೊರೆತು ಆ ಮೂಲಕ ಸಾಧಿಸಲು ಸಾಧ್ಯವಾಗುತ್ತದೆ. ರಾಷ್ಟ್ರೀಯ ಶಿಕ್ಷಣ ನೀತಿಯೂ ಇದೇ ರೀತಿಯ ಮಾರ್ಗದರ್ಶನ ನೀಡುತ್ತದೆ. ಈ ನಿಟ್ಟಿನಲ್ಲಿ ಆರ್.ರಘು ಅವರ ಸಾರಥ್ಯದ ನೈಪುಣ್ಯ ಶಾಲೆಯಲ್ಲಿ ಆರಂಭಿಕ ವರ್ಷದಲ್ಲೇ ಮಾದರಿ ಕ್ರಮಗಳನ್ನು ಅನುಸರಿಸುತ್ತಿರುವುದು ಪ್ರಶಂಸನೀಯ. ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಅಗತ್ಯವಾದ ಚಟುವಟಿಕೆಗಳಿಗೆ ಆದ್ಯತೆ ನೀಡಲಾಗಿದೆ. ಅದರಂತೆ ಸುಸಜ್ಜಿತ ಈಜುಕೊಳ ನಿರ್ಮಿಸುವ ಮೂಲಕ ಮಕ್ಕಳ ಕ್ರೀಡಾಸಕ್ತಿಯನ್ನು ಉತ್ತೇಜಿಸುತ್ತಿರುವುದು ಉತ್ತಮ ಕಾರ್ಯವಾಗಿದೆ ಎಂದು ಶ್ಲಾಘಿಸಿದರು.

ಸಂಸ್ಥೆಯ ಅಧ್ಯಕ್ಷ ಆರ್.ರಘು, ಈಜುವುದರಿಂದ ಆರೋಗ್ಯ ಉತ್ತಮವಾಗಿರುತ್ತದೆ. ಅದರಲ್ಲೂ ಮಕ್ಕಳು ಈಜುವುದನ್ನು ಕಲಿತರೆ ಅವರಲ್ಲಿ ಆತ್ಮವಿಶ್ವಾಸ ಹೆಚ್ಚುತ್ತದೆ. ಇದು ಪ್ರತಿ ಮಗುವಿಗೂ ಅತ್ಯಗತ್ಯ ಕ್ರೀಡೆ. ಆದ್ದರಿಂದ ನಮ್ಮ ಶಾಲೆ ಮಕ್ಕಳು ಮಾತ್ರವಲ್ಲದೆ ಆರ್.ಟಿ.ನಗರ ಹಾಗೂ ಸುತ್ತಮುತ್ತಲ ನಿವಾಸಿಗಳಿಗೂ ಅವಕಾಶ ಕಲ್ಪಿಸಿಕೊಡಲಾಗುವುದು. ಶಾಲಾ ವೇಳೆ ಹೊರತುಪಡಿಸಿ ಇನ್ನುಳಿದ ಸಮಯದಲ್ಲಿ ಹೊರಗಿನ ಈಜು ಆಸಕ್ತರಿಗೆ ನಿಯಮಾನುಸಾರ ಅನುವು ಮಾಡಿಕೊಡಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಆರ್ಥಿಕ ಸಲಹೆಗಾರ ಬಿ.ಎಸ್. ನಾರಾಯಣಗೌಡ, ಕಾರ್ಯದರ್ಶಿ ಆರ್.ಕೌಟಿಲ್ಯ, ಸಮಾಜ ಸೇವಕ ಕೇಬಲ್ ಮಹೇಶ್, ಪ್ರಾಂಶುಪಾಲೆ ಶ್ರೀಮತಿ ಶಿಲ್ಪಾ ಪ್ರಶಾಂತ್, ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು ಉಪಸ್ಥಿತರಿದ್ದರು.

ಭಾರತೀಯ ಫುಟ್ಬಾಲ್ ದಂತಕಥೆ ತುಳಸಿದಾಸ್ ಬಲರಾಮ್ ನಿಧನ

ನವದೆಹಲಿ, ಫೆ.16– ಭಾರತೀಯ ಫುಟ್ಬಾಲ್ ದಂತಕಥೆ ತುಳಸಿದಾಸ್ ಬಲರಾಮ್ ನಿಧನರಾಗಿದ್ದಾರೆ. ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತ ಮತ್ತು ಒಲಿಂಪಿಯನ್ ತುಳಸಿದಾಸ್ ಬಲರಾಮ್ ಅವರು 1950 ಮತ್ತು 60ರ ದಶಕದಲ್ಲಿ ಭಾರತೀಯ ಫುಟ್ಬಾಲ್‌ನ 'ಹೋಲಿ ಟ್ರಿನಿಟಿ' ಭಾಗವಾಗಿದ್ದು, ದೀರ್ಘಕಾಲದ ಅನಾರೋಗ್ಯದ ನಂತರ ಗುರುವಾರ ಕೊಲ್ಕತ್ತಾದಲ್ಲಿ ನಿಧನರಾದರು ಎಂದು ಅವರ ಕುಟುಂಬದ ನಿಕಟ ಮೂಲಗಳು ತಿಳಿಸಿವೆ.



85 ವರ್ಷ ವಯಸ್ಸಿನ ಬಲರಾಮ್, ಪಶ್ಚಿಮ ಬಂಗಾಳದ ಹೂಗ್ಲಿ ನದಿ ದಡದಲ್ಲಿರುವ ಫ್ಲಾಟ್‌ವೊಂದರಲ್ಲಿ ವಾಸಿಸುತ್ತಿದ್ದರು. ಮೂತ್ರದ ಸೋಂಕು ಮತ್ತು ಕಿಬ್ಬೊಟ್ಟೆಯ ಸಮಸ್ಯೆಯಿಂದಾಗಿ ಕಳೆದ ಡಿಸೆಂಬರ್ 26 ರಂದು ಆಸ್ಪತ್ರೆಗೆ ದಾಖಲಾಗಿದ್ದರು. ಅವರ ಆರೋಗ್ಯ ಪರಿಸ್ಥಿತಿ ಸುಧಾರಿಸಿರಲಿಲ್ಲ. ಇಂದು ಮಧ್ಯಾಹ್ನ 2 ಗಂಟೆ ಸುಮಾರಿಗೆ ಕೊನೆಯುಸಿರೆಳೆದರು ಎಂದು ಅವರ ಕುಟುಂಬದ ಆಪ್ತ ಮೂಲಗಳು ತಿಳಿಸಿವೆ.

ಅಕ್ಟೋಬರ್ 4, 1937 ರಂದು ತಮಿಳಿನ ಮುತ್ತಮ್ಮ ಮತ್ತು ತುಳಸಿದಾಸ್ ಕಾಳಿದಾಸ್ ದಂಪತಿಯ ಮಗನಾಗಿ ಜನಿಸಿದ ಬಲರಾಮ್, ಏಳು ಸೀಸನ್‌ಗಳಲ್ಲಿ 131 ಗೋಲುಗಳನ್ನು ಗಳಿಸಿದ್ದಾರೆ. ಅವರು ಅರ್ಜುನ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದರು. ಫುಟ್ಬಾಲ್ ದಂತಕಥೆಯ ಗೌರವಾರ್ಥವಾಗಿ ಮೂರು ದಿನಗಳ ಶೋಕಾಚರಣೆಯನ್ನು ಅಖಿಲ ಭಾರತ ಫುಟ್ಬಾಲ್ ಫೆಡರೇಶನ್ ಘೋಷಿಸಿದೆ.

ಬಹಿರಂಗ ಹರಾಜು

ಮೈಸೂರು, ಫೆ.16– ಭ್ರಷ್ಟಾಚಾರ ನಿಗ್ರಹ ದಳ, ದಕ್ಷಿಣ ವಲಯ ಕಛೇರಿ ಹಾಗೂ ಅಧೀನದ ಎಸಿಬಿ ಪೊಲೀಸ್ ಠಾಣೆಗಳಿಗೆ ಸಂಬಂಧಿಸಿದ ಇಲಾಖಾ ವಾಹನಗಳ ಹಳೆಯ ನಿರುಪಯುಕ್ತ 68 ಸಂಖ್ಯೆಯ ಟೈರ್‌ಗಳು ಹಾಗೂ 01 ಸಂಖ್ಯೆಯ ರೇಡಿಯೇಟರ್‌ಗಳನ್ನು ಬಹಿರಂಗ ಹರಾಜು ಮಾಡುವ ಮೂಲಕ ವಿಲೇವಾರಿ ಮಾಡಲು ಫೆ.22 ರಂದು ಬೆಳಗ್ಗೆ 11 ಘಂಟೆಗೆ ದಕ್ಷಿಣ ವಲಯದ ಪೊಲೀಸ್ ಅಧೀಕ್ಷಕರ ಕಛೇರಿಯ ಆವರಣದಲ್ಲಿ ಸಾರ್ವಜನಿಕ ಬಹಿರಂಗ ಹರಾಜನ್ನು ಏರ್ಪಡಿಸಲಾಗಿದೆ. ಹಳೆಯ ನಿರುಪಯುಕ್ತ 68 ಟೈರ್‌ಗಳು ಹಾಗೂ 01 ರೇಡಿಯೇಟರ್ ಅನ್ನು ಗರಿಷ್ಟ ಮೊತ್ತಕ್ಕೆ ವಿಲೇವಾರಿ ಮಾಡಲು ಹರಾಜನ್ನು ಏರ್ಪಡಿಸಲಾಗಿದೆ. ಆಸಕ್ತಿ ಇರುವ ಬಿಡ್‌ದಾರರು ಹರಾಜಿನಲ್ಲಿ ಭಾಗವಹಿಸಿ ಅವುಗಳನ್ನು ಪಡೆಯಬಹುದಾಗಿದೆ ಎಂದು ನಗರದ ದಕ್ಷಿಣ ವಲಯ ಪೋಲಿಸ್ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ರೋಗಿ : (ಆಸ್ಪತ್ರೆ ಆಪರೇಷನ್ ಥಿಯೇಟರ್‌ಗೆ ಶಸ್ತ್ರಚಿಕಿತ್ಸೆಗೆಂದು ಕರೆತಂದಿದ್ದಾಗ ಅಲ್ಲಿದ್ದ ಒಂದು ದೊಡ್ಡ ಹಾರವನ್ನು ನೋಡಿ) ಇಲ್ಲಿ ಹಾರ ಏಕೆ ಇಟ್ಟಿದ್ದೀರಿ.

ನರ್ಸ್ : ಓ ಅದಾ, ನಮ್ಮ ಡಾಕ್ಟರ್ ಮಾಡಿದ ಆಪರೇಷನ್ ಯಶಸ್ವಿಯಾದರೆ ಅವರಿಗೆ ಹಾಕಲಿಕ್ಕೆ ಅಂತ ತಂದಿಟ್ಟಿರೋದು!

ಮೈಸೂರು ಮಿತ್ರ
ಶುಕ್ರವಾರ, 17 ಫೆಬ್ರವರಿ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಮನುಷ್ಯ ಎಷ್ಟರ ಮಟ್ಟಿಗೆ ಇತರರ ಒಳ್ಳೆಯದಕ್ಕಾಗಿ ದುಡಿಯುತ್ತಾನೋ ಅಷ್ಟರಮಟ್ಟಿಗೆ ಅವನು ದೊಡ್ಡವನಾಗುತ್ತಾನೆ – ಮಹಾತ್ಮ ಗಾಂಧೀಜಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮೂರರಲ್ಲಿ ಕಲಿತಿದ್ದು ಮುಪ್ಪಿನವರೆಗೆ

ನಿಮ್ಮ ಪತ್ರಗಳು

"ಬಿಬಿಸಿ" ದಾಳಿ, ತನಿಖಾ ಸಂಸ್ಥೆಗಳ ಅತಿರೇಕದ ವರ್ತನೆ

ಮಾನ್ಯರೆ,

ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್‌ನ (ಬಿಬಿಸಿ) ದೆಹಲಿ ಮತ್ತು ಮುಂಬೈ ಕಚೇರಿಗಳ ಮೇಲೆ ಪರಿಶೀಲನೆ ನೆಪದಲ್ಲಿ ಆದಾಯ ತೆರಿಗೆ ಇಲಾಖೆ ಕಾರ್ಯಾಚರಣೆ ನಡೆಸಿದೆ. ಆದಾಯ ತೆರಿಗೆ ಇಲಾಖೆಯ ಈ ಕಾರ್ಯಾಚರಣೆ ಆಡಳಿತಾರೂಢ ಪಕ್ಷ ಹಾಗೂ ವಿರೋಧ ಪಕ್ಷಗಳ ನಡುವೆ ಕಚ್ಚಾಟಕ್ಕೆ ಕಾರಣವಾಗಿದೆ. ಪರಿಶೀಲನೆಯನ್ನು ವಿರೋಧ ಪಕ್ಷಗಳು ವಿರೋಧಿಸಿದ್ದು, ಮಾಧ್ಯಮ ಸ್ವಾತಂತ್ರ್ಯದ ದಮನ ಎಂದು ಅಭಿಪ್ರಾಯಪಟ್ಟಿವೆ. ಇನ್ನೊಂದೆಡೆ 2002ರ ಗುಜರಾತ್ ಗಲಭೆ, ನರೇಂದ್ರ ಮೋದಿಯವರ ಕುರಿತ ಇಂಡಿಯಾ: ದಿ ಮೋದಿ ಕ್ವೆಶ್ಚನ್ ಸಾಕ್ಷ್ಯಚಿತ್ರವನ್ನು ಬಿಜೆಪಿಯು ವಿಷಪೂರಿತ ವರದಿಗಾರಿಕೆ ಎಂದು ಆರೋಪಿಸಿದೆ.

ಈ ಸಂದರ್ಭವನ್ನು ಸೂಕ್ಷ್ಮವಾಗಿ ಗಮನಿಸಿದರೆ ನಮಗೆ ಒಂದು ಪ್ರಶ್ನೆ ಮೂಡುತ್ತದೆ. ಆದಾಯ ತೆರಿಗೆ ಇಲಾಖೆಗೆ ಭಾರತದ ಬಿಬಿಸಿ ಕಚೇರಿಯಲ್ಲಿ ಪರಿಶೀಲನೆ ಮಾಡಲು ಸಾಕ್ಷ್ಯಚಿತ್ರ ಬಿಡುಗಡೆ ನಂತರವೇ ಸಮಯ ಕೂಡಿಬಂತಾ...? ಇಡೀ ದೇಶದಲ್ಲಿ ಭಾರೀ ಸಂಚಲನವನ್ನುಂಟು ಮಾಡಿರುವ ಅದಾನಿ ಪ್ರಕರಣದಲ್ಲಿ ಕೇಂದ್ರ ಸರ್ಕಾರ ಹಾಗೂ ಕೇಂದ್ರದ ತನಿಖಾ ಸಂಸ್ಥೆಗಳ ಮೌನ ಅನುಮಾನ ಮೂಡಿಸುವಂತಿದೆ. ಬಿಬಿಸಿಯ ಸಾಕ್ಷ್ಯಚಿತ್ರದ ಬಗ್ಗೆ ಸುಪ್ರೀಂಕೋರ್ಟ್ ತನ್ನ ನಿಲುವು ಸ್ಪಷ್ಟಪಡಿಸಿದ್ದರೂ ಬೇರೆ ದಾರಿ ಇಲ್ಲದೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ಈ ರೀತಿ ಅಡ್ಡದಾರಿ ಹಿಡಿದಿರುವುದು ಖಂಡನೀಯ. ಕೇಂದ್ರ ಸರ್ಕಾರದ ತನಿಖಾ ಸಂಸ್ಥೆಗಳಿಗೆ ಸಂವಿಧಾನ ಮಾನ್ಯತೆ ಮತ್ತು ರಕ್ಷಣೆ ಬೇಕಾಗಿರುವುದು ಇಂದಿನ ತುರ್ತು ಅನಿವಾರ್ಯಗಳಲ್ಲೊಂದು. ತನಿಖಾ ಸಂಸ್ಥೆಗಳು ತಮ್ಮ ವಿವೇಚನೆಯಿಂದ ಕಾರ್ಯನಿರ್ವಹಿಸುವಂತಾಗಿ, ಬಗೆಹರಿಸುವ ಜ್ವಲಂತ ಸಮಸ್ಯೆಗಳು ಸಾಕಷ್ಟಿದ್ದು, ಅದರ ಕಡೆಗೆ ಗಮನ ಹರಿಸಲಿ. ಈ ದೇಶದ ಪ್ರಜಾಸಾರ್ವಭೌಮತ್ವ ಮರುಕಳಿಸುವಂತಾಗಲಿ.

–ಪ್ರಸಾದ್.ಜಿ.ಎಂ, ಮೈಸೂರು

ದಿವಂಗತ ಹೆಚ್.ಎಸ್.ಶಂಕರಲಿಂಗೇಗೌಡರಂತಹ ಜನಪ್ರತಿನಿಧಿಗಳ ಅಗತ್ಯವಿದೆ

ಮಾನ್ಯರೆ,

ಕೆಬಿಜಿ ಸಾಹೇಬರಿಗೆ... 'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರ್' ಓದುಗ ದೇವರುಗಳ ನಮಸ್ಕಾರಗಳು. ಇವೆರಡು ಇಲ್ಲದ ನಮ್ಮ ಜೀವನ ಶೂನ್ಯ. ತಾವು ಎಸ್.ಎಲ್.ಭೈರಪ್ಪನವರ ಬಗ್ಗೆ ಅದ್ಭುತವಾಗಿ ಅಂಕಣ ಬರೆದಿದ್ದೀರಿ. ಅಡಗೂರು ವಿಶ್ವನಾಥರು ಅವರ ವಿಚಾರದಲ್ಲಿ ರಾಜಕೀಯ ಬೆರೆಸಬಾರದಿತ್ತು. ಅವರು ಕರ್ನಾಟಕದ ಹೆಮ್ಮೆಯ ಕಿರೀಟ. ಅವರ ಮಾರ್ಗದರ್ಶನ ಮುಂದಿನ ಪೀಳಿಗೆಯ ಕವಿ, ಬರಹಗಾರರಿಗೆ ಅಗತ್ಯವಿದೆ. ಬಾಯಿ ಚಪಲದಿಂದ ರಾಜಕಾರಣಿಗಳು ಏನೇನೋ ಮಾತನಾಡಿ ಪೇಚಿಗೆ ಸಿಲುಕಿಕೊಳ್ಳುತ್ತಾರೆ. ನಮಗೆ ಕವಿಗಳು, ಬರಹಗಾರರನ್ನು ಗೌರವಿಸುತ್ತಿದ್ದ ದಿವಂಗತ ಹೆಚ್.ಎಸ್.ಶಂಕರಲಿಂಗೇಗೌಡರಂತಹ ಜನಪ್ರತಿನಿಧಿಗಳ ಅಗತ್ಯವಿದೆ. ನಾನಂತೂ ನಿಮ್ಮ 'ಭೂಮಂತ್ರ' ಅಂಕಣಕ್ಕಾಗಿ ಕಾದು, ಅವುಗಳನ್ನು ಕಡತದಲ್ಲಿ ಸಂಗ್ರಹಿಸುತ್ತಿದ್ದೇನೆ. ನಮಸ್ಕಾರಗಳು.

– 'ಮಿತ್ರ'ನ ಓದುಗ

ಸಮರ್ಪಕವಾಗಿ ಬಸ್ ವ್ಯವಸ್ಥೆ ಕಲ್ಪಿಸಿ

ಮಾನ್ಯರೆ,

ಮೈಸೂರು– ಹುಣಸೂರು ರಸ್ತೆಯಲ್ಲಿ, ಬೆಳವಾಡಿಯ ಮುಖ್ಯ ಗೇಟ್‌ನಿಂದ ಗದ್ದಿಗೆಯ ಮುಖ್ಯ ರಸ್ತೆಗೆ ಹೋಗುವ ಮಾರ್ಗದಲ್ಲಿ ಸರ್ಕಾರಿ ಬಸ್‌ಗಳ ಕೊರತೆ ಇದ್ದು, ಆ ಮಾರ್ಗದಲ್ಲಿ ಶಾಲಾ– ಕಾಲೇಜುಗಳಿಗೆ ಹೋಗಲು ವಿದ್ಯಾರ್ಥಿಗಳಿಗೆ ತುಂಬಾ ಅನಾನುಕೂಲವಾಗುತ್ತಿದೆ. ಅಲ್ಲದೆ ಇತರೆ ವ್ಯವಹಾರಗಳಿಗಾಗಿ ಪ್ರಯಾಣಿಸಲು ನಾಗರಿಕರಿಗೂ ಸಹ ಬಸ್‌ಗಳ ಅಭಾವವಿರುತ್ತದೆ. ವಿಶೇಷವಾಗಿ ಬೆಳಗ್ಗೆ ಮತ್ತು ಸಾಯಂಕಾಲದ ಸಮಯದಲ್ಲಿ ಬಸ್‌ಗಳ ಅವಶ್ಯಕತೆ ಹೆಚ್ಚಾಗಿ ಇರುತ್ತದೆ. ಆದ್ದರಿಂದ ಈ ಮಾರ್ಗಕ್ಕೆ ಸಮರ್ಪಕವಾಗಿ ಬಸ್‌ಗಳ ವ್ಯವಸ್ಥೆ ಕಲ್ಪಿಸಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಲ್ಲಿ ಮನವಿ.

–ಭಾಗ್ಯಲಕ್ಷ್ಮಿ, ಪತ್ರಿಕೋದ್ಯಮ ವಿದ್ಯಾರ್ಥಿನಿ, ಮಹಾರಾಜ ಕಾಲೇಜು, ಮೈಸೂರು

ಸಾಮಾಜಿಕ ಕಳಕಳಿಯುಳ್ಳ ಜನಪ್ರತಿನಿಧಿಗಳು ಚುನಾಯಿತರಾಗಲಿ

ಮಾನ್ಯರೆ,

ಕರ್ನಾಟಕ ರಾಜ್ಯದಲ್ಲಿ ವಿಧಾನಸಭಾ ಚುನಾವಣಾ ಜ್ವರ ಕಾವೇರುತ್ತಿದೆ. ಈಗಾಗಲೇ ಎಲ್ಲಾ ಪಕ್ಷಗಳು ಬಹುತೇಕ ತಮ್ಮ ತಮ್ಮ ಅಭ್ಯರ್ಥಿಗಳನ್ನು ಅಂತಿಮಗೊಳಿಸಿವೆ. ಮೈಸೂರಿನ ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಕಗ್ಗಂಟಾಗಿಯೇ ಉಳಿದಿದೆ. ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಸಮರ್ಥ ಅಭ್ಯರ್ಥಿಗಳಿದ್ದಾರೆ. ಕೋವಿಡ್‌ನಂತಹ ಕ್ಲಿಷ್ಟಕರ ಸಮಯದಲ್ಲಿ ಕಾಂಗ್ರೆಸ್‌ನ ಯುವ ಮುಖಂಡ ಕೆ. ಹರೀಶ್‌ಗೌಡರು ಜಾತಿ, ಪಕ್ಷಭೇದ ಮಾಡದೇ ದಿನಸಿ ಕಿಟ್‌ಗಳನ್ನು ನೀಡಿ ಜನರ ಹಸಿವನ್ನು ನೀಗಿಸಿದ್ದಾರೆ. ಅನೇಕ ಬಡ ವಿದ್ಯಾರ್ಥಿಗಳ ಶಾಲಾ ಶಿಕ್ಷಣ ಶುಲ್ಕ ಪಾವತಿಸುವುದು, ಆರೋಗ್ಯ ಶಿಬಿರ, ಉದ್ಯೋಗ ಶಿಬಿರಗಳನ್ನು ಏರ್ಪಡಿಸಿದ್ದಾರೆ. ಕಳೆದ ಬಾರಿಯ ಚುನಾವಣೆಯಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿ 25,000ಕ್ಕೂ ಅಧಿಕ ಮತ ಪಡೆದು ತಮ್ಮ ಸಾಮರ್ಥ್ಯ ತೋರಿಸಿದ್ದಾರೆ. ಯುವಕರ ಕೋಟಾದಲ್ಲಿ ಇವರಿಗೆ ಟಿಕೆಟ್ ನೀಡುವಂತೆ ಕಾಂಗ್ರೆಸ್ ಪಕ್ಷದ ವರಿಷ್ಠರಲ್ಲಿ ಮನವಿ.


–ಕೆ.ಜಿ.ಕೊಪ್ಪಲು ಗ್ರಾಮಸ್ಥರು, ಮೈಸೂರು.

ಮಹಾನಾಯಕ ಡಾ. ಅಂಬೇಡ್ಕರ್ ಅವಮಾನಿಸಿದರೆ, ಭಾರತೀಯ ಸಂಸ್ಕೃತಿಗೆ ಅವಮಾನಿಸಿದಂತಲ್ಲವೇ?

ಮಾನ್ಯರೆ,

ಭಾರತವೆಂದರೆ ಡಾ. ಅಂಬೇಡ್ಕರ್, ಡಾ. ಅಂಬೇಡ್ಕರ್ ಎಂದರೆ ಭಾರತ. ಇದನ್ನು ಅರಿಯದ ಕೆಲವು ಅರೆಯುಳಿಕೆ ಮನುಷ್ಯರು ಡಾ ಅಂಬೇಡ್ಕರ್ ಅವರನ್ನು ಗುರಿಯಾಗಿಸಿಕೊಂಡು ಅವಮಾನಿಸಿ ಭಾರತೀಯತೆಯನ್ನು ಎತ್ತಿ ತೋರಿಸಿದರೆ ಇದಕ್ಕಿಂತ ದೊಡ್ಡ ದೇಶದ್ರೋಹದ ಕೆಲಸ ಮತ್ತೊಂದಿಲ್ಲ. ಇತ್ತೀಚೆಗೆ ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯದಲ್ಲಿ ಯುವ ಜನೋತ್ಸವ ಕಾರ್ಯಕ್ರಮದಲ್ಲಿ ಒಂದು ಕಿರುನಾಟಕದಲ್ಲಿ ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್ ಅವರನ್ನು ಅವಹೇಳನಕಾರಿ ಸಂಭಾಷಣೆ ಮೂಲಕ ಅವಮಾನಿಸಿದ್ದಾರೆ. ದುರಂತವೆಂದರೆ ಒಂದು ವಿಶ್ವವಿದ್ಯಾಲಯವೆಂದರೆ ಜ್ಞಾನ ಸಾಗರವಿದ್ದಂತೆ. ಇಂತಹ ಸ್ಥಳದಲ್ಲಿ ಡಾ. ಅಂಬೇಡ್ಕರ್ ಅವರ ಬಗ್ಗೆ ಒಂದು ಕಿರುನಾಟಕದಲ್ಲಿ ಅವಮಾನಿಸುವ ಒಂದು ಪ್ರಸಂಗ ಬಂದಿದೆ ಎಂದರೆ ಇದು ಉದ್ದೇಶಪೂರ್ವಕವೋ ಅಥವಾ ಈ ವಿಶ್ವವಿದ್ಯಾಲಯದ ಅಜ್ಞಾನವೋ ತಿಳಿಯದು. ಶಿಕ್ಷಣವನ್ನು ಬೋಧಿಸುವ ಜಾಗದಲ್ಲೇ ಇಂತಹ ಘಟನೆಗಳು ನಡೆದರೆ ಮುಂದಿನ ದಿನಮಾನಗಳಲ್ಲಿ ರಾಷ್ಟ್ರ ನಾಯಕರ ಬಗ್ಗೆ ಎಂತಹ ಭಾವನೆ ಮೂಡಬಹುದು ಎಂಬ ಕನಿಷ್ಠ ವಿವೇಕ ಇರಬೇಕಿತ್ತು. ದೇಶದ ಸಕಲ ಸಮೃದ್ಧಿಗೆ ಹಗಲಿರುಳು ದುಡಿದ ಈ ಶ್ರೇಷ್ಠನಾಯಕನ ಅವಮಾನಿಸಿದರೆ ಇದು ನಮ್ಮ ಇಡೀ ಭಾರತೀಯ ಸಂಸ್ಕೃತಿಗೆ ಅವಮಾನಿಸಿದಂತೆ.

–ಪವನ್ ಜಯರಾಂ, ಸಿದ್ದಯ್ಯನಪುರ, ಚಾಮರಾಜನಗರ



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ಈಗ ಬರೀ ಅಪಾಯಕಾರಿ ಅಭಿವೃದ್ಧಿ !



ಅಭಿವೃದ್ಧಿಯ ಹೆಸರಿನಲ್ಲಿ ಎಲ್ಲೆಡೆ ಏನೆಲ್ಲಾ ಚಟುವಟಿಕೆಗಳು ನಡೆಯುತ್ತಿವೆ. ಅದು ರಸ್ತೆ ನಿರ್ಮಾಣದಿಂದ ಆರಂಭಿಸಿ ಬಹುಮಹಡಿ ಕಟ್ಟಡಗಳವರೆಗೆ, ಹಲವು ಚಟುವಟಿಕೆಗಳು ಎಲ್ಲೆಡೆ ಕಂಡುಬರುತ್ತವೆ. ಇದು ಒಂದು ರೀತಿ ಗೊತ್ತುಗುರಿಯಿಲ್ಲದೆ ನಡೆಯುವಂತೆ ಕಾಣುತ್ತದೆ. ಅಭಿವೃದ್ಧಿ ಎಂಬುದು ಮನುಷ್ಯನ ಬದುಕಿಗೆ ಪೂರಕವಾಗಿರಬೇಕೇ ಹೊರತು ಅದು ಮಾರಕವಾಗಬಾರದು. ಮನೆಗಳನ್ನು ನಿರ್ಮಿಸಬೇಕೆಂದು ಕೆರೆಕಟ್ಟೆಗಳನ್ನು ಮುಚ್ಚುವುದನ್ನು ಕಾಣುತ್ತೇವೆ. ಕೆರೆ ಮುಚ್ಚುವುದು ಸುಲಭ. ನಿಯಮಿತವಾಗಿ ಅಲ್ಲಿಗೆ ಒಂದಷ್ಟು ಮಣ್ಣು, ಕಸವನ್ನು ಸುರಿಯುತ್ತಾ ಬಂದರೆ, ಅದು ಭರ್ತಿಯಾಗುತ್ತಾ, ನೀರಿನ ಸಂಗ್ರಹ ಕಡಿಮೆಯಾಗುತ್ತಾ ಬರುತ್ತದೆ. ಇರುವ ನೀರೂ ಆವಿಯಾಗಿ ಕೆರೆ ಬರಡಾಗುತ್ತದೆ. ಕೆರೆಯಲ್ಲಿ ನೀರಿಲ್ಲ ಎಂದಾದಾಗ ಅದನ್ನು ಅನುಪಯುಕ್ತ ಎಂದು ಘೋಷಿಸಿ, ಅಲ್ಲಿ ಬಡಾವಣೆ, ವಸತಿಗಳನ್ನು ನಿರ್ಮಿಸಲಾಗುತ್ತದೆ. ಇದನ್ನು ಕಾನೂನುಬಾಹಿರ ಎಂದು ಸರ್ಕಾರ ಘೋಷಿಸುವುದೇ ಇಲ್ಲ. ಹೀಗೆ ಕೆರೆಗಳನ್ನು ಹಾಳುಮಾಡುವುದರಲ್ಲಿ ಸರ್ಕಾರೇತರ, ಖಾಸಗಿ ಸಂಸ್ಥೆಗಳದ್ದು ಸಿಂಹಪಾಲು. ಸರ್ಕಾರವೂ ಕಡಿಮೆ ಏನಲ್ಲ, ಅದೂ ಗೊತ್ತಿದ್ದೂ ಇಂತಹ ಕೃತ್ಯಕ್ಕೆ ಕೈಹಾಕುತ್ತದೆ. ಆದರೆ ಮಳೆಗಾಲ ಬಂದಾಗ, ಅದೂ ಜೋರು ಮಳೆಯಾದಾಗ, ಮಳೆ ನೀರು ಹರಿದು ಹೋಗಲು ಹಾಗೂ ಒಂದೆಡೆ ಸಂಗ್ರಹವಾಗಲು ಅವಕಾಶವಿಲ್ಲದೆ, ರಸ್ತೆಗಳಲ್ಲಿ ನೀರು ನಿಲ್ಲುವುದಲ್ಲದೆ, ಅಕ್ಕಪಕ್ಕದ ಮನೆಗಳಿಗೂ ನೀರು ನುಗ್ಗುತ್ತದೆ. ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಕಟ್ಟಿರುವ ಮನೆಯಲ್ಲಿ ವಾಸಿಸಲಾಗದ ಪರಿಸ್ಥಿತಿ ಉದ್ಭವವಾಗುತ್ತದೆ. ಇನ್ನು ಅಪಾರ್ಟ್‌ಮೆಂಟ್‌ಗಳ ಕಥೆಯಂತೂ ಹೇಳುವುದೇ ಬೇಡ. ಅಂತಹ ಸ್ಥಳಗಳಲ್ಲಿ ಅಪಾರ್ಟ್‌ಮೆಂಟ್ ನಿರ್ಮಿಸಿ, ಒಂದಕ್ಕೆರಡು ಹಣ ವಸೂಲಿ ಮಾಡಿ, ಸದ್ದಿಲ್ಲದೆ ಜಾಗ ಖಾಲಿ ಮಾಡುವ ಜಾಣರು!! ಕಂಡುಬರುತ್ತಾರೆ. ಮಳೆನೀರು ಮನೆಗೆ ನುಗ್ಗಿದಾಗ ಆ ರೀತಿ ಮಾರಾಟ ಮಾಡಿದವರಿಗೆ ಹಿಡಿಶಾಪ ಹಾಕುವುದು ಬಿಟ್ಟು ಇನ್ನೇನೂ ಮಾಡಲಾಗದು ಎಂಬ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದನ್ನು ಅಭಿವೃದ್ಧಿ ಎನ್ನಬೇಕೆ? ಮನೆಯಿಲ್ಲದವರಿಗೆ ಮನೆಕಟ್ಟಿಕೊಟ್ಟೆವು ಎಂದು ಹೇಳುವುದರ ಹಿಂದೆ ನಿಜವಾದ ಸಮಾಜ ಸೇವೆ ಇದೆಯೇ. ಮಳೆ ನೀರು ನಿಂತಾಗ, ಹಾಗೆ ಮನೆ ನಿರ್ಮಿಸಿದವರ ಬಗ್ಗೆ ಉಗ್ರ ಕ್ರಮ ಕೈಗೊಳ್ಳುವುದಾಗಿ ಸರ್ಕಾರಗಳು ಹೇಳಿಕೊಂಡು, ಕ್ರಮೇಣ ಮರೆತುಬಿಡುತ್ತವೆ.

ಇತ್ತೀಚೆಗೆ ಉತ್ತರಖಂಡದ ಜೋಷಿಮಠ ಪ್ರದೇಶ ಕುಸಿತಕ್ಕೆ ಒಳಗಾಗಿರುವುದನ್ನು ಕಾಣಬಹುದು. ಇದು ಪ್ರಕೃತಿ ಸೃಷ್ಟಿಸಿದ ವ್ಯಥೆಯಲ್ಲ. ಬದಲಾಗಿ ನಾವೇ ನಿರ್ಮಿಸಿಕೊಂಡ ವ್ಯಥೆ. ಅದೊಂದು ಧಾರ್ಮಿಕ ಕ್ಷೇತ್ರ. ಇದನ್ನು ಜ್ಯೋತಿರ್ಮಠ ಎಂದು ಕರೆಯಲಾಗುತ್ತಿತ್ತು. ಈ ಊರು ಈಗ ಕುಸಿಯುತ್ತಿದೆ ಅಥವಾ ಮುಳುಗುತ್ತಿದೆ. ದಿನದಿಂದ ದಿನಕ್ಕೆ ಊರಿನ ಮನೆಗಳು ಕುಸಿಯುತ್ತಿದ್ದು, ಅಲ್ಲಿ ವಾಸಿಸುವುದು ಅಪಾಯಕಾರಿ ಎಂದು ಹೇಳಲಾಗುತ್ತಿದೆ. ಕಳೆದ ಒಂದು ವರ್ಷದಲ್ಲಿ 550 ಮನೆಗಳು ಬಿರುಕುಬಿಟ್ಟಿವೆಯಂತೆ. ಇಂತಹ ಮನೆಗಳಲ್ಲಿ ಮಲಗಲು ನೆಲೆ ನಿಲ್ಲಲು ಜನರು ಹಿಂದೇಟು ಹಾಕಿ, ಮನೆಯ ಹೊರಗೆ ಮಲಗುತ್ತಿದ್ದಾರೆ. ಅಲ್ಲಿನ ನಾಲ್ಕು ಸಾವಿರ ಮಂದಿಯನ್ನು ಈಗಾಗಲೇ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರ ಮಾಡಲಾಗಿದೆ. ಜೋಷಿಮಠ ಒಂದು ಪರ್ವತ ಪಟ್ಟಣ. ಅಲ್ಲಿ ಇತ್ತೀಚೆಗೆ ಭೂಮಿ ಕಂಪಿಸುವುದು, ಕಟ್ಟಡಗಳಲ್ಲಿ ಬಿರುಕು ಬಿಡುತ್ತಿರುವುದು ಸಾಮಾನ್ಯವಾಗಿದೆ. ಈ ಕುಸಿತಕ್ಕೆ ಕಾರಣ ಅಲ್ಲಿ ಹೆಚ್ಚಾಗಿ ಬಹುಮಹಡಿ ಕಟ್ಟಡಗಳ ನಿರ್ಮಾಣ. ಪರ್ವತ ಪ್ರದೇಶ ಎಂದಾಗ ಭೂಮಿ ಎಲ್ಲೆಡೆಯೂ ಗಟ್ಟಿಯಾಗಿರುವುದಿಲ್ಲ. ಅದು ಕಲ್ಲಿನ ಬೆಟ್ಟವೂ ಅಲ್ಲ. ಅಲ್ಲಿನ ಭೂಮಿಗೆ ಒಂದಷ್ಟು ಒತ್ತಡ ತಡೆದುಕೊಳ್ಳುವ ಶಕ್ತಿ ಮಾತ್ರ ಇರುತ್ತದೆ. ಕಟ್ಟಡಗಳು ಜಾಸ್ತಿಯಾದಾಗ, ಅಲ್ಲಿ ಕುಸಿತ ಸಂಭವಿಸುತ್ತದೆ. ಇನ್ನು ಕೆಲವೇ ವರ್ಷಗಳಲ್ಲಿ ಆ ಊರು ಹತ್ತಾರು ಅಡಿಗಳಷ್ಟು ಕೆಳಕ್ಕೆ ಹೋಗಿಬಿಡಬಹುದು. ಆಗ ಅಲ್ಲಿ ವಾಸ ಮಾಡಲು ಸಾಧ್ಯವೇ ಆಗುವುದಿಲ್ಲ. ಇದು ಕೇವಲ ಜೋಷಿಮಠಕ್ಕೆ ಮಾತ್ರ ಅನ್ವಯವಾಗುತ್ತದೆ ಎಂದೇನಲ್ಲ. ಉತ್ತರಖಂಡದ ಹಲವು ಹಳ್ಳಿಗಳು ಮತ್ತು ಪಟ್ಟಣಗಳೂ ಅಪಾಯದ ಅಂಚಿನಲ್ಲಿವೆ ಎಂದು ಒಂದು ವರದಿ ಹೇಳುತ್ತದೆ. ಇದಕ್ಕೆ ಕಾರಣ ದುರ್ಬಲ ಪರಿಸರ ವ್ಯವಸ್ಥೆ. ಇದಕ್ಕೆ ಪ್ರಕೃತಿ ಕಾರಣವಲ್ಲ. ಮನುಷ್ಯನ ಆಸೆಬುರುಕುತನವೇ ಕಾರಣ. ಪರ್ವತ ಪ್ರದೇಶದಲ್ಲಿ ಎಂತಹ ಕಟ್ಟಡ ಕಟ್ಟಬೇಕು, ಭೂಮಿ ಅಂತಹ ಎಷ್ಟು ಕಟ್ಟಡಗಳ ಭಾರವನ್ನು ಸಹಿಸುತ್ತದೆ ಎಂಬ ಬಗ್ಗೆ ವೈಜ್ಞಾನಿಕವಾಗಿ ವಿಶ್ಲೇಷಣೆಯನ್ನೇ ಮಾಡದೆ ಬೃಹತ್ ಕಟ್ಟಡಗಳಿಗೆ ಅನುಮತಿ ನೀಡಲಾಗಿರುವುದು ಇದಕ್ಕೆ ಕಾರಣ. ಪಟ್ಟಣ ಕುಸಿದರೆ ಈ ಬೃಹತ್ ಕಟ್ಟಡಗಳೂ ಕುಸಿಯುತ್ತವೆ. ಇಲ್ಲೇ ಬದುಕು ಕಟ್ಟಿಕೊಂಡಿದ್ದ ಸಾಮಾನ್ಯ ಜನರೂ ಈಗ ಮನೆ ಮಠ ತೊರೆದು ಹೋಗಬೇಕಾದ ಅತಂತ್ರ ಸ್ಥಿತಿ ನಿರ್ಮಾಣವಾಗಿದೆ.

> ಬೆಂಗಳೂರಿನಲ್ಲಿ ಈ ವರ್ಷ ಸುರಿದ ಭಾರೀ ಮಳೆಯಿಂದ ಹೀಗೆ ಕಂಗೆಟ್ಟವರು ಸಹಸ್ರಾರು ಜನ. ವಿಶೇಷ ಎಂದರೆ ಬೆಂಗಳೂರನ್ನು ಐಟಿ ಹಬ್ ಮಾಡುತ್ತೇವೆ ಎಂದು ಸರ್ಕಾರ ಘೋಷಿಸಿ, ನೂರಾರು ಕಂಪನಿಗಳಿಗೆ ರತ್ನಗಂಬಳಿ ಹಾಸಿ ಆಹ್ವಾನಿಸುತ್ತವೆ. ಇಂತಹ ಕಂಪನಿಗಳೇ ಮಳೆ ನೀರು ಹರಿದುಹೋಗಬೇಕಾದ ರಾಜಕಾಲುವೆಗಳನ್ನು ಮುಚ್ಚಿ ಕಟ್ಟಡ ನಿರ್ಮಿಸುತ್ತಿವೆ ಎಂದು ನಂತರ ಸರ್ಕಾರವೇ ಹೇಳಿಕೆ ನೀಡುತ್ತದೆ. ಇದೆಷ್ಟು ಸರಿ? ನಂತರ ಅಂತಹ ಒತ್ತುವರಿ ತೆರವು ಮಾಡಲು ಕಾರ್ಯಾಚರಣೆ ನಡೆಸಿದಂತೆ ನಾಟಕವಾಡಿ, ನಂತರ ಏನಾಯಿತು. ಎಂಬುದೇ ಗೊತ್ತಾಗದಂತೆ ಸರ್ಕಾರ ಸುಮ್ಮನಾಗಿ ಬಿಡುತ್ತದೆ. ಏಕೆಂದರೆ ಅವರೇ ಇಂತಹ ಕಂಪನಿಗಳಿಗೆ ರತ್ನಗಂಬಳಿ ಹಾಸಿ ಜಾಗ ನೀಡಿರುತ್ತಾರೆ. ನಿರ್ಮಾಣ ಹಂತದಲ್ಲಿ ಯಾವುದೇ ತಕರಾರು ಮಾಡುವುದಿಲ್ಲ. ಸಮಸ್ಯೆ ಬಂದಾಗ ಒಂದಷ್ಟು ತಿಪ್ಪೆ ಸಾರಿಸುವ ಕೆಲಸ ಮಾಡಿ, ನಮ್ಮ ಜವಾಬ್ದಾರಿ ಇಷ್ಟೇ ಎಂಬಂತೆ ಸರ್ಕಾರ ಸುಮ್ಮನಾಗಿಬಿಡುತ್ತದೆ.

ಇತ್ತೀಚೆಗೆ ಮೈಸೂರಿನಲ್ಲಿ ನಡೆದ ಒಂದು ಸಮಾರಂಭದಲ್ಲಿ ಖ್ಯಾತ ಸಾಹಿತಿ ಡಾ.ಎಸ್.ಎಲ್.ಭೈರಪ್ಪನವರು ನಮ್ಮ ಮೈಸೂರಿನ ಚಾಮುಂಡಿಬೆಟ್ಟದಲ್ಲಿಯೂ ಅಭಿವೃದ್ಧಿ ಹೆಸರಿನಲ್ಲಿ ಕಟ್ಟಡಗಳನ್ನು ನಿರ್ಮಿಸುತ್ತಾ ಹೋದರೆ, ಜೋಷಿಮಠದಂತೆ ಚಾಮುಂಡಿ ಬೆಟ್ಟವೂ ಕುಸಿಯಬಹುದು ಎಂಬ ಆತಂಕ ವ್ಯಕ್ತಪಡಿಸಿದ್ದಾರೆ. ಅವರ ಕಾಳಜಿಯನ್ನು ನಾವು ಅರ್ಥ ಮಾಡಿಕೊಳ್ಳಬೇಕು.

ಇಂದು ಪ್ರಮುಖ ಯಾತ್ರಾಸ್ಥಳಗಳು ಯಾತ್ರಾಸ್ಥಳಗಳಾಗಿ ಉಳಿದಿಲ್ಲ. ಅವೆಲ್ಲಾ ವ್ಯವಹಾರದ ಗೂಡುಗಳಾಗುತ್ತಿವೆ. ವಾಣಿಜ್ಯ ಕೇಂದ್ರಗಳಾಗುತ್ತಿವೆ. ಜನರು ಬರುವುದು ಜಾಸ್ತಿಯಾದಂತೆ ಅಲ್ಲಿ ವ್ಯಾಪಾರಿಗಳು ಬರುತ್ತಾರೆ. ಬರುವ ಪ್ರವಾಸಿಗರನ್ನು ಗಮನಿಸಿ ದೊಡ್ಡದೊಡ್ಡ ಹೊಟೇಲ್‌ಗಳು ನಿರ್ಮಾಣವಾಗುತ್ತವೆ. ಅದೊಂದು ವ್ಯಾಪಾರಿ ಕೇಂದ್ರವಾಗುತ್ತದೆ. ಅವೂ ಜೋಷಿಮಠದಂತೆ ಕುಸಿಯುವುದಿಲ್ಲ ಅಥವಾ ಯಾವುದೇ ಅವಘಡ ಸಂಭವಿಸುವುದಿಲ್ಲ ಎಂದು ಹೇಳಲು ಬರುವುದಿಲ್ಲ. ಸಾಮಾನ್ಯವಾಗಿ ಯಾತ್ರಾಸ್ಥಳಗಳು ನದಿ ದಡದಲ್ಲಿರುತ್ತವೆ. ಈ ರೀತಿ ಪ್ರವಾಸಿಗರು ಜಾಸ್ತಿಯಾಗಿ, ಬೃಹತ್ ಕಟ್ಟಡಗಳು ನಿರ್ಮಾಣವಾದರೆ ಅವುಗಳಿಂದ ಹೊರ ಬರುವ ಕೊಳಚೆ ನೀರು ಅದೇ ನದಿ ಸೇರುತ್ತದೆ. ಪಾವನ ಎನಿಸಿಕೊಂಡ ನದಿಗಳಲ್ಲಿ ಸ್ನಾನ ಮಾಡಲು ಜನರು ಹೆದರಿಕೊಳ್ಳುವಂತಹ ಪರಿಸ್ಥಿತಿ ಉಂಟಾಗುತ್ತಿದೆ. ಇದೂ ಸ್ವಯಂಕೃತ ಅಪರಾಧ.

ಅದೇ ರೀತಿ ನಮ್ಮ ಚಾಮುಂಡಿಬೆಟ್ಟ. ಇದು ಮೈಸೂರು ನಗರಕ್ಕೆ ಹೊಂದಿಕೊಂಡಂತಿದೆ. ಮೈಸೂರಿನ ಒಂದು ಭಾಗವೇ ಆಗಿದೆ. ಕೇವಲ 8–10 ಕಿಲೋ ಮೀಟರ್ ದೂರದಲ್ಲಿದೆ. ಅದು ಹೆಸರು ಪಡೆದಿರುವುದು ಯಾತ್ರಾಸ್ಥಳವಾಗಿ. ಆದರೆ ನಮ್ಮ ಆಳುವ ಜನರಿಗೆ ಅದೇನು ದುರ್ಬುದ್ಧಿ ಬಂದಿದೆಯೋ ಏನೋ ಅದನ್ನು ಬೃಹತ್ ವ್ಯಾಪಾರಿ ಸ್ಥಳವಾಗಿ ಮಾಡಲು ಹೊರಟಿದ್ದಾರೆ. ಈಗಾಗಲೇ ಅಲ್ಲಿ ಸಾಕಷ್ಟು ಕಟ್ಟಡಗಳು ಬಂದಿವೆ. ಮತ್ತಷ್ಟು ಕಟ್ಟಡ ಕಟ್ಟುವ ಹುನ್ನಾರ ನಡೆಯುತ್ತಿದೆ. ಈಗಾಗಲೇ ನಂದಿಗೆ ಹೋಗುವ ದಾರಿ ಎರಡ್ಮೂರು ಬಾರಿ ಕುಸಿದಿದೆ. ಇನ್ನೂ ದುರಸ್ತಿಯೂ ಆಗಿಲ್ಲ. ಇಷ್ಟಾದರೂ ಮತ್ತೆ ಒಂದಷ್ಟು ಅಭಿವೃದ್ಧಿಯ ಹೆಸರಿನಲ್ಲಿ ಕಾಮಗಾರಿಗಳನ್ನು ಮಾಡಲು ಹೊರಟಿದ್ದಾರೆ. ಇದನ್ನು ಜನರು ಬೇಕೆಂದು ಕೇಳುತ್ತಿಲ್ಲ. ಆದರೆ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಒಂದಷ್ಟು ಹೆಚ್ಚು ಎನ್ನಬಹುದಾದಷ್ಟು ಹಣವಿದೆ. ಅದರ ಮೇಲೆ ಕಣ್ಣುಬಿದ್ದಿದೆ. ಅದನ್ನು ಖರ್ಚು ಮಾಡುವ ಧಾವಂತದಲ್ಲಿ ಬೇಡದ ಯೋಜನೆಗಳನ್ನು ತರಲು ಹುನ್ನಾರ ನಡೆದಿದೆ. ಹಾಗೆ ನೋಡಿದರೆ ಚಾಮುಂಡಿಬೆಟ್ಟ ವ್ಯಾಪಾರಿ ಕೇಂದ್ರವಲ್ಲ. ಜನರು ಅಲ್ಲಿಗೆ ಬರುವುದು ದೇವರ ದರ್ಶನಕ್ಕಾಗಿ ಮಾತ್ರ. ಅದಕ್ಕೆ ಪೂರಕವಾಗಿ ಭಕ್ತರಿಗೆ ಬೇಕಾದ ಯಾವುದೇ ಸವಲತ್ತು ನೀಡದೆ, ಬರೀ ವ್ಯಾಪಾರಿ ಮನೋಭಾವ ತೋರುತ್ತಿರುವುದು ನಾಳಿನ ಅಪಾಯದ ಚಿನ್ಹೆ ಎಂದು ಭಾವಿಸಬಹುದಾಗಿದೆ. ಬೆಟ್ಟ ಇಂದು ಬರಡಾಗಿ ಗೋಚರಿಸುತ್ತಿದೆ. ಅದನ್ನು ಹಸಿರೀಕರಣಗೊಳಿಸಿ, ಬೆಟ್ಟಕ್ಕೆ ಶಕ್ತಿ ತುಂಬುವ ಕೆಲಸವಾಗಬೇಕು. ಗಿಡಮರಗಳು ಬೆಳೆದರೆ ಬೆಟ್ಟದ ಮಣ್ಣು ಶಿಥಿಲವಾಗದೆ ಗಟ್ಟಿಯಾಗುತ್ತದೆ. ಆದರೆ ವ್ಯಾಪಾರಿ ಮನೋಭಾವದವರಿಗೆ ಇದರ ಚಿಂತೆ ಏಕೆ ಹೇಳಿ?

ಇನ್ನು ರಸ್ತೆಗಳ ವಿಸ್ತರಣೆ ನೆಪದಲ್ಲಿ ರಸ್ತೆ ಬದಿಯಲ್ಲಿದ್ದ ಸಾಲು ಮರಗಳನ್ನು ಕಡಿಯಲಾಗುತ್ತದೆ. ಈ ಮರ ಕಡಿದರೆ ಜನ ವಿರೋಧಿಸುತ್ತಾರೆ ಎಂದು ಅವರ ಅಭಿಪ್ರಾಯ ಕೇಳುವ ಕಾಟಾಚಾರದ ಸಭೆಗಳು ನಡೆದು ಸಭೆ ಒಪ್ಪದಿದ್ದರೂ ಒಪ್ಪಿದೆ ಎಂದು ಹೇಳಿ ಮರಗಳನ್ನು ಕಡಿದುಹಾಕಲಾಗುತ್ತದೆ. ಹಿಂದಿನ ರಾಜರ ಕಾಲದಲ್ಲಿ ಅವರ ಮೊದಲ ಆದ್ಯತೆ ಪ್ರವಾಸಿಗರಿಗೆ ಅನುಕೂಲವಾಗಲಿ ಎಂದು ರಸ್ತೆ ಬದಿಯಲ್ಲಿ ಸಾಲುಮರಗಳನ್ನು ನೆಟ್ಟು ಪೋಷಿಸುವುದೇ ಆಗಿತ್ತು. ಆದರೆ ಇಂದು ಮರ ಕಡಿಯುವಾಗ, ಮತ್ತಷ್ಟು ಮರಗಳನ್ನು ಬೆಳೆಸಬೇಕು ಎಂಬ ಕಾಳಜಿಯೇ ಕಾಣುವುದಿಲ್ಲ. ಇದನ್ನು ಅಭಿವೃದ್ಧಿ ಹೆಸರಿನಲ್ಲಿ ಮುಚ್ಚಿಡಲಾಗುತ್ತದೆ. ಹಾಗೆಂದು ರಸ್ತೆ ಮಾಡಬಾರದೆಂದಲ್ಲ. ಬದಲಾಗಿ ಮತ್ತಷ್ಟು ಮರಗಳನ್ನು ಬೆಳೆಸುವ ಬಗ್ಗೆ ಏಕೆ ಯೋಚಿಸುವುದಿಲ್ಲ? ಎಂದು ಕೇಳಬೇಕೆನಿಸುತ್ತದೆ.

ನಮ್ಮ ಅಭಿವೃದ್ಧಿ ಎಷ್ಟು ಅಪಾಯಕಾರಿ ಎಂಬುದಕ್ಕೆ ಇತ್ತೀಚೆಗೆ ಟರ್ಕಿ–ಸಿರಿಯಾ ದೇಶಗಳಲ್ಲಿ ನಡೆದ ಭೂಕಂಪ ಹಾಗೂ ಅದರಿಂದ ಉಂಟಾದ ಜೀವ ಆರ್ಥಿಕ ಹಾನಿಯನ್ನು ನಾವು ಈ ದಿಸೆಯಲ್ಲಿಯೇ ಗಮನಿಸಬೇಕಾಗುತ್ತದೆ. ಅಲ್ಲಿ ಕೆಲವು ನಿಮಿಷ ಭೂಮಿ ಕಂಪಿಸಿದ ಪರಿಣಾಮ ಸುಮಾರು ಐವತ್ತು ಸಾವಿರಕ್ಕೂ ಅಧಿಕ ಜನರು ಪ್ರಾಣಕಳೆದುಕೊಂಡರು. ವಾರ್ತಾಜಾಲಗಳಲ್ಲಿ ಕಂಡುಬರುವಂತೆ ಬಹುತೇಕ ಬಹು ಮಹಡಿ ಕಟ್ಟಡಗಳು ಉರುಳಿದ್ದರಿಂದ ಹೆಚ್ಚಿನ ಹಾನಿ ಸಂಭವಿಸಿದೆ. ಒಂದೇ ರಸ್ತೆಯಲ್ಲಿ ನಿರ್ಮಿಸಿದ್ದ ಅಕ್ಕಪಕ್ಕದ ಬಹುಮಹಡಿಕಟ್ಟಡಗಳು ಉರುಳಿಬಿದ್ದಿವೆ. ಅದೂ ನಸುಕಿನ ಸಮಯದಲ್ಲಿ. ನೆಮ್ಮದಿಯಾಗಿ ಮಲಗಿದ್ದ ಜನರಿಗೆ, ಬಹುಶಃ ತಮ್ಮ ಪ್ರಾಣ ಹೋಗಿದ್ದೂ ಗೊತ್ತಾಗದಂತೆ ದುರಂತ ಸಂಭವಿಸಿದೆ. ಎಷ್ಟೇ ಪರಿಹಾರ ಕ್ರಮ ಕೈಗೊಂಡರೂ ಸಾವಿಗೀಡಾದವರ ಕುಟುಂಬಗಳಿಗೆ ಹೇಗೆ ಸಾಂತ್ವನ ಹೇಳಬಹುದು. ಇದೂ ಸ್ವಯಂಕೃತ ಅಪರಾಧವೇ ಆಗಿದೆ. ಭೂಕಂಪ ನಿಯಂತ್ರಣ ನನ್ನ ಕೈಯ್ಯಲ್ಲಿ ಇಲ್ಲ ಎನ್ನುವುದು ನಿಜವಾದರೂ, ಭೂಕಂಪ ಸಂಭವಿಸಬಹುದಾದ ವಲಯಗಳು ಯಾವುದು ಎಂಬುದು ನಮಗೆ ತಿಳಿದಿದೆ. ಕನಿಷ್ಠ ಅಂತಹ ಸ್ಥಳಗಳಲ್ಲಾದರೂ ಬೃಹತ್ ಕಟ್ಟಡಗಳ ನಿರ್ಬಂಧ ಹೇರಬಹುದಲ್ಲವೇ. ಅಭಿವೃದ್ಧಿಯ ಹೆಸರಿನಲ್ಲಿ ನಮ್ಮನ್ನೇ ನಾವು ಅಪಾಯಕ್ಕೆ ಒಡ್ಡಿಕೊಳ್ಳುತ್ತಿದ್ದೇವೆ.

ಇದನ್ನೆಲ್ಲಾ ಗಮನಿಸಿದಾಗ ಅಭಿವೃದ್ಧಿ ಎಂಬ ಹೆಸರಿನಲ್ಲಿ ಇತರೆ ಅಂಶಗಳ ಬಗ್ಗೆ ನಾವು ಗಮನವನ್ನೇ ಹರಿಸುತ್ತಿಲ್ಲ ಎಂದು ಕಂಡುಬರುತ್ತದೆ. ಬೆಂಗಳೂರಿನಲ್ಲಿ (ಮೈಸೂರಿನಲ್ಲೂ) ಕಂಡುಬರುವ ಬೃಹತ್ ಅಪಾರ್ಟ್‌ಮೆಂಟುಗಳನ್ನು ಕಂಡಾಗ ದಿಗಿಲಾಗುತ್ತದೆ. ಅಲ್ಲಿ ಯಾವ ರೀತಿಯ ಸುರಕ್ಷತಾ ಕ್ರಮ ಕೈಗೊಳ್ಳಲಾಗಿದೆ ಗೊತ್ತಾಗುವುದಿಲ್ಲ. ಭೂಮಿ ಕಂಪಿಸಿದರೆ ನಮ್ಮೆಲ್ಲಾ ಅಭಿವೃದ್ಧಿಯ ವಿಜ್ಞಾನ ತಲೆಕೆಳಗಾಗುತ್ತದೆ. ಅಭಿವೃದ್ಧಿ ಎಂದಾಗ ಇವೆಲ್ಲವನ್ನೂ ಯೋಚಿಸಿಯೇ ಕ್ರಮವಹಿಸಬೇಕು. ಇಲ್ಲದಿದ್ದರೆ ಅಭಿವೃದ್ಧಿ ಎಂಬುದು ಮನುಕುಲಕ್ಕೆ ಮಾರಕವಾಗಿಬಿಡುತ್ತದೆ.

ಶ್ರೀ ಕೃಷ್ಣದೇವರಾಯರ 552ನೇ ಜಯಂತ್ಯುತ್ಸವ ಆಚರಣೆ



ಮೈಸೂರು, ಫೆ.16(ಎಂಕೆ)– ಮೈಸೂರಿನ ವಿಜಯನಗರ 2ನೇ ಹಂತದಲ್ಲಿ ಶ್ರೀ ಕೈವಾರ ತಾತಯ್ಯ ಬಲಿಜ ನಾಯ್ಡು ಒಕ್ಕೂಟದ ವತಿಯಿಂದ ಶ್ರೀ ಕೃಷ್ಣದೇವರಾಯರ 552ನೇ ಜಯಂತ್ಯುತ್ಸವ ಆಚರಿಸಲಾಯಿತು.

ಈ ವೇಳೆ ಶ್ರೀ ಕೃಷ್ಣದೇವರಾಯರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿ, ಸಿಹಿ ವಿತರಿಸಲಾಯಿತು. ಬಳಿಕ ಮಹರಾಜ ಕಾಲೇಜು ಕನ್ನಡ ಅಧ್ಯಾಪಕ ಡಾ.ಎಸ್. ಕೃಷ್ಣಪ್ಪ ಮಾತನಾಡಿ, ಶ್ರೀ ಕೃಷ್ಣದೇವರಾಯನ ಕಾಲವನ್ನು ಸುವರ್ಣಯುಗ ಎಂದು ಇತಿಹಾಸಕಾರರು ಕರೆದಿದ್ದಾರೆ. ಹಣ್ಣು–ತರಕಾರಿ ರೀತಿಯಲ್ಲಿ ಚಿನ್ನ–ಬೆಳ್ಳಿ ಮಾರಾಟ ಮಾಡುತ್ತಿದ್ದರು ಎಂದು ಉಲ್ಲೇಖಿಸಿದ್ದಾರೆ. ಇವರ ಅಡಿಯಲ್ಲಿ ನಾಡಪ್ರಭು ಕೆಂಪೇಗೌಡರು ಹಾಗೂ ಕೊಡಗಿನ ಅರಸರು ಸುಭದ್ರ ಆಡಳಿತವನ್ನು ನಡೆಸುತ್ತಿದ್ದರು ಎಂಬುದನ್ನು ಇತಿಹಾಸ ಸ್ಪಷ್ಟಪಡಿಸಿದೆ ಎಂದರು.

ಅಖಂಡ ಹಿಂದೂ ಸಾಮ್ರಾಜ್ಯ ಸ್ಥಾಪಿಸುವಲ್ಲಿ ಶ್ರೀ ಕೃಷ್ಣದೇವರಾಯರ ಕೊಡುಗೆ ಬಹಳ ಪ್ರಮುಖವಾದದ್ದು. ಸಾಮ್ರಾಟ ಅಶೋಕನನ್ನು ಬಿಟ್ಟರೆ ಅಖಂಡ ಸಾಮ್ರಾಜ್ಯ ಪ್ರತಿಷ್ಠಾಪನೆ ಮಾಡಿದ ಕೀರ್ತಿ ಕೃಷ್ಣದೇವರಾಯರಿಗೆ ಸಲ್ಲುತ್ತದೆ. ದಕ್ಷಿಣ ರಾಜ್ಯಗಳ ಚಕ್ರವರ್ತಿ, ಆಂಧ್ರ ಭೋಜ, ಮೂರು ರಾಯರ ಗಂಡ, ಸೋಲಿಲ್ಲದ ಸರದಾರ ಎಂಬಿತ್ಯಾದಿ ಬಿರುದುಗಳನ್ನು ಪಡೆದ ಶ್ರೀ ಕೃಷ್ಣದೇವರಾಯರನ್ನು ಸ್ಮರಿಸುವುದು ನಮ್ಮ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.

ಮುಖಂಡರಾದ ಸುಧಾಕರ್ ನಾಯ್ಡು, ಭಾನುಪ್ರಕಾಶ್, ಲೀಲಾವತಿ ನಾಯ್ಡು, ಪ್ರೊ. ವಿಜಯ್ ಕುಮಾರ್, ಸುರೇಶ್, ಯೋಗೇಶ್, ಚಿನ್ನಸ್ವಾಮಿ, ಕಾಮರಾಜ, ಶ್ರೀ ಕೈವಾರ ತಾತಯ್ಯ ಬಲಿಜ ನಾಯ್ಡು ಒಕ್ಕೂಟದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಕೇಶ್ ನಾಯ್ಡು ಮತ್ತಿತರರಿದ್ದರು.

ಕಲ್ಲು ಗಣಿಗಾರಿಕೆಗೆ ಶೀಘ್ರವೇ ಎನ್‌ಓಸಿ

ವಾಣಿಜ್ಯ ಉದ್ದೇಶಗಳಿಗಾಗಿ ಭೂಪರಿವರ್ತನೆ ನಿಯಮ ಸರಳ

ಬೆಂಗಳೂರು, ಫೆ.16– ರಾಜ್ಯದಲ್ಲಿ ಕಲ್ಲುಗಣಿಗಾರಿಕೆಗೆ ಎನ್‌ಓಸಿ ಕೋರಿ 188 ಅರ್ಜಿಗಳು ಬಾಕಿ ಉಳಿದಿದ್ದು, ಶೀಘ್ರ ಇತ್ಯರ್ಥಕ್ಕೆ ಕ್ರಮಕೈಗೊಳ್ಳಲಾಗುವುದು ಎಂದು ಕಂದಾಯ ಸಚಿವ ಆರ್.ಅಶೋಕ್ ತಿಳಿಸಿದರು.



ವಿಷಯ ಪ್ರಸ್ತಾಪಿಸಿದ ಬಿಜೆಪಿ ಶಾಸಕ ಪಿ.ಎಂ. ಮುನಿರಾಜುಗೌಡ, ಚಿಕ್ಕಬಳ್ಳಾಪುರ ತಾಲೂಕಿನ ಚಿಕ್ಕನಾಗವಳ್ಳಿ ಗ್ರಾಮದಲ್ಲಿ ಕಲ್ಲು ಗಣಿಗಾರಿಕೆ ನಡೆಸಲು ಅನುಮತಿ ಪಡೆದಿದ್ದರೂ ಅಧಿಕಾರಿಗಳು ಎನ್‌ಓಸಿ ನೀಡಲು ವಿಳಂಬ ಮಾಡುತ್ತಿದ್ದಾರೆ ಎಂದರು.

422 ಅರ್ಜಿಗಳು ಸಲ್ಲಿಕೆಯಾಗಿದ್ದು, ಅದರಲ್ಲಿ 224ಕ್ಕೆ ಮಾತ್ರ ಎನ್‌ಓಸಿ ನೀಡಲಾಗಿದೆ ಎಂದು ಸೂಚಿಸಿದ ಕಾಂಗ್ರೆಸ್ ಎಂಎಲ್‌ಸಿ ನಸೀರ್ ಅಹಮದ್, ಉಳಿದ 188 ಪ್ರಕರಣಗಳಲ್ಲಿ ಏಕೆ ವಿಳಂಬವಾಗಿದೆ ಎಂದು ಮುಖ್ಯ ಕಾರ್ಯದರ್ಶಿ ಮಟ್ಟದಲ್ಲಿ ತನಿಖೆ ನಡೆಸಬೇಕು ಎಂದು ಅವರು ಹೇಳಿದರು.

ಬಾಕಿ ಇರುವ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡುವಂತೆ ತಹಶೀಲ್ದಾರ್‌ಗಳಿಗೆ ಸೂಚಿಸಲಾಗಿದೆ ಎಂದು ಅಶೋಕ್ ತಿಳಿಸಿದರು. ನಿರ್ಮಾಣ ಕಾಮಗಾರಿಗೆ ಜಲ್ಲಿ, ಮರಳು ಅಗತ್ಯವಿದ್ದ ಕಾರಣ ಕಲ್ಲುಗಣಿಗಾರಿಕೆಗೆ ಅನುಮತಿ ನೀಡಲಾಗುವುದು ಎಂದರು.

ಎಂಎಲ್ಸಿ ಸಿ.ಎನ್. ಮಂಜೇಗೌಡ ಅವರಿಗೆ ಉತ್ತರಿಸಿದ ಕಂದಾಯ ಸಚಿವ ಆರ್.ಅಶೋಕ, ಕೈಗಾರಿಕೆ ಮತ್ತು ಇತರ ವಾಣಿಜ್ಯ ಉದ್ದೇಶಗಳಿಗಾಗಿ ಭೂಮಿಯನ್ನು ಪರಿವರ್ತಿಸುವ ನಿಯಮಗಳನ್ನು ಇನ್ನಷ್ಟು ಸರಳಗೊಳಿಸಲಾಗುವುದು.

ಮಾಸ್ಟರ್ ಪ್ಲಾನ್ ಇರುವ ಅರ್ಜಿಗಳಿಗೆ ಏಳು ದಿನಗಳಲ್ಲಿ ಹಾಗೂ ಮಾಸ್ಟರ್ ಪ್ಲಾನ್ ಇಲ್ಲದ ಅರ್ಜಿಗಳಿಗೆ 30 ದಿನದೊಳಗೆ ಅನುಮತಿ ನೀಡಲಾಗುವುದು ಎಂದರು. ಮಾರ್ಚ್ 7, 2022 ರಂದು ನೀಡಲಾದ ಭೂ ದಾಖಲೆಗಳಲ್ಲಿ ಕೃಷಿಯೇತರ ಎಂದು ನಮೂದಿಸುವ ಆದೇಶವನ್ನು ಜನವರಿ 30, 2023 ರಂದು ಹಿಂಪಡೆಯಲಾಯಿತು, ಏಕೆಂದರೆ ಇದು ಭೂ ಮಾಲೀಕರಿಗೆ ಸಮಸ್ಯೆಗಳನ್ನು ಉಂಟುಮಾಡುತ್ತದೆ ಎಂದು ಅವರು ಹೇಳಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com



ಈ ವಾರ 'ಖೆಯೊಸ್' ಬಿಡುಗಡೆ

ಸೈಕಲಾಜಿಕಲ್ ಥ್ರಿಲ್ಲರ್ ಕಥಾಹಂದರ ಹೊಂದಿರುವ 'ಖೆಯೊಸ್' ಈ ವಾರ ಬಿಡುಗಡೆಯಾಗುತ್ತಿದೆ. ಚಿತ್ರದ ಟ್ರೈಲರ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನೆರವೇರಿತು. ಖೆಯೊಸ್ ಅಂದರೆ ಮನುಷ್ಯನ ಮನಸ್ಸಿನ ಗೊಂದಲ. ಇದು ವೈದ್ಯಕೀಯ ಕಾಲೇಜೊಂದರಲ್ಲಿ ನಡೆಯುವ ಕಥೆಯಾಗಿದ್ದು, ನಾಯಕ ಅನಿರೀಕ್ಷಿತವಾಗಿ ಸಮಸ್ಯೆಯೊಂದಕ್ಕೆ ಸಿಲುಕಿಕೊಂಡು ನಂತರ ಹೇಗೆ ಅದರಿಂದ ಪಾರಾಗಿ ಬರುತ್ತಾನೆ ಎನ್ನುವುದೇ ಈ ಚಿತ್ರದ ಕಥೆ. ಡಾ.ಜಿ.ವಿ.ಪ್ರಸಾದ್ ಅವರ ನಿರ್ದೇಶನದ ಈ ಚಿತ್ರದಲ್ಲಿ ಅಕ್ಷಿತ್ ಶಶಿಕುಮಾರ್ ಹಾಗೂ ಅದಿತಿ ಪ್ರಭುದೇವ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಇಂದಿನಿಂದ ಈ ಚಿತ್ರ ರಾಜ್ಯಾದ್ಯಂತ ತೆರೆಗೆ ಬರುತ್ತಿದೆ. ಡಾ.ಜಿ.ವೆಂಕಟೇಶ್ ಪ್ರಸಾದ್ ಮೂಲತಃ ಒಬ್ಬ ವೈದ್ಯರು, ವೈದ್ಯಕೀಯ ವಿದ್ಯಾರ್ಥಿಗಳ ಮನಸ್ಥಿತಿ, ಗೊಂದಲ, ಅವ್ಯವಸ್ಥೆಯ ಸುತ್ತ ನಡೆಯುವ ಕಥೆಯನ್ನು ಈ ಚಿತ್ರದ ಮೂಲಕ ಹೇಳ ಹೊರಟಿದ್ದಾರೆ. ಪಾರುಲ್ ಅಗರವಾಲ್ ಹಾಗೂ ಹೇಮಚಂದ್ರರೆಡ್ಡಿ ಅವರ ನಿರ್ಮಾಣದ ಈ ಚಿತ್ರದಲ್ಲಿ ನಾಯಕಿ ಹಿರಿಯ ನಟ ಶಶಿಕುಮಾರ್ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಟ್ರೈಲರ್ ಬಿಡುಗಡೆ ಕಾರ್ಯಕ್ರಮಕ್ಕೆ ಅವರೂ ಸಹ ಆಗಮಿಸಿದ್ದರು. ಕಾರ್ಯಕ್ರಮದ ವಿಶೇಷ ಅತಿಥಿಗಳಾಗಿ ವಿನೋದ್ ಪ್ರಭಾಕರ್, ನಿರಂಜನ್ ಸುಧೀಂದ್ರ ಹಾಗೂ ಮಂಜು ಪಾವಗಡ ಸಹ ಪಾಲ್ಗೊಂಡಿದ್ದರು.

ನಾಯಕ ಅಕ್ಷಿತ್ ಶಶಿಕುಮಾರ್ ಮಾತನಾಡಿ, ಚಿತ್ರಕ್ಕೆ ಪ್ರತಿಯೊಬ್ಬರೂ ನೀಡಿದ ಸಹಕಾರವನ್ನು ನೆನೆಯುತ್ತಾ ಇದು ನನ್ನ ಎರಡನೇ ಚಿತ್ರ. ದಯವಿಟ್ಟು ಪ್ರೋತ್ಸಾಹಿಸಿ ಎಂದಿದ್ದಲ್ಲದೆ ನಾನು ಅಪ್ಪನ ನೆರಳಿನಲ್ಲಿ ಅರಳಿದರೂ ಬೇರೆಯವರ ಆಶ್ರಯ ಬೇಕಾಗುತ್ತದೆ. ಈ ವಿಷಯದಲ್ಲಿ ಸ್ನೇಹಿತರು ಅತ್ಯಂತ ಸಹಕಾರ ನೀಡುತ್ತಿದ್ದಾರೆ ಎಂದರು. ಬೆಂಗಳೂರು ಕುಮಾರ್ ಫಿಲಂಸ್‌ನ ಕುಮಾರ್ ಈ ಚಿತ್ರವನ್ನು ರಾಜ್ಯಾದ್ಯಂತ ಬಿಡುಗಡೆ ಮಾಡುತ್ತಿದ್ದಾರೆ.

ಇಂದಿನಿಂದ ಬಹುನಿರೀಕ್ಷಿತ

'ದೊಡ್ಡಹಟ್ಟಿ ಬೋರೇಗೌಡ'

ಕನ್ನಡ ಚಿತ್ರರಂಗದಲ್ಲಿ ಕೆಲವು ಚಿತ್ರಗಳು ತನ್ನ ಕಂಟೆಂಟ್ ಮೂಲಕವೇ ದೊಡ್ಡ ಮಟ್ಟದ ಕುತೂಹಲ, ಕಾತುರ ಕೆರಳಿಸಿರುತ್ತವೆ. ಅಂಥ ಮತ್ತೊಂದು ಚಿತ್ರ ದೊಡ್ಡಹಟ್ಟಿ ಬೋರೇಗೌಡ. ಈ ಹಿಂದೆ ಬಂದಿದ್ದ 'ತಿಥಿ' ಚಿತ್ರದ ನಂತರ ಅದೇ ಶೈಲಿಯ ನಿರೂಪಣೆ ಹಾಗೂ ಕಂಟೆಂಟ್ ಒಳಗೊಂಡ ಹಾಗೂ ವಾಸ್ತವಕ್ಕೆ ತೀರ ಹತ್ತಿರವಾದ ಚಿತ್ರ ಎಂಬ ಕಾರಣಕ್ಕೆ ಪ್ರೇಕ್ಷಕರಲ್ಲಿ ನಿರೀಕ್ಷೆ ಹುಟ್ಟು ಹಾಕಿದ್ದ ಈ ಚಿತ್ರಕ್ಕೆ ಕೆ.ಎಂ.ರಘು ಅವರು ಕಥೆ ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಈ ಹಿಂದೆ ತನ್ನ ಕಂಟೆಂಟ್ ಮೂಲಕವೇ ಕುತೂಹಲ ಮೂಡಿಸಿ, ಬಾಕ್ಸಾಫೀಸಿನಲ್ಲಿ ಉತ್ತಮ ಗಳಿಕೆ ಕಂಡಿದ್ದ 'ತರ್ಲೆವಿಲೇಜ್' ಚಿತ್ರವನ್ನು ರಘು ಅವರೇ ನಿರ್ದೇಶಿಸಿ ಗಮನ ಸೆಳೆದಿದ್ದರು. ಆ ನಂತರ 'ಪರಸಂಗ' ಚಿತ್ರವನ್ನು ನಿರ್ದೇಶನ ಮಾಡಿದ್ದರು. ಈಗ ಕೆ.ಎಂ.ರಘು, "ತಿಥಿ" ಸಿನಿಮಾದ ರೀತಿ ಸಂಪೂರ್ಣ ಗ್ರಾಮೀಣ ಪ್ರತಿಭೆಗಳನ್ನಿಟ್ಟುಕೊಂಡು "ದೊಡ್ಡಹಟ್ಟಿ ಬೋರೇಗೌಡ" ಚಿತ್ರವನ್ನು ನಿರ್ದೇಶಿಸಿದ್ದಾರೆ. ಗ್ರಾಮದ ಅಮಾಯಕ ಬೋರೇಗೌಡ ಒಂದು ಸೂರು ಕಟ್ಟಿಕೊಳ್ಳಲು ಎಷ್ಟು ಹರಸಾಹಸ ಮಾಡುತ್ತಾನೆ ಎಂಬುದನ್ನು ನೈಜತೆಗೆ ಹತ್ತಿರವಾಗುವ ಕಥೆಯೊಂದಿಗೆ ಹೇಳುವ ಪ್ರಯತ್ನವನ್ನು ನಿರ್ದೇಶಕರು ಮಾಡಿದ್ದಾರೆ. ಚಿತ್ರದಲ್ಲಿ ಶಿವಣ್ಣ ಅವರು ಸಹಜ ಅಭಿನಯದ ಮೂಲಕ ನೋಡುಗರ ಗಮನ ಸೆಳೆಯುತ್ತಾರೆ. ಈ ಚಿತ್ರವು



ಬಿಡುಗಡೆಗೂ ಪೂರ್ವದಲ್ಲೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರಥಮ ಅತ್ಯುತ್ತಮ ಚಿತ್ರ ಪ್ರಶಸ್ತಿ ಪಡೆದುಕೊಂಡಿದೆ. ರಾಜ್ಯಪಾಲರು ಪ್ರಶಸ್ತಿ ಪ್ರದಾನ ಮಾಡಿದ್ದರು. ರಾಜರಾಜೇಶ್ವರಿ ಕಂಬೈನ್ಸ್ ಲಾಂಛನದಲ್ಲಿ ಬಿ.ಸಿ.ಶಶಿಕುಮಾರ್ ಹಾಗೂ ಕೆ.ಎಂ. ಲೋಕೇಶ್ ಸೇರಿ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಶಿವಣ್ಣ ಬೀರಹುಂಡಿ, ಗೀತಾ, ಲಾವಣ್ಯ, ಕಲಾರತಿ ಮಹದೇವ್, ಕಾತ್ಯಾಯಿನಿ, ಯೋಗೇಶ್ ಮುಂತಾದ ಗ್ರಾಮೀಣ ಪ್ರತಿಭೆಗಳು ಈ ಚಿತ್ರದಲ್ಲಿ ನಟಿಸಿದ್ದಾರೆ ವೀನಸ್ ನಾಗರಾಜ್ ಅವರ ಛಾಯಾಗ್ರಹಣವಿರುವ ಈ ಚಿತ್ರಕ್ಕೆ ಹರ್ಷವರ್ಧನ್ ರಾಜ್ ಅವರ ಸಂಗೀತ ನಿರ್ದೇಶನ ಹಾಗೂ ಕೆ.ಎಂ.ಪ್ರಕಾಶ್ ಅವರ ಸಂಕಲನವಿದೆ.



'ಹೊಟ್ಟೆಪಾಡು' ಹಾಡು ಪಾಡು

ತನ್ನ ಶೀರ್ಷಿಕೆಯ ಮೂಲಕವೇ ಸಿನಿರಸಿಕರಲ್ಲಿ ಕುತೂಹಲ ಮೂಡಿಸಿರುವ ಚಿತ್ರ 'ಹೊಟ್ಟೆಪಾಡು'. ವಂದನ ಎಂಟರ್ ಪ್ರೈಸಸ್ ಲಾಂಛನದಲ್ಲಿ ಡಿ.ವಿ.ರಾಧ ಅವರು ನಿರ್ಮಿಸಿರುವ ಈ ಚಿತ್ರದ ಆಡಿಯೋ ಹಾಗೂ ಟ್ರೈಲರ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು.

'ದಿಗ್ದರ್ಶಕ' ಇದು ಮಾರ್ಗದರ್ಶಕನ ಕಥೆ..

ಈ ಹಿಂದೆ 'ರನ್-2' ಸೇರಿ ಹಲವಾರು ಚಿತ್ರಗಳನ್ನು ನಿರ್ದೇಶಿಸಿದ್ದ ಬಿ.ಎಸ್. ಸಂಜಯ್ ಅವರ ನಿರ್ದೇಶನದ, ವಿಭಿನ್ನ ಶೈಲಿಯ ಕಥಾಹಂದರ ಒಳಗೊಂಡ 'ದಿಗ್ದರ್ಶಕ' ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಯಾಯಿತು. ಫಿಲಂ ಚೇಂಬರ್ ಅಧ್ಯಕ್ಷ ಬಾ.ಮಾ. ಹರೀಶ್ ಅವರು ಟೀಸರ್ ಬಿಡುಗಡೆಗೊಳಿಸಿ ಶುಭ ಕೋರಿದರು.

ಈ ಸಂದರ್ಭದಲ್ಲಿ ಚಿತ್ರ ಕುರಿತಂತೆ ಮಾತನಾಡಿದ ನಿರ್ದೇಶಕ ಬಿ.ಎಸ್. ಸಂಜಯ್, 'ದಿಗ್ದರ್ಶಕ' ಎಂದರೆ ಚಿತ್ರದಲ್ಲಿ ಬರುವ ಎಲ್ಲಾ ಪಾತ್ರಗಳಿಗೆ ಮಾರ್ಗದರ್ಶನ ನೀಡುವಾತ. ಇದೊಂದು ನೈಜ ಘಟನೆ ಆಧಾರಿತ ಚಿತ್ರ, ಆಕ್ಷನ್ ಹಾಗೂ ಥ್ರಿಲ್ಲರ್ ಜಾನರ್ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ಜೆ.ಪಿ(ಜಯಪ್ರಕಾಶ್) ನಾಯಕನಾಗಿ ಅಭಿನಯಿಸಿದ್ದಾರೆ. ಈ ಹಿಂದೆ ನನ್ನ ನಿರ್ದೇಶನದ 'ಜಮಾನ' ಚಿತ್ರದಲ್ಲೂ ಜೆ.ಪಿ. ಅವರೇ ನಾಯಕನಾಗಿದ್ದರು. ಚೇತನ್ ರಮೇಶ್ ಅವರು ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ನಾನೇ ಕಥೆ ಬರೆದು ಸಂಕಲನ ಕೂಡ ಮಾಡಿದ್ದೇನೆ. ಚಿತ್ರದಲ್ಲಿ ನಾಲ್ಕು ಸಾಹಸ ಸನ್ನಿವೇಶಗಳಿದ್ದು, ಕೌರವ ವೆಂಕಟೇಶ್ ಸಾಹಸ ನಿರ್ದೇಶನ ಮಾಡಿದ್ದಾರೆ. ಜೆ.ಪಿ, ಪವನ್‌ಶೆಟ್ಟಿ, ಅನನ್ಯ, ಶುಭರಕ್ಷ, ಬಲ ರಾಜವಾಡಿ ಮುಂತಾದವರು ಪ್ರಮುಖ ತಾರಾಬಳಗದಲ್ಲಿದ್ದಾರೆ. ಮುಂದಿನ ತಿಂಗಳು ಚಿತ್ರವನ್ನು ರಿಲೀಸ್ ಮಾಡುವ ಯೋಜನೆಯಿದೆ ಎಂದರು. ನಂತರ ನಾಯಕ ಜೆ.ಪಿ. ಮಾತನಾಡಿ, ಈ ಹಿಂದೆ 'ಜಮಾನ' ಚಿತ್ರದಲ್ಲಿ ನಟಿಸಿದ್ದೆ. ನಿರ್ದೇಶಕ ಸಂಜಯ್ ಅವರು 'ದಿಗ್ದರ್ಶಕ' ಚಿತ್ರದ ಕಥೆ ಹೇಳಿ, ಈ ಪಾತ್ರವನ್ನು ನೀವೇ ಮಾಡಬೇಕು ಎಂದರು. ದಿಗ್ದರ್ಶಕ ಅಂದರೆ ದಿಕ್ಕುಗಳನ್ನು ತೋರಿಸುವವನು ಎಂದರ್ಥ. ಚಿತ್ರದ ಕೊನೆಯಲ್ಲಿ ಪ್ರೇಕ್ಷಕರಿಗೆ ಒಂದೊಳ್ಳೇ ಸಂದೇಶ ಚಿತ್ರದಲ್ಲಿದೆ ಎಂದರು. ನಿರ್ಮಾಪಕ ಚೇತನ್ ರಮೇಶ್ ಮಾತನಾಡಿ, ನಾನು ಡಾ||ರಾಜಕುಮಾರ್ ಅವರ ಮನೆಯಲ್ಲೇ ಹೆಚ್ಚು ಬೆಳೆದವನು. ಶಿವಣ್ಣ ಅವರ ಜೊತೆ ಹತ್ತಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ್ದೇನೆ. ಈ ಹಿಂದೆ ಜಮಾನ ಚಿತ್ರವನ್ನು ನಿರ್ಮಿಸಿದ್ದೆ. ಸಂಜಯ್ ಅವರು ಈ ಚಿತ್ರದ ಕಥೆ ಹೇಳಿದರು. ಕಂಟೆಂಟ್ ನನಗೆ ಇಷ್ಟವಾಯಿತು. ಹಾಗಾಗಿ ನಿರ್ಮಾಣಕ್ಕೆ ಮುಂದಾದೆ. ಎಲ್ಲಾ ಕಲಾವಿದರ ಹಾಗೂ ತಂತ್ರಜ್ಞರ ಸಹಕಾರದಿಂದ ಚಿತ್ರ ಚೆನ್ನಾಗಿ ಮೂಡಿಬಂದಿದೆ ಎಂದರು.

ಯುವಪ್ರತಿಭೆ ವಸಂತ್ ಈ ಚಿತ್ರಕ್ಕೆ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಜೊತೆಗೆ ಚಿತ್ರದ ನಾಯಕನಾಗೂ ನಟಿಸಿದ್ದಾರೆ. ಹಿರಿಯ ನಿರ್ದೇಶಕ ಓಂಸಾಯಿ ಪ್ರಕಾಶ್, ಬಾಲಾಜಿಸಿಂಗ್, ಅಡಕಮಾರನಹಳ್ಳಿಯ ರಾಜಣ್ಣ ಹಾಗೂ ಸಿರಿ ಮ್ಯೂಸಿಕ್‌ನ ಸುರೇಶ್ ಚಿಕ್ಕಣ್ಣ ಸೇರಿದಂತೆ ಅನೇಕ ಗಣ್ಯರು ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿ, ಚಿತ್ರತಂಡಕ್ಕೆ ಶುಭ ಕೋರಿದರು. ಸಿರಿ ಮ್ಯೂಸಿಕ್ ಮೂಲಕ ಈ ಚಿತ್ರದ ಹಾಡುಗಳು ಬಿಡುಗಡೆಯಾಗಿದೆ.

ಚಿತ್ರದ ನಾಯಕ ಹಾಗೂ ನಿರ್ದೇಶಕರೂ ಆದ ವಸಂತ ಮಾತನಾಡಿ, ನಾನು ಕಳೆದ ಇಪ್ಪತ್ತು ವರ್ಷಗಳಿಂದ ಚಿತ್ರರಂಗದಲ್ಲಿ ಕೆಲಸ ಮಾಡುತ್ತಿದ್ದೇನೆ. ಆಗಿನಿಂದಲೂ ನನಗೆ ಸಿನಿಮಾದಲ್ಲಿ ನಾಯಕನಾಗುವ ಆಸೆಯಿತ್ತು. ಆದರೆ ಸಾಧ್ಯವಾಗಿರಲಿಲ್ಲ. ಕೆಲವು ವರ್ಷ ಬೇರೆ ವ್ಯಾಪಾರದಲ್ಲಿ ತೊಡಗಿಕೊಂಡಿದ್ದೆ. ಈಗ ಹೊಟ್ಟೆಪಾಡು ಎಂಬ ಚಿತ್ರವನ್ನು ನಾನೇ ನಿರ್ದೇಶಿಸುವ ಜೊತೆಗೆ ನಿರ್ಮಾಣವನ್ನೂ ಸಹ ಮಾಡಿದ್ದೇವೆ. ನನ್ನ ಶ್ರೀಮತಿ ರಾಧಾ ಅವರು ಈ ಚಿತ್ರದ ನಿರ್ಮಾಪಕಿಯಾಗಿದ್ದು, ಜೊತೆಗೆ ಚಿತ್ರಕ್ಕೆ ನಾನೇ ಸಂಗೀತ ನಿರ್ದೇಶನ ಕೂಡ ಮಾಡಿದ್ದೇನೆ. ಹೊಟ್ಟೆಪಾಡು ವಿಭಿನ್ನ ಕಥಾಹಂದರ ಹೊಂದಿರುವ ಸಾಹಸಮಯ ಹಾಗೂ ಸಾಂಸಾರಿಕ ಕಥಾಹಂದರ ಒಳಗೊಂಡಿರುವ ಚಿತ್ರವಾಗಿದ್ದು, ಸದ್ಯದಲ್ಲೇ ಚಿತ್ರವನ್ನು ರಾಜ್ಯಾದ್ಯಂತ ಬಿಡುಗಡೆ ಮಾಡುತ್ತಿದ್ದೇವೆ. ನಮ್ಮ ಚಿತ್ರವು ಇಲ್ಲಿಯವರೆಗೆ ಬರಲು ನನ್ನ ಸ್ನೇಹಿತ ಆನಂದ್ ಕಾರಣ. ನನ್ನ ತಂಡದ ಸಹಕಾರದಿಂದ ಚಿತ್ರ ಈ ಹಂತಕ್ಕೆ ಬಂದಿದೆ ಎಂದು ಚಿತ್ರ ನಿರ್ಮಾಣದಲ್ಲಿ ನೆರವಾದ ಎಲ್ಲರನ್ನೂ ಸ್ಮರಿಸಿಕೊಂಡರು.

ನಿರ್ಮಾಪಕಿ ಡಿ.ವಿ.ರಾಧಾ, ಸಾಹಸ ನಿರ್ದೇಶಕ ಕೌರವ ವೆಂಕಟೇಶ್, ನಾಯಕಿ ಜಾಹ್ನವಿ ವಿಶ್ವನಾಥ್ ಸೇರಿದಂತೆ ಎಲ್ಲಾ ಕಲಾವಿದರು ಹಾಗೂ ತಂತ್ರಜ್ಞರು ಚಿತ್ರ ಕುರಿತಂತೆ ಮಾತನಾಡಿದರು. ತನ್ಮಯ್ ಎಸ್.ಆನಂದಕುಮಾರ್ ಅವರ ಚಿತ್ರಕಥೆ, ಸಂಭಾಷಣೆ, ನೃತ್ಯನಿರ್ದೇಶನವಿರುವ ಈ ಚಿತ್ರಕ್ಕೆ ರವಿಬೆಳಗುಂದಿ ಅವರ ಛಾಯಾಗ್ರಹಣ ಹಾಗೂ ಅಮಿತ್ ಜವಳಪುರ ಅವರ ಸಂಕಲನವಿದೆ. ವಸಂತ್, ಜಾಹ್ನವಿ ವಿಶ್ವನಾಥ್, ವಿನಯಪ್ರಸಾದ್, ಶೋಭರಾಜ್, ಅಪೂರ್ವ, ಶೈಲೇಶ್ ಇತರರು ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದಾರೆ.

'ಕಡಲತೀರದ ಭಾರ್ಗವ'

2 ಲಕ್ಷಕ್ಕೆ ಮೊದಲ ಟಿಕೆಟ್



ಕಡಲತೀರದ ಭಾರ್ಗವ ಕರಾವಳಿ ಭಾಗದ ಯುವಕನ ಸುತ್ತಸುತ್ತುವ ಕಥಾಹಂದರ ಉಳ್ಳ ಚಿತ್ರ ಇತ್ತೀಚೆಗೆ ಚಿತ್ರದ ಟ್ರೈಲರನ್ನು ಮಾಜಿ ಮೇಯರ್ ಮೋಹನ್‌ರಾಜು ಬಿಡುಗಡೆ ಮಾಡಿದರು.


ಮಾರ್ಚ್ 3ರಂದು ಈ ಚಿತ್ರ ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದ್ದು, ಚಿತ್ರದ ಮೊದಲ ಟಿಕೆಟ್‌ನ್ನು ಇದೇ ವೇದಿಕೆಯಲ್ಲಿ ಹರಾಜಿನ ಮೂಲಕ ಮಾರಾಟ ಮಾಡಲಾಯಿತು. ಸಮಾರಂಭದ ಅತಿಥಿಯಾಗಿ ಆಗಮಿಸಿದ್ದ ಮೋಹನ್ ರಾಜು ಅವರು 2 ಲಕ್ಷ ರೂ.ವರೆಗೆ ಕೂಗಿ ಚಿತ್ರದ ಮೊದಲ ಟಿಕೆಟ್‌ನ್ನು ತಮ್ಮದಾಗಿಸಿಕೊಂಡರು. ನಿರ್ಮಾಪಕರಾದ ಪಟೇಲ್ ವರುಣ್‌ರಾಜು ಹಾಗೂ ಭರತ್‌ಗೌಡ ಈ ಹಣವನ್ನು ಬಡ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ನೀಡುವುದಾಗಿ ಪ್ರಕಟಿಸಿದರು. ಕನ್ನಡದಲ್ಲಿ ಈಗ ಕಂಟೆಂಟ್ ಓರಿ ಯಂಟೆಡ್ ಚಿತ್ರಗಳು ಗೆಲ್ಲುತ್ತಿವೆ. ಅದರಲ್ಲೂ 'ಕೆ' ಅಕ್ಷರದಿಂದ ಆರಂಭವಾಗುವ ಕೆ.ಜಿ.ಎಫ್, ಕಾಂತಾರ ಚಿತ್ರಗಳು ಭಾರತೀಯ ಚಿತ್ರರಂಗವೇ ಗುರುತಿಸುವಂತೆ ದೊಡ್ಡಮಟ್ಟದ ಯಶಸ್ಸು ಕಂಡಿವೆ. ಅದೇ ರೀತಿ 'ಕ' ಅಕ್ಷರದಿಂದ ಆರಂಭವಾಗುವ "ಕಡಲತೀರದ ಭಾರ್ಗವ" ಕೂಡ ದೊಡ್ಡ ಯಶಸ್ಸು ಕಾಣಲಿ ಎಂದು ಮೋಹನ್‌ರಾಜು ಹಾರೈಸಿದರು.

ಚಿತ್ರದಲ್ಲಿ ಕಡಲತೀರದಲ್ಲಿ ವಾಸಿಸುವ ಭಾರ್ಗವನಾಗಿ ಪಟೇಲ್ ವರುಣ್ ರಾಜು ಅಭಿನಯಿಸಿದ್ದಾರೆ. ಚಿತ್ರ ಚೆನ್ನಾಗಿ ಬಂದಿದೆ. ಅಧಿಕ ಮೊತ್ತ ಕೊಟ್ಟು ಟಿಕೆಟ್ ಖರೀದಿಸಿದ ಮೋಹನ್‌ರಾಜು ಅವರಿಗೆ ಹಾಗೂ ಚಿತ್ರಕ್ಕೆ ಸಹಕಾರ ನೀಡಿದ ಪ್ರತಿಯೊಬ್ಬರಿಗೂ ನನ್ನ ಧನ್ಯವಾದ ಎಂದರು ನಟ - ನಿರ್ಮಾಪಕ ಪಟೇಲ್ ವರುಣ್ ರಾಜು. ನಾಯಕ ಭರತ್‌ಗೌಡ ಮಾತನಾಡಿ ನಾನು ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಚಿತ್ರದ ಹಾಡುಗಳು ಹಾಗೂ ಟ್ರೈಲರ್‌ಗೆ ಸಿಗುತ್ತಿರುವ ಪ್ರತಿಕ್ರಿಯೆ ಕಂಡು ಗೆದ್ದೇ ಗೆಲ್ಲುತ್ತೆ ಎನ್ನುವ ಭರವಸೆ ಮೂಡಿಸಿದೆ ಎಂದರು.

ಚಿತ್ರದ ಒಂದು ಸನ್ನಿವೇಶದ ಮೂಲಕ ಮಾತು ಪ್ರಾರಂಭಿಸಿದ ನಿರ್ದೇಶಕ ಪನ್ನಗ ಸೋಮಶೇಖರ್, ನಮ್ಮ ಚಿತ್ರಕ್ಕೂ ಹಿರಿಯ ಸಾಹಿತಿ ಶಿವರಾಮ ಕಾರಂತರ ಜೀವನಕ್ಕೂ ಯಾವುದೇ ಸಂಬಂಧವಿಲ್ಲ, ಕಡಲ ತೀರದಲ್ಲಿ ವಾಸಿಸುವ ನಮ್ಮ ನಾಯಕನ ಹೆಸರು ಭಾರ್ಗವ ಅಷ್ಟೇ ಎಂದು ಸ್ಪಷ್ಟನೆ ನೀಡಿದರು. ಸಮಾರಂಭದಲ್ಲಿ ಹಾಜರಿದ್ದ ಅತಿಥಿಗಳು ಹಾಗೂ ಚಿತ್ರತಂಡದ ಸದಸ್ಯರು ತಮ್ಮ ಅನುಭವ ಹಂಚಿಕೊಂಡರು.

ಸಿನಿಪದಬಂಧ-461

ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು

ವಿಳಾಸ

ದೂರವಾಣಿ ಸಂಖ್ಯೆ

ಎಡದಿಂದ ಬಲಕ್ಕೆ

1.ಮಾಘ ಮಾಸದ ಜಾಗರಣೆಯ ಹಬ್ಬ ! 4
2.ರಾಜಣ್ಣನ ಚಿತ್ರವೊಂದು ತೆಲುಗಿನ ಪ್ರಖ್ಯಾತ ನಟನ ಹೆಸರಿನಂತಿದೆ 4
3.ಶಿವಣ್ಣನ ಯುದ್ಧ ಭೂಮಿ 4
4.ಕನ್ನಡದ ಹನಿಮೂನ್ 4
6.ರವಿ,ರೋಜಾ, ಡಾಲಿ ಅಭಿನಯದ ಚಿತ್ರ 4
10.ಅಂಬಿ,ಶಂಕರ್ ಗೆಲುವಿಗಾಗಿ ಬಾರಿಸಿದ ನಗಾರಿ 4
11. ರಾಜ್ ಕುಮಾರ್ - ಹರಿಣಿ ಅಭಿನಯದ ಆರದ ಹಣತೆ 4
15.ವಿಷ್ಣುವರ್ಧನ್ - ಮಂಜುಳಾ ಅಭಿನಯದ ಚಿತ್ರಕ್ಕೆ ಜೋಸೈಮನ್ ನಿರ್ದೇಶಕ 4
16.ಶ್ರೀಮುರಳಿ ಕೊಬ್ಬಿದ ಆನೆ 4
17.ಕನ್ನಡ ನಾಡಿನ "ಕಾವೇರಿ" 4
18.ಹೆಂಡತಿಯ ಅಪ್ಪ ಸೇನೆಯವನು 4
19.ಲಕ್ಷ್ಮೀಯೊಂದಿಗೆ ಬಂದ ವಿದ್ಯಾದೇವತೆ 4

ವಿಜೇತರು: ಮೀನಾಕ್ಷಿಎಸ್ W/O ಸಿದ್ಧರಾಜು ಕೆ., ನಂ.10-ಎ, ಡಿ ಬ್ಲಾಕ್, ಗಿರಿದರ್ಶಿನಿ ಲೇಔಟ್, ಆಲನಹಳ್ಳಿ ಪೋಸ್ಟ್, ಮೈಸೂರು-28

ಸಿನಿ ಪದಬಂಧ 460ರ ಸರಿ ಉತ್ತರ

ಕಾ	ಲೇ	ಜ್	ಕು	ಮಾ	ರ್		ಹಿ	ಮ	ಪಾ	ತ
ಳಿಂ		ರಾ		ನ್ಯ				ತ್ಸ		ಲ್ವಾ
ಗ						ಕುಂ	ಬಾ	ರ		ರ್
ಸ	ರ್ವ	ರ್	ಸೋ	ಮ	ಣ್ಣ		ನ		ಜೋ	
ರ್ಪ			ತು				ನ್ನ		ಗು	
	ಯಾ	ರಿ	ಗೆ	ಸಾ	ಲು	ತ್ತೆ	ಸಂ	ಬ	ಳ	
	ರ		ದ್ದ				ಗೀ			ಪ
	ದು		ವ		ಅ	ಜಂ	ತ	ಎ	ಲ್ಲೋ	ರ
ಕ		ಅ	ಳು	ಕು						ಶು
ನ		ಮ				ಲಾ		ಮೂ		ರಾ
ಸು	ವ್ವ	ಲಾ	ಲಿ		ಕ	ಲಿ	ಯು	ಗ	ಭೀ	ಮ

ಮೇಲಿನಿಂದ ಕೆಳಕ್ಕೆ

1.ಗೋಲಿಬಾರ್ ಚಿತ್ರದ ನಿರ್ದೇಶಕ 4
2.ವಿಷ್ಣು - ಭವಾನಿ ಅಭಿನಯದ ಸರ್ಪದ ಹೆಣ್ಣು 4
5.ಶಶಿಯ ಆಗಮನಕ್ಕೆ ಎಸ್.ಮಹೇಂದರ್ ನಿರ್ದೇಶನವಿದೆ 4
7.ಕೃಷ್ಣನ ನಾಲಿಗೆಯಲ್ಲಿ ಕಂಡ ಬ್ರಹ್ಮಾಂಡ 4
8.ರಮೇಶ್,ಹೇಮಾ ಕಾಣಿಸಿಕೊಂಡ ವಿದೇಶ 4
9.ಆಮೇಲೆ ಎನ್ನುವರ್ಥದ ಚಿತ್ರ 4
10.ತಣ್ಣನೆ ಗಾಳಿಯಲ್ಲಿ ಕಾಡೆಲ್ಲ ಅಲೆದು ಬಂದವನು 4
12." _ _ _ _ ದೀಪವ ಹಚ್ಚಬೇಕು ಮಾನವ ......," 4
13.ಶ್ರೀನಿವಾಸಮೂರ್ತಿ - ಶ್ರೀ ಲಲಿತ ಅಭಿನಯದ ಚಿತ್ರ 4
14.ಗರ್ವಭಂಗಕ್ಕೆ ಒಳಗಾದ ಧೀರೇಂದ್ರ ಗೋಪಾಲ್ 4

ವನ್ಯಜೀವಿ ಉಪಟಳ ತಪ್ಪಿಸಲು ಶಾಶ್ವತ ಪರಿಹಾರಕ್ಕಾಗಿ ಕೊಡಗಲ್ಲಿ ಸಿಎಂ ವಿಶೇಷ ಸಭೆ ನಡೆಸಲಿ

ಆಮ್ ಆದ್ಮಿ ಪಕ್ಷದ ಪ್ರಚಾರ ಸಮಿತಿ ರಾಜ್ಯಾಧ್ಯಕ್ಷ ಬ್ರಿಜೇಶ್ ಕಾಳಪ್ಪ ಆಗ್ರಹ

ಮಡಿಕೇರಿ, ಫೆ.16– ಇತ್ತೀಚಿನ ವರ್ಷಗಳಲ್ಲಿ ಕೊಡಗು ಜಿಲ್ಲೆಯಲ್ಲಿ ವನ್ಯಜೀವಿಗಳ ಉಪಟಳ ಮಿತಿ ಮೀರಿದ್ದು, ಮಾನವ ಜೀವಹಾನಿ ನಿರಂತರವಾಗಿದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಮುಖ್ಯಮಂತ್ರಿಗಳು ಕೊಡಗಿನಲ್ಲಿ ವಿಶೇಷ ಸಭೆ ನಡೆಸಬೇಕು ಎಂದು ಆಮ್ ಆದ್ಮಿ ಪಾರ್ಟಿಯ ಪ್ರಚಾರ ಸಮಿತಿಯ ರಾಜ್ಯಾಧ್ಯಕ್ಷ ಬ್ರಿಜೇಶ್ ಕಾಳಪ್ಪ ಒತ್ತಾಯಿಸಿದ್ದಾರೆ.



ಪತ್ರಿಕಾ ಹೇಳಿಕೆ ನೀಡಿರುವ ಅವರು, ಸರ್ಕಾರದ ದಿವ್ಯ ನಿರ್ಲಕ್ಷ್ಯದಿಂದ ಇತ್ತೀಚೆಗೆ ಇಬ್ಬರು ಅಮಾಯಕರು ಹುಲಿ ದಾಳಿಗೆ ಬಲಿಯಾಗಿದ್ದಾರೆ. ಕಳೆದ 3–4 ವರ್ಷಗಳಿಂದ ಕೊಡಗಿನಲ್ಲಿ ವನ್ಯಜೀವಿಗಳ ದಾಳಿ ಮಿತಿ ಮೀರಿದ್ದರೂ ರಾಜ್ಯ ಸರ್ಕಾರ ಮತ್ತು ಸ್ಥಳೀಯ ಜನಪ್ರತಿನಿಧಿಗಳು ಗಂಭೀರವಾಗಿ ಪರಿಗಣಿಸದೆ ಅಸಡ್ಡೆ ತೋರಿದ ಪರಿಣಾಮ ಜನ ನಿತ್ಯ ಬವಣೆ ಅನುಭವಿಸುವಂತಾಗಿದೆ ಎಂದು ಆರೋಪಿಸಿದ್ದಾರೆ.

ಇಲ್ಲಿಯವರೆಗೆ ಯಾವುದೇ ಅರಣ್ಯ ಸಚಿವರು ಗಂಭೀರ ಸಮಸ್ಯೆಯಾಗಿರುವ ವನ್ಯಜೀವಿಗಳ ದಾಳಿ ಕುರಿತು ಕೊಡಗಿನಲ್ಲಿ ವಿಶೇಷ ಸಭೆ ನಡೆಸಿಲ್ಲ. ಜಿಲ್ಲೆಯ ಕೃಷಿಕ ವರ್ಗವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಇಲ್ಲಿನ ಸಮಸ್ಯೆಗಳ ಬಗ್ಗೆ ಗಂಭೀರ ಚಿಂತನೆಯನ್ನು ಮಾಡಿಲ್ಲ. ವನ್ಯಜೀವಿ ಉಪಟಳ ತಡೆಗೆ ಶಾಶ್ವತ ಯೋಜನೆ ರೂಪಿಸುವ ಉತ್ಸಾಹ ತೋರಿಲ್ಲ. ಕಾಫಿ ಬೆಳೆಯ ಮೂಲಕ ದೇಶದ ಆರ್ಥಿಕ ಕ್ಷೇತ್ರಕ್ಕೆ ಅತ್ಯಧಿಕ ಸಂಪನ್ಮೂಲವನ್ನು ಒದಗಿಸಿಕೊಡುತ್ತಿದ್ದರೂ ಕೊಡಗು ಜಿಲ್ಲೆಯ ಬೆಳೆಗಾರರ ಬಗ್ಗೆ ಸರ್ಕಾರದ ತಾತ್ಸಾರ ಮುಂದುವರೆದಿದೆ ಎಂದಿದ್ದಾರೆ.

ಇತ್ತೀಚೆಗೆ ಟಿ.ನರಸೀಪುರದಲ್ಲಿ ಚಿರತೆ ದಾಳಿ ನಡೆಸಿದಾಗ ಇಡೀ ಸರ್ಕಾರವೇ ಸಹಾಯಹಸ್ತ ಚಾಚುವ ರೀತಿಯಲ್ಲಿ ವರ್ತಿಸಿತ್ತು. ವಿಶೇಷ ಕಾಳಜಿ ತೋರಿ ಸಮಸ್ಯೆಗೆ ಸ್ಪಂದಿಸುವ ಭರವಸೆ ನೀಡಿತ್ತು. ರಾಜ್ಯದ ಯಾವುದೇ ಭಾಗದಲ್ಲಿ ವನ್ಯಜೀವಿಗಳು ದಾಳಿ ಮಾಡಿದಾಗಲೂ ವಿಶೇಷ ಕಾಳಜಿ ತೋರುವ ಸರ್ಕಾರ ಕೊಡಗು ಜಿಲ್ಲೆಯ ಬಗ್ಗೆ ಮಾತ್ರ ಯಾಕೆ ನಿರ್ಲಕ್ಷ್ಯ ತೋರುತ್ತಿದೆ ಎಂದು ಪ್ರಶ್ನಿಸಿದ್ದಾರೆ.

ಹುಲಿದಾಳಿಗೆ ಸಿಲುಕಿ ಇಬ್ಬರು ಅಮಾಯಕರು ಸಾವನ್ನಪ್ಪಿದರೂ ಸರ್ಕಾರದ ಒಬ್ಬನೇ ಒಬ್ಬ ಪ್ರತಿನಿಧಿ ಸ್ಥಳಕ್ಕೆ ಬಂದು ಸಾಂತ್ವನ ಹೇಳಿಲ್ಲ. ಹುಲಿಯೊಂದನ್ನು ಸೆರೆ ಹಿಡಿದು ಬೀಸುವ ದೊಣ್ಣೆಯಿಂದ ಅರಣ್ಯ ಇಲಾಖೆ ತಪ್ಪಿಸಿಕೊಂಡಿದೆ. ಜನರ ಪ್ರತಿರೋಧ ತಣ್ಣಗಾಗಿದೆ ಎಂದು ಸರ್ಕಾರವೂ ತೃಪ್ತಿಯಿಂದ ಇದೆ. ಆದರೆ ಇದು ಹೆಚ್ಚು ದಿನ ನಡೆಯುವುದಿಲ್ಲ, ಕೊಡಗಿನ ಜನರ ತಾಳ್ಮೆಗೂ ಒಂದು ಮಿತಿ ಇದೆ. ಎಲ್ಲರಂತೆ ಇಲ್ಲಿನವರ ಜೀವ ಮತ್ತು ಜೀವನಕ್ಕೂ ಬೆಲೆ ಇದೆ, ಸರ್ಕಾರದ ನಿರ್ಲಕ್ಷ್ಯದ ವಿರುದ್ಧ ಜನ ರೊಚ್ಚಿಗೇಳುವ ಮೊದಲು ಮುಖ್ಯಮಂತ್ರಿಗಳು ಜಿಲ್ಲೆಗೆ ಭೇಟಿ ನೀಡಿ ವನ್ಯಜೀವಿ ಸಮಸ್ಯೆ ಕುರಿತು ವಿಶೇಷ ಸಭೆ ನಡೆಸುವುದು ಸೂಕ್ತ ಎಂದು ಬ್ರಿಜೇಶ್ ಕಾಳಪ್ಪ ತಿಳಿಸಿದ್ದಾರೆ.

ಈಗಾಗಲೇ ನ್ಯಾಯಾಲಯದಲ್ಲಿ ಇತ್ಯರ್ಥವಾಗಿರುವ ಜಮ್ಮಾ ಜಾಗದ ವಿಚಾರವನ್ನು ಸರ್ಕಾರ ಮತ್ತೆ ಕೆದಕಿ ಕೊಡಗಿನ ಜನರಲ್ಲಿ ಗೊಂದಲ ಸೃಷ್ಟಿಸುವುದನ್ನು ಬಿಡಬೇಕು. ವನ್ಯಜೀವಿಗಳ ಉಪಟಳ ತಡೆ ಮತ್ತು ಅವುಗಳ ಆಹಾರದ ಕೊರತೆಯ ಕುರಿತು ಗಂಭೀರ ಚಿಂತನೆ ಮಾಡಬೇಕು. ಗುತ್ತಿಗೆ ಆಧಾರದಲ್ಲಿ ಜಮ್ಮಾ ಜಾಗವನ್ನು ನೀಡುತ್ತೇವೆ ಎನ್ನುವ ಅರ್ಥಹೀನ ಹೇಳಿಕೆಗಳನ್ನು ನೀಡುವುದನ್ನು ಜವಾಬ್ದಾರಿಯುತ ಸ್ಥಾನದಲ್ಲಿರುವ ಕಂದಾಯ ಸಚಿವರು ನಿಲ್ಲಿಸಬೇಕು ಎಂದು ಬ್ರಿಜೇಶ್ ಕಾಳಪ್ಪ ಒತ್ತಾಯಿಸಿದ್ದಾರೆ.

ನ್ಯಾಯಾಲಯ ಸಂಕೀರ್ಣ ಕಟ್ಟಡ ನಿರ್ಮಾಣಕ್ಕಾಗಿ ತೆರವುಗೊಳಿಸಿದ ಮರಕ್ಕೆ ಪರ್ಯಾಯವಾಗಿ ಸಾವಿರ ಗಿಡ ನೆಡುವ ಪ್ರಸ್ತಾವನೆ



ಮಡಿಕೇರಿ, ಫೆ.16– ಕುಶಾಲನಗರದಲ್ಲಿ ನೂತನ ನ್ಯಾಯಾಲಯ ಸಂಕೀರ್ಣ ಕಟ್ಟಡ ನಿರ್ಮಾಣ ಸಂದರ್ಭ ತೆರವುಗೊಳಿಸುವ ಮರಗಳಿಗೆ ಪರ್ಯಾಯವಾಗಿ 1 ಸಾವಿರ ಗಿಡಗಳನ್ನು ನೆಟ್ಟು ಬೆಳೆಸುವ ಪ್ರಸ್ತಾವನೆಯನ್ನು ಸಿದ್ಧಪಡಿಸಿರುವುದಾಗಿ ಕೊಡಗು ಜಿಲ್ಲಾ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಎಂ.ಭೃಂಗೇಶ್ ತಿಳಿಸಿದ್ದಾರೆ.

ಮಡಿಕೇರಿ ಜಿಲ್ಲಾ ನ್ಯಾಯಾಲಯ ಸಂಕೀರ್ಣದ ತಮ್ಮ ಕೊಠಡಿಯಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ ಮಾತನಾಡಿದ ಅವರು, ಕುಶಾಲನಗರ ತಾಲೂಕು ಮುಳ್ಳುಸೋಗೆ ಗ್ರಾಮದ ಸರ್ವೆ ನಂಬರ್ 52ರ ಜಾಗದಲ್ಲಿ ನ್ಯಾಯಾಲಯದ ಹೊಸ ಕಟ್ಟಡ ನಿರ್ಮಾಣಕ್ಕೆ ಸರ್ಕಾರದಿಂದ ಎಲ್ಲಾ ಸಿದ್ಧತೆಗಳು ನಡೆದಿದೆ. ಹೊಸ ಕಟ್ಟಡ ನಿರ್ಮಾಣಕ್ಕೆ ಅಡಚಣೆಯಾಗಿರುವ ತೇಗ ಮತ್ತು ಇತರೆ ಜಾತಿಯ 98 ಮರಗಳನ್ನು ತೆರವುಗೊಳಿಸುವ ಬಗ್ಗೆ ಆಕ್ಷೇಪಣೆ ಸಲ್ಲಿಸಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಡಾ. ಬಿ.ಸಿ. ಸತೀಶ ಸೇರಿದಂತೆ ಜಿಲ್ಲೆಯ ಅಧಿಕಾರಿಗಳ ಸಮ್ಮುಖದಲ್ಲಿ ಮರ ತೆರವುಗೊಳಿಸುವ ಸಂದರ್ಭ ನಿಯಮಗಳನ್ನು ಪಾಲಿಸುವ ಬಗ್ಗೆ ನ್ಯಾಯಾಧೀಶರು ಪ್ರಸ್ತಾಪಿಸಿದರು.

ನೂತನ ಕಟ್ಟಡ ನಿರ್ಮಾಣ ಸಂದರ್ಭ ಅಗತ್ಯವಿರುವ ಕೆಲವು ಮರಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಪರ್ಯಾಯವಾಗಿ ಒಂದು ಮರಕ್ಕೆ ಹತ್ತು ಗಿಡಗಳಂತೆ ನೆಟ್ಟು ಬೆಳೆಸಲು ಕುಶಾಲನಗರ ಪಟ್ಟಣ ವ್ಯಾಪ್ತಿಯಲ್ಲಿ ಸರಕಾರಿ ಅಥವಾ ಸಾರ್ವಜನಿಕ ಜಾಗಗಳನ್ನು ಗುರುತಿಸುವಂತೆ ಸಭೆಯಲ್ಲಿದ್ದ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಮಳೆಗಾಲ ಪ್ರಾರಂಭವಾಗುತ್ತಿದ್ದಂತೆ ಗಿಡಗಳನ್ನು ನೆಡಲು ಕ್ರಮ ಕೈಗೊಳ್ಳುವುದು, ಅವುಗಳ ನಿರ್ವಹಣೆ ಮಾಡುವುದರೊಂದಿಗೆ ಉತ್ತಮ ಪರಿಸರ ನಿರ್ಮಾಣಕ್ಕೆ ಎಲ್ಲಾ ರೀತಿಯ ಕ್ರಿಯಾ ಯೋಜನೆ ರೂಪಿಸುವಂತೆ ನ್ಯಾಯಾಧೀಶರು ಅರಣ್ಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಇದೇ ಸಂದರ್ಭ ಸಭೆಯಲ್ಲಿ ಉಪಸ್ಥಿತರಿದ್ದ ಮರ ತೆರವುಗೊಳಿಸುವ ಬಗ್ಗೆ ಆಕ್ಷೇಪಣೆ ಸಲ್ಲಿಸಿರುವ ಕುಶಾಲನಗರದ ಎಂ.ಎನ್. ಚಂದ್ರಮೋಹನ್, ತಮ್ಮ ಆಕ್ಷೇಪಣೆಗೆ ಸೂಕ್ತ ಸ್ಪಂದನೆ ದೊರಕಿದ ಹಿನ್ನೆಲೆಯಲ್ಲಿ ತನ್ನ ಆಕ್ಷೇಪಣೆಯನ್ನು ಹಿಂತೆಗೆಯುವುದಾಗಿ ಸಭೆಗೆ ತಿಳಿಸಿದರು.

ಸಭೆಯಲ್ಲಿ ಮಡಿಕೇರಿ ವಿಭಾಗದ ಸಾಮಾಜಿಕ ಅರಣ್ಯ ಉಪ ಸಂರಕ್ಷಣಾಧಿಕಾರಿ ಪೂರ್ಣಿಮಾ, ಜಿಲ್ಲಾ ಪಂಚಾಯಿತಿ ಮುಖ್ಯ ಲೆಕ್ಕಾಧಿಕಾರಿ ಜೀವನ್, ನ್ಯಾಯಾಲಯ ಮುಖ್ಯ ಆಡಳಿತ ಅಧಿಕಾರಿ ಕೆ.ಕೆಂಪರಾಜು, ಸೋಮವಾರಪೇಟೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎ.ಎ.ಗೋಪಾಲ್, ಕುಶಾಲನಗರ ವಲಯ ಅರಣ್ಯ ಅಧಿಕಾರಿ ಕೆ.ವಿ.ಶಿವರಾಮ್ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರ ವೆಂಕಟೇಶ ನಾಯಕ್, ಇಂಜಿನಿಯರ್ ಸ್ಯಜನ್ ಪೀಟರ್ ಹಾಜರಿದ್ದರು.

ಕೊಡಗಿನ ವೃದ್ಧ ತಿರುಪತಿಯಲ್ಲಿ ನಾಪತ್ತೆ

ನಾಪೋಕ್ಲು, ಫೆ.16– ಮಡಿಕೇರಿ ತಾಲೂಕು ಕುಂಜಿಲ ಕಕ್ಕಬೆ ಗ್ರಾಮ



ಮರಂದೊಡ ಗ್ರಾಮದ ನಿವಾಸಿ ಬಾರಿಕೆ ಆರ್. ಮಾದಪ್ಪ(71) ತಿರುಪತಿಯಲ್ಲಿ ಫೆ.12ರಂದು ನಾಪತ್ತೆಯಾಗಿದ್ದಾರೆ. ಕೊಡಗಿನಿಂದ ತಿರುಪತಿಗೆ ಹೋಗುವವರು/ಹೋಗಿರುವವರು ಇವರ ಸುಳಿವು ಸಿಕ್ಕಿದ ಕೂಡಲೇ ಈ ಕೆಳಗಿನ ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಿ ಮಾನವೀಯತೆ ಮೆರೆಯಬೇಕೆಂದು ಕುಟುಂಬವರ್ಗ ಕಳಕಳಿಯ ಮನವಿ ಮಾಡಿದೆ. (ದೂರವಾಣಿ: 9008584767, 8105491545, 9731295363)

ಜಿಲ್ಲಾ ಎಸ್ಪಿ ಕೆ.ರಾಮರಾಜನ್ ಅವರಿಗೆ ಅಭಿನಂದನೆ

ಮಡಿಕೇರಿ, ಫೆ.16– ಜಿಲ್ಲೆಗೆ ನೂತನವಾಗಿ ಆಗಮಿಸಿರುವ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಉಪಾಧ್ಯಕ್ಷರಾದ ಕೆ.ರಾಮರಾಜನ್ ಅವರನ್ನು ಜಿಲ್ಲಾ ಪ್ರಧಾನ ಆಯುಕ್ತರಾದ ಕೆ.ಟಿ.ಬೇಬಿಮ್ಯಾಥ್ಯು ಅವರು ಕಂಠವಸ್ತ್ರ ಹಾಕುವುದರ ಮೂಲಕ ಜಿಲ್ಲಾ ಸಂಸ್ಥೆಗೆ ಆತ್ಮೀಯವಾಗಿ ಅಭಿನಂದಿಸಿದರು.

ಈ ಸಂದರ್ಭ ಸ್ಕೌಟ್ಸ್ ಆಯುಕ್ತರಾದ ಜಿಮ್ಮಿ ಸ್ವಿಕೇರಾ, ಸ್ಥಾನಿಕ ಆಯುಕ್ತರಾದ ಎಚ್.ಆರ್.ಮುತ್ತಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಎಂ.ವಸಂತಿ, ಜಿಲ್ಲಾ ಸಂಘಟಕರಾದ ಯು.ಸಿ.ದಮಯಂತಿ ಹಾಗೂ ಜಿಲ್ಲಾ ಸಹಕಾರ್ಯದರ್ಶಿ ಬೊಳ್ಳಜಿರ ಬಿ. ಅಯ್ಯಪ್ಪ ಇತರರು ಇದ್ದರು.



ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ ಫೆ.16– ಶನಿವಾರಸಂತೆ 66 ಕೆವಿ ವಿದ್ಯುತ್ ವಿತರಣಾ ಕೇಂದ್ರಲ್ಲಿ ಶಕ್ತಿ ಪರಿವರ್ತಕದ ಕಾಮಗಾರಿ ಮತ್ತು ನಿರ್ವಹಣೆ ದುರಸ್ತಿ ಕಾರ್ಯವನ್ನು ಕೆಪಿಟಿಸಿಎಲ್‌ರವರು ನಿರ್ವಹಿಸಬೇಕಿರುವುದರಿಂದ ಫೆ.17 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಉಪಕೇಂದ್ರಗಳಲ್ಲಿ ವಿದ್ಯುತ್ ಸರಬರಾಜು ಸ್ಥಗಿತಗೊಳಿಸಲಾಗುವುದು. ಆದ್ದರಿಂದ ಹಂಡ್ಲಿ, ಕೊಡ್ಲಿಪೇಟೆ, ಶನಿವಾರಸಂತೆ, ಆಲೂರು, ಗೋಪಾಲಪುರ, ಬಲ್ಲಾರಳ್ಳಿ, ಕಿತ್ತೂರು ಗೌಡಳ್ಳಿ, ನಿಡ್ತ, ಮಣಜೂರು, ಬೀಟಿಕಟ್ಟೆ, ಅಂಕನಹಳ್ಳಿ ಹಾಗೂ ಸುತ್ತಮುತ್ತಲ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಸೆಸ್ಕ್ ಕಾರ್ಯನಿರ್ವಾಹಕ ಎಂಜಿನಿಯರ್ ಅನಿತಾ ಬಾಯಿ ಅವರು ಕೋರಿದ್ದಾರೆ.


ಇಂದು ಬಜೆಟ್: ಮಂಡ್ಯ ಜಿಲ್ಲೆ ಪ್ರಮುಖ ಬೇಡಿಕೆಗಳೇನು..?

ಮಂಡ್ಯ, ಫೆ.16– ಬಿಜೆಪಿ ಸರ್ಕಾರದ ಕೊನೆ ಬಜೆಟ್ ಅನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶುಕ್ರವಾರ ಮಂಡಿಸಲಿದ್ದು, ಕೃಷಿ, ಮೂಲ ಸೌಕರ್ಯ, ವೈದ್ಯಕೀಯ ಸೇರಿದಂತೆ ಹಲವು ಪ್ರಮುಖ ಬೇಡಿಕೆಗಳಿವೆ. ಈ ಪೈಕಿ ರಾಜ್ಯ ಸರ್ಕಾರ ಎಷ್ಟು ಬೇಡಿಕೆಗಳನ್ನು ಈಡೇರಿಸಲಿದೆ. ಜೊತೆಗೆ ಹೆಚ್ಚುವರಿಯಾಗಿ ಜಿಲ್ಲೆಗೆ ಯಾವ ಕೊಡುಗೆ ನೀಡಲಿದೆ ಎಂಬ ಕುತೂಹಲ ಜಿಲ್ಲೆ ಜನರಲ್ಲಿ ಮೂಡಿದೆ.

ಈಗಾಗಲೇ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್ ಸೇರಿದಂತೆ ರೈತ ಹಾಗೂ ಪ್ರಗತಿಪರ ಮುಖಂಡರು ಸರಣಿ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದ್ದು, ಯಾವ್ಯಾವ ಬೇಡಿಕೆಗಳು ಈಡೇರಲಿವೆ ಎಂಬುದನ್ನು ಕಾದು ನೋಡಬೇಕಿದೆ.

ಪ್ರಮುಖ ಬೇಡಿಕೆಗಳು: ಕಬ್ಬು ಹಾಗೂ ಹಾಲಿಗೆ ಬೆಂಬಲ ಬೆಲೆ ನಿಗದಿ, ಜಿಲ್ಲೆಗೆ ಸರ್ಕಾರಿ ನರ್ಸಿಂಗ್ ಕಾಲೇಜು, ಪ್ಯಾರಾ ಮೆಡಿಕಲ್ ಮತ್ತು ಫಿಜಿಯೋಥೆರಪಿ ಕಾಲೇಜು ಮಂಜೂರು, ರೈತರು ಬೆಳೆಯುವ ಹಣ್ಣು, ತರಕಾರಿಗಳ ಸಂರಕ್ಷಣೆ ಹಾಗೂ ಬೆಲೆ ಕುಸಿತ ಸಂದರ್ಭ ದಾಸ್ತಾನು ಮಾಡಲು ಕೆ.ಆರ್.ಪೇಟೆ ಮತ್ತು ಪಾಂಡವಪುರದಲ್ಲಿ ಕೋಲ್ಡ್ ಸ್ಟೋರೇಜ್ ನಿರ್ಮಾಣ. ಜಿಲ್ಲೆಯ ರೈತರು ಹೆಚ್ಚು ಕಬ್ಬು ಬೆಳೆಯುತ್ತಿದ್ದು, ಸಾವಯವ ಬೆಲ್ಲ ನಿರ್ಮಾಣ ಘಟಕಗಳಿಗೆ ಉತ್ತೇಜನ ನೀಡಲು ಸಬ್ಸಿಡಿ ಘೋಷಿಸಬೇಕು. ಜನರ ಆರೋಗ್ಯದ ದೃಷ್ಟಿಯಿಂದ ಕಲಬೆರಕೆ ಇಲ್ಲದ ಅಡುಗೆ ಎಣ್ಣೆ ತಯಾರಿಕಾ ಘಟಕ ಹಾಗೂ ಸ್ಥಳೀಯವಾಗಿ ಮಾರುಕಟ್ಟೆ ಪ್ರೋತ್ಸಾಹಿಸಲು ಘಟಕ ತೆರೆಯುವ ಮೂಲಕ ನಿರುದ್ಯೋಗಿ ಯುವಕರಿಗೆ ಸಬ್ಸಿಡಿ ನೀಡುವುದು.

ಜಿಲ್ಲೆಯ ಹಾಲು ಒಕ್ಕೂಟಕ್ಕೆ ರೈತರು ನಿತ್ಯ ಎಂಟೂವರೆ ಲಕ್ಷ ಲೀ. ಹಾಲು ಸರಬರಾಜು ಮಾಡುತ್ತಿದ್ದು, ಒಂದು ಲಕ್ಷದ ಐದು ಸಾವಿರ ಕುಟುಂಬಗಳು, ಒಂದು ಸಾವಿರದ ಇನ್ನೂರ ಎಪ್ಪತ್ತೇಳು ಹಾಲು ಉತ್ಪಾದಕರ ಸಹಕಾರ ಸಂಘಗಳಿದ್ದು, ಜಿಲ್ಲೆಯಲ್ಲಿ 4 ಲಕ್ಷಕ್ಕೂ ಹೆಚ್ಚು ಜಾನುವಾರುಗಳಿವೆ. ಈ ಕಾರಣದಿಂದಾಗಿ ಜಿಲ್ಲೆಗೆ ಪಶು ಆಹಾರ ತಯಾರಿಕಾ ಘಟಕ



ಮಂಜೂರು ಮಾಡಬೇಕು. ತೋಟಗಾರಿಕಾ ಬೆಳೆ ಪ್ರೋತ್ಸಾಹಿಸಲು ಜಿಲ್ಲೆಯಲ್ಲಿ 93 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕಾ ಬೆಳೆ ಬೆಳೆಯಲಾಗುತ್ತಿದ್ದು, ಅದರಲ್ಲಿ 65 ಸಾವಿರ ಹೆಕ್ಟೇರ್ ತೆಂಗು ಬೆಳೆ, 1800 ಹೆಕ್ಟೇರ್‌ನಲ್ಲಿ ಬಾಳೆ, 2000 ಹೆಕ್ಟೇರ್‌ನಲ್ಲಿ ಮಾವು, 8000 ಹೆಕ್ಟೇರ್ ಪ್ರದೇಶದಲ್ಲಿ ತರಕಾರಿ, 1200 ಹೆಕ್ಟೇರ್ ಪ್ರದೇಶದಲ್ಲಿ ಸೇವಂತಿಗೆ ಹೂವು, 600 ಹೆಕ್ಟೇರ್ ಪ್ರದೇಶದಲ್ಲಿ ಚಂಡು ಹೂವು ಸೇರಿದಂತೆ ಜಿಲ್ಲೆಯಲ್ಲಿ ಹೊಸದಾಗಿ 2000 ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಸಸಿಗಳನ್ನು ನೆಟ್ಟಿದ್ದು, ಈ ಎಲ್ಲ ಕಾರಣಗಳ ಹಿನ್ನೆಲೆಯಲ್ಲಿ ರೈತರಿಗೆ ಅನುಕೂಲ ಕಲ್ಪಿಸಲು ಒಂದು ತೋಟಗಾರಿಕಾ ಕಾಲೇಜನ್ನು ಮಂಜೂರು ಮಾಡಬೇಕು.

ಜಿಲ್ಲೆಯಲ್ಲಿ 5.05 ಲಕ್ಷ ಮನೆಗಳಿದ್ದು, ಮಳೆ ನೀರನ್ನು ಇಂಗಿಸುವ ಮತ್ತು ಮಳೆ ಕೊಯ್ಲು ಮಾಡುವ ಮನೆಗಳಿಗೆ ಸಬ್ಸಿಡಿ ನೀಡಿ ಉತ್ತೇಜಿಸುವ ಮುಖಾಂತರ ಅಂತರ್ಜಲ ಹೆಚ್ಚಿಸುವುದು. ಜಿಲ್ಲೆಯ ಕೆರೆಗಳ ಹೂಳು ತೆಗೆಯಲು ವಿಶೇಷ ಅನುದಾನ. ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಸಣ್ಣಪುಟ್ಟ ಯಂತ್ರೋಪಕರಣ ಬದಲಾವಣೆ ಮಾಡಲು 3 ಕೋಟಿ ಅನುದಾನ ನೀಡುವುದು. ಜಿಲ್ಲೆಗೆ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಮಂಜೂರು. ಜಿಲ್ಲೆಯಲ್ಲಿ 50 ಸಾವಿರ ಕುಟುಂಬಗಳ 2 ಲಕ್ಷ ಜನರು ರೇಷ್ಮೆ ಕೃಷಿ ಅವಲಂಬಿಸಿರುವುದರಿಂದ ಸರ್ಕಾರಿ ಸ್ವಾಮ್ಯದಲ್ಲಿ ಆಟೋಮ್ಯಾಟಿಕ್ ರೀಲಿಂಗ್ ಘಟಕ ಪ್ರಾರಂಭಿಸಬೇಕು.

ಜಿಲ್ಲೆಯಲ್ಲಿ ಕುರಿ ಮತ್ತು ಮೇಕೆ ಹೆಚ್ಚಾಗಿ ಸಾಕಾಣಿಕೆ ಮಾಡುತ್ತಿದ್ದು, ಕುರಿ ಮತ್ತು ಮೇಕೆಗಳ ಚರ್ಮಕ್ಕೆ ಬೇಡಿಕೆ ಕಡಿಮೆಯಾಗಿರುವುದರಿಂದ ಸಂಕಷ್ಟದಲ್ಲಿರುವ ಕುರಿ ಮತ್ತು ಮೇಕೆ ಸಾಕಾಣಿಕೆದಾರರ ನೆರವಿಗೆ ಸರ್ಕಾರ ಧಾವಿಸಬೇಕಾಗಿದ್ದು, ಈ ನಿಟ್ಟಿನಲ್ಲಿ ಸರ್ಕಾರಿ ಸ್ವಾಮ್ಯದ ಚರ್ಮ ತಯಾರಿಕಾ ಘಟಕವನ್ನು ಮಂಜೂರು ಮಾಡುವುದು. ನಗರದ ಅಭಿವೃದ್ಧಿ, ಮೈಷುಗರ್ ಕಾರ್ಖಾನೆ ಹಾಗೂ ಜಿಲ್ಲೆಯ ರಸ್ತೆ, ಚರಂಡಿಗಳ ಅಭಿವೃದ್ಧಿಗಾಗಿ 300 ಕೋಟಿ ರೂ. ವಿಶೇಷ ಅನುದಾನ ಘೋಷಿಸುವುದು ಸೇರಿದಂತೆ ಹಲವು ಪ್ರಮುಖ ಬೇಡಿಕೆಗಳಿದ್ದು, ಇವುಗಳ ಪೈಕಿ ಸರ್ಕಾರ ಯಾವ ಬೇಡಿಕೆಗಳನ್ನು ಈ ಬಾರಿ ಬಜೆಟ್‌ನಲ್ಲಿ ಈಡೇರಿಸಲಿದೆ ಎಂಬುದನ್ನು ಕಾದು ನೋಡಬೇಕಿದೆ.

ಪ್ರಜಾಪ್ರಭುತ್ವ, 3 ಮಂಗಗಳು ನಾಟಕ ಪ್ರದರ್ಶನ

ಮಂಡ್ಯ, ಫೆ.16– ಕರ್ನಾಟಕ ಸಂಘ ಹಾಗೂ ಸಮತಾ ಸಿಂಧೂ ಟ್ರಸ್ಟ್ ವತಿಯಿಂದ ಫೆ.19ರಂದು ಡಾ.ಬೆಸಗರಹಳ್ಳಿ ರಾಮಣ್ಣ ಕಥೆ ಆಧಾರಿತ ಪ್ರಜಾಪ್ರಭುತ್ವ ಮತ್ತು ಮೂರು ಮಂಗಗಳು ನಾಟಕವನ್ನು ನಗರದ ಪಿಇಎಸ್ ಕಾಲೇಜಿನ ಸ್ವಾಮಿ ವಿವೇಕಾನಂದ ರಂಗ ಮಂದಿರದಲ್ಲಿ ಆಯೋಜಿಸಲಾಗಿದ್ದು, ಸಂಜೆ 6.30ಕ್ಕೆ ನಾಟಕ ಪ್ರದರ್ಶನವಾಗಲಿದ್ದು, ಒಂದೂವರೆ ಗಂಟೆಗಳ ಕಾಲ ಪ್ರದರ್ಶನ ಕಾಣುವ ನಾಟಕಕ್ಕೆ 50 ರೂ.ಪ್ರವೇಶ ದರ ನಿಗದಿ ಮಾಡಲಾಗಿದೆ. ನಗರದ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ನಾಟಕ ವೀಕ್ಷಿಸಲು ಬರಬೇಕೆಂದು ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶ್ ಗೌಡ ಮನವಿ ಮಾಡಿಕೊಂಡರು.

ನಿವೃತ್ತ ಸರ್ಕಾರಿ ನೌಕರರ ಸಂಘಕ್ಕೆ ನಜೀರ್ ಅಹಮದ್ ಅಧ್ಯಕ್ಷ



ಕೆ.ಆರ್.ಪೇಟೆ, ಫೆ.16– ರಾಜ್ಯ ನಿವೃತ್ತ ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷರಾಗಿ ನಜೀರ್ ಅಹಮದ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ ಎಸ್.ಎಲ್.ರಂಗಸ್ವಾಮಿ ಅವರ ಸೇವಾವಧಿ ಮುಕ್ತಾಯವಾದ ಹಿನ್ನೆಲೆಯಲ್ಲಿ ನಡೆದ ಸಭೆಯಲ್ಲಿ ನಜೀರ್ ಅಹಮದ್ ಅವರನ್ನು ನೂತನ ಅಧ್ಯಕ್ಷರಾಗಿ ಪದಾಧಿಕಾರಿಗಳು ಆಯ್ಕೆಗೊಳಿಸಿದರು. ಉಳಿದಂತೆ ಉಪಾಧ್ಯಕ್ಷರಾಗಿ ನರಸಿಂಹರಾಜೇ ಅರಸ್, ವಸಂತಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ಶ್ರೀಕಂಠೇಗೌಡ, ಜಂಟಿ ಕಾರ್ಯದರ್ಶಿ ಎನ್.ಶಿವಲಿಂಗಪ್ಪ, ಖಜಾಂಚಿ ಸಿ.ಕಾಳೇಗೌಡ, ಆಂತರಿಕ ಲೆಕ್ಕ ಪರಿಶೋಧಕ ಎ.ಎಲ್.ನಂಜಪ್ಪ, ಸಾಂಸ್ಕೃತಿಕ ಕಾರ್ಯದರ್ಶಿ ಎಲ್.ಬಿ.ಜವರೇಗೌಡ, ಸಂಘಟನಾ ಕಾರ್ಯದರ್ಶಿ ಕೆ.ಎನ್. ಬೊಮ್ಮೇಗೌಡ, ಕಾರ್ಯಕಾರಿ ಸಮಿತಿ ನಿರ್ದೇಶಕರಾಗಿ ಟಿ.ಪ್ರಕಾಶ್, ಎಸ್.ಟಿ.ಯೋಗೇಂದ್ರ, ಎಂ.ಸ್ವಾಮೀಗೌಡ, ಸಿ.ಎಚ್.ಮಂಜುನಾಥ್, ರಾಮಚಂದ್ರು ಪರಶಿವಮೂರ್ತಿ ಆಯ್ಕೆಯಾಗಿದ್ದಾರೆ.

ಅಪರಿಚಿತ ವಾಹನ ಡಿಕ್ಕಿ: ಚಿರತೆ ಸಾವು

ಶ್ರೀರಂಗಪಟ್ಟಣ, ಫೆ.16– ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಚಿರತೆ ಬಲಿಯಾಗಿರುವ ಘಟನೆ ತಾಲೂಕಿನ ಗೌಡಹಳ್ಳಿ ಗೇಟ್ ಬಳಿಯ ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಗುರುವಾರ ರಾತ್ರಿ ನಡೆದಿದೆ. ಸುಮಾರು ಒಂದೂವರೆ ವರ್ಷದ ಹೆಣ್ಣು ಚಿರತೆ ಬಲಿಯಾಗಿದ್ದು, ಚಿರತೆ ಮೈಸೂರು–ಬೆಂಗಳೂರು ಹೆದ್ದಾರಿ ದಾಟುವಾಗ ವೇಗವಾಗಿ ಬಂದ ಅಪರಿಚಿತ ವಾಹನ ಡಿಕ್ಕಿ ಹೊಡೆದಿದೆ. ಪರಿಣಾಮ ಚಿರತೆ ಸ್ಥಳದಲ್ಲೇ ಸಾವನ್ನಪ್ಪಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ವಲಯ ಅರಣ್ಯಾಧಿಕಾರಿ ಅನಿತಾ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿದರು. ಅಲ್ಲದೇ ಇಂದು ರಾತ್ರಿ ಶೆಟ್ಟಹಳ್ಳಿ ಅರಣ್ಯ ಪ್ರದೇಶದಲ್ಲಿ ಚಿರತೆ ಕಳೇಬರ ಸುರಕ್ಷಿತವಾಗಿಟ್ಟು ನಂತರ ಬೆಳಗ್ಗೆ ಮರಣೋತ್ತರ ಪರೀಕ್ಷೆ ನಡೆಸಿ ಅಂತ್ಯಕ್ರಿಯೆ ಮಾಡಲಾಗುವುದು ಎಂದರು.

ರೈತ ಮಹಾಲಿಂಗಯ್ಯ ಮನೆಗೆ ಕಾಂಗ್ರೆಸ್ ಮುಖಂಡರ ಭೇಟಿ, ಸಾಂತ್ವನ

ಪಾಂಡವಪುರ, ಫೆ.16– ಇತ್ತೀಚೆಗೆ ಕಬ್ಬಿನ ಗದ್ದೆಯಲ್ಲಿ ಬೆಂಕಿ ನಂದಿಸಲು ಹೋಗಿ ಸಾವನ್ನಪ್ಪಿದ ಮಂಡ್ಯ ತಾಲೂಕಿನ ಮೊಡಚಾಕನಹಳ್ಳಿ ಗ್ರಾಮದ ರೈತ ಮಹಾಲಿಂಗಯ್ಯನವರ ಮನೆಗೆ ಕಾಂಗ್ರೆಸ್ ಮುಖಂಡರು ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿದರು.

ರೈತ ಮಹಾಲಿಂಗಯ್ಯ ಮನೆಗೆ ಭೇಟಿಕೊಟ್ಟ ಕೆಪಿಸಿಸಿ ಸದಸ್ಯ ಎಚ್. ತ್ಯಾಗರಾಜು, ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್, ಜಿಪಂ ಮಾಜಿ ಸದಸ್ಯ ಎಚ್.ಮಂಜುನಾಥ್ ಅವರು ಪತ್ನಿ ಸರೋಜಮ್ಮ, ಮಕ್ಕಳಿಗೆ ಸಾಂತ್ವನ ಹೇಳಿ 20 ಸಾವಿರ ರೂ. ನೆರವು ನೀಡಿದರು.

ಜಿಪಂ ಮಾಜಿ ಸದಸ್ಯ ಎಚ್.ಮಂಜುನಾಥ್ ಮಾತನಾಡಿ, ಮೊಡಚಾಕನಹಳ್ಳಿಯಲ್ಲಿ ಕಬ್ಬಿನ ಗದ್ದೆಗೆ ತಗುಲಿದ್ದ ಬೆಂಕಿ



ನಂದಿಸಲು ಹೋಗಿ ರೈತ ಮಹಾಲಿಂಗಯ್ಯ ಸಾವನ್ನಪ್ಪಿದ್ದರು. ಈ ಹಿನ್ನೆಲೆಯಲ್ಲಿ ಅವರ ಕುಟುಂಬಕ್ಕೆ ಸಾಂತ್ವನ ಹೇಳಿ ಕೈಲಾದ ನೆರವು ನೀಡಿದ್ದೇವೆ ಎಂದರು.

ಹೆಚ್.ತ್ಯಾಗರಾಜು ಮಾತನಾಡಿ, ಬೆಂಕಿ ಅನಾಹುತದಲ್ಲಿ ಮೃತಪಟ್ಟ ಮಹಾಲಿಂಗಯ್ಯ ಅವರ ಕುಟುಂಬಕ್ಕೆ ಸರ್ಕಾರ ಹೆಚ್ಚಿನ ನೆರವು ನೀಡಬೇಕು ಎಂದರು. ಈ ವೇಳೆ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಡಿ. ಗಂಗಾಧರ್, ಮುಖಂಡರಾದ ಎಂ.ಎಲ್. ಸುಕೇಶ್, ಶಂಕರ್, ಎಂ.ಎಲ್.ನಾಗರಾಜ್, ಎಂ.ಎಲ್.ಲಿಂಗೇಗೌಡ, ಮೇಲುಕೋಟೆ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ಚಂದ್ರಶೇಖರ್ ಸೇರಿದಂತೆ ಹಲವರಿದ್ದರು.

ಮಳವಳ್ಳಿ ಕೆರೆಗೆ ಶಾಸಕ ನಿರಂಜನ್‌ಕುಮಾರ್ ಬಾಗಿನ



ಗುಂಡ್ಲುಪೇಟೆ, ಫೆ.16– ಶೀಘ್ರದಲ್ಲೇ ಕ್ಷೇತ್ರದ 110 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಕಾರ್ಯಗತಗೊಳ್ಳಲಿದೆ ಎಂದು ಶಾಸಕ ಸಿ.ಎಸ್.ನಿರಂಜನಕುಮಾರ್ ಹೇಳಿದರು.

ತಾಲೂಕಿನ ಮಳವಳ್ಳಿ ಗ್ರಾಮದಲ್ಲಿರುವ ಕಬಿನಿ ನದಿ ಮೂಲದಿಂದ ನೀರು ತುಂಬಿಸಿರುವ ಮಳವಳ್ಳಿ ಕೆರೆಗೆ ಬಾಗಿನ ಸಮರ್ಪಿಸಿ ಮಾತನಾಡಿದರು.

ಕ್ಷೇತ್ರದ ರೈತರ ಆಸೆಯಂತೆ ಈಗಾಗಲೇ ಹಲವಾರು ಕೆರೆಗಳಿಗೆ ಕಬಿನಿ ನದಿಮೂಲದಿಂದ ನೀರು ತುಂಬಿಸಲಾಗಿದೆ. ಇದು ಫಲಪ್ರದವಾಗಿದ್ದು, ಹಲವೆಡೆ ಬತ್ತಿಹೋಗಿದ್ದ ಬೋರ್‌ವೆಲ್‌ಗಳಲ್ಲಿ ನೀರು ಸಮರ್ಪಕವಾಗಿ ಸಿಗುವಂತೆ ಆಗಿದೆ. ಯಾವುದೇ ಕೈಗಾರಿಕೆ ಇಲ್ಲದೆ ಇರುವ ಈ ಕ್ಷೇತ್ರದಲ್ಲಿ ರೈತಾಪಿ ವರ್ಗದವರು ಹೈನುಗಾರಿಕೆ ಮತ್ತು ವ್ಯವಸಾಯವನ್ನು ನಂಬಿ ಜೀವನ ನಡೆಸುತ್ತಿದ್ದಾರೆ. ಇವರಿಗೆ ಅನುಕೂಲವಾಗುವಂತೆ ಮಾಡಲು ಕ್ಷೇತ್ರದ ವಿವಿಧ ಭಾಗದ 110 ಕೆರೆಗಳಿಗೆ ಕಬಿನಿ ನದಿ ಮೂಲದಿಂದ ನೀರು ತುಂಬಿಸುವ ಗುರಿಯನ್ನು ಹೊಂದಿದ್ದೇನೆ. ಇದಕ್ಕಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದ ಅನುಮೋದನೆಯನ್ನು ಮಾಡಿಸಿಕೊಂಡಿದ್ದು, ಅತೀ ಶೀಘ್ರದಲ್ಲೇ 110 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ 430 ಕೋಟಿ ರೂಪಾಯಿ ಬಿಡುಗಡೆಗೊಳ್ಳಲಿದೆ. ಇದು ಕ್ಷೇತ್ರದ ರೈತಾಪಿ ಜನರ ಜೀವನಕ್ಕೆ ಕೆರೆಗಳು ಜೀವನಾಡಿಯಾಗುತ್ತವೆ ಎಂದರು.

ಕೆರೆಗೆ ಬಾಗಿನ ಅರ್ಪಿಸಲು ಬಂದ ಶಾಸಕ ಸಿ.ಎಸ್.ನಿರಂಜನಕುಮಾರ್ ಅವರನ್ನು ಗ್ರಾಮಸ್ಥರು ಮತ್ತು ಮುಖಂಡರು ಹಾಗೂ ಸಹಸ್ರಾರು ಕಾರ್ಯಕರ್ತರು ಪಟಾಕಿ ಸಿಡಿಸಿ ಮಂಗಳವಾದ್ಯದೊಂದಿಗೆ ಹೂಮಾಲೆ ಹಾಕಿ ಅದ್ದೂರಿಯಾಗಿ ಸ್ವಾಗತ ಮಾಡಿದರು. ಈ ವೇಳೆ ಗ್ರಾಮದ ಮುಖಂಡರು, ಗ್ರಾಮ ಪಂಚಾಯಿತಿ ಜನ ಪ್ರತಿನಿಧಿಗಳು ಮತ್ತು ವಿವಿಧ ಘಟಕಗಳ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಹಾಜರಿದ್ದರು.

ಎಂಐಎಸ್ ಯೋಜನೆಯಡಿ ಅರಿಶಿನ ಖರೀದಿಸಲು ಒತ್ತಾಯಿಸಿ ರೈತರ ಪ್ರತಿಭಟನೆ

• ಜಿಲ್ಲಾ ಕೇಂದ್ರದಲ್ಲಿ ರೈತರ ಬೈಕ್ ರ್‍ಯಾಲಿ • ಕ್ವಿಂಟಾಲ್ ಅರಿಶಿನಕ್ಕೆ 17,500ರೂ. ನೀಡಲು ಆಗ್ರಹ

ಚಾಮರಾಜನಗರ, ಫೆ.16– ಮಾರುಕಟ್ಟೆ ಮಧ್ಯೆ ಪ್ರವೇಶ ಯೋಜನೆಯಡಿ (ಎಂಐಎಸ್) ಸರ್ಕಾರ ಅರಿಶಿನ ಖರೀದಿಸಬೇಕು ಎಂದು ಒತ್ತಾಯಿಸಿ ನಗರದಲ್ಲಿ ರಾಜ್ಯ ಅರಿಶಿನ ಬೆಳೆಗಾರರ ಒಕ್ಕೂಟ ಹಾಗೂ ಜಿಲ್ಲಾ ರೈತ ಸಂಘದಿಂದ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಜಿಲ್ಲೆಯ ಗುಂಡ್ಲುಪೇಟೆ, ಕೊಳ್ಳೇಗಾಲ, ಹನೂರು, ಯಳಂದೂರು ತಾಲೂಕುಗಳಿಂದ ಬೈಕ್‌ಗಳಲ್ಲಿ ನಗರಕ್ಕೆ ಆಗಮಿಸಿದ ರೈತರು, ಭುವನೇಶ್ವರಿ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿದರು. ಬಳಿಕ ಬಿ. ರಾಚಯ್ಯ ಜೋಡಿ ರಸ್ತೆ ಮೂಲಕ ಬೈಕ್‌ಗಳಲ್ಲಿ ಜಿಲ್ಲಾಡಳಿತ ಭವನಕ್ಕೆ ತೆರಳಿ, ರೈತರ ನೆರವಿಗೆ ಸರ್ಕಾರ ಧಾವಿಸುವಂತೆ ಘೋಷಣೆ ಕೂಗಿದರು.



ಜಿಲ್ಲೆಯಲ್ಲಿ 30 ಸಾವಿರಕ್ಕೂ ಹೆಚ್ಚು ರೈತರು ಅರಿಶಿನ ಬೆಳೆಯುತ್ತಿದ್ದಾರೆ. ಅರಿಶಿನ ದರ ತೀವ್ರ ಕುಸಿತ ಕಂಡಿದ್ದು, ರೈತರು ಸಂಕಷ್ಟ ಎದುರಿಸುತ್ತಿದ್ದಾರೆ. ಕೂಡಲೇ ಸರ್ಕಾರ ರೈತರ ನೆರವಿಗೆ ಧಾವಿಸಬೇಕು. ಎಂಐಎಸ್ ಯೋಜನೆಯಡಿ ಕ್ವಿಂಟಾಲ್ ಅರಿಶಿನವನ್ನು 17,500 ರೂ. ದರದಲ್ಲಿ ಖರೀದಿಸಬೇಕು ಎಂದು ಒತ್ತಾಯಿಸಿದರು.


ಈ ವೇಳೆ ಜಿಲ್ಲಾ ರೈತ ಸಂಘದ ಅಧ್ಯಕ್ಷ ಹೊನ್ನೂರು ಪ್ರಕಾಶ್ ಮಾತನಾಡಿ, ಒಂದು ಕ್ವಿಂಟಾಲ್ ಅರಿಶಿನ ಬೆಳೆಯಲು ಒಂದು ಎಕರೆಗೆ 1.50 ಲಕ್ಷದಿಂದ ಎರಡು ಲಕ್ಷ ರೂ. ಖರ್ಚು ಬೀಳುತ್ತಿದೆ. ಕ್ವಿಂಟಾಲ್ ಅರಿಶಿನ ಮಾರುಕಟ್ಟೆಯಲ್ಲಿ 5,500 ರೂ. ಗಳಿಂದ, ಆರು ಸಾವಿರ ರೂಗೆ ಮಾರಾಟವಾಗುತ್ತಿದ್ದು, ರೈತರಿಗೆ ನಷ್ಟವಾಗುತ್ತಿದೆ ಹೀಗಿದ್ದರೂ ಸರ್ಕಾರ ಮಧ್ಯ ಪ್ರವೇಶಿಸುತ್ತಿಲ್ಲ. ಬೆಂಬಲ ಬೆಲೆ ಅಥವಾ ಮಧ್ಯಸ್ಥಿಕೆ ಬೆಲೆಯಡಿ ಅರಿಶಿನ ಖರೀದಿಸಲು ಮುಂದಾಗಿಲ್ಲ. ಹೀಗಾಗಿ ಸರ್ಕಾರದ ಗಮನ ಸೆಳೆಯಲು ಈ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

2002–03ರ ಸಾಲಿನಲ್ಲಿ ಅರಿಶಿನ ಬೆಲೆ ಕ್ವಿಂಟಾಲ್‌ಗೆ 2500 ರೂನಿಂದ ಮೂರು ಸಾವಿರಕ್ಕೆ ಕುಸಿದಿದ್ದ ಸಂದರ್ಭದಲ್ಲಿ ಸರ್ಕಾರ ಎಪಿಎಂಸಿಗಳ ಮೂಲಕ ಬೆಂಬಲ ಬೆಲೆಯಲ್ಲಿ ಖರೀದಿ ಪ್ರಾರಂಭಿಸಿತ್ತು. ಇದರಿಂದ ತೆರೆದ ಮಾರುಕಟ್ಟೆ ದರ 6500 ರೂ.ಗೆ ಏರಿಕೆಯಾಗಿತ್ತು. ಆದ್ದರಿಂದ ಈ ಬಾರಿಯು ದರ ಕುಸಿದಿರುವುದರಿಂದ ಸರ್ಕಾರ ಮಾರುಕಟ್ಟೆ ಮಧ್ಯಪ್ರವೇಶ ದರ ನೀಡಬೇಕು ಎಂದು ಆಗ್ರಹಿಸಿದರು.

ಜಿಲ್ಲಾ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಗುರುಪ್ರಸಾದ್ ಮಾತನಾಡಿ, ಅಸ್ಸಾಂ ರಾಜ್ಯ ಹೊರತಾಗಿ ಗುಂಡ್ಲುಪೇಟೆಯಲ್ಲಿನ ಅರಿಶಿನಕ್ಕೆ ಕರ್ಕುಮಿನ್ ಅಂಶ ಹೆಚ್ಚಿದೆ. ಇಂಥ ಗುಣಮಟ್ಟದ ಅರಿಶಿನಕ್ಕೆ ಸೂಕ್ತ ಬೆಲೆ ಬೇಕಾಗಿದೆ. ಡೇರಿಗಳಲ್ಲಿ ಹಾಲಿನ ಕೊಬ್ಬಿನಾಂಶದ ಆಧಾರದಲ್ಲಿ ಖರೀದಿಸಲಾಗುತ್ತದೆ. ಅದೇ ರೀತಿಯಲ್ಲಿ ಅರಿಶಿನವನ್ನು ಗುಣಮಟ್ಟ ಪರೀಕ್ಷಿಸಿ ಖರೀದಿ ಮಾಡಬೇಕು ಎಂದು ಒತ್ತಾಯಿಸಿದರು.

ಬಳಿಕ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರಿಗೆ ಹಕ್ಕೊತ್ತಾಯಗಳನ್ನು ಸಲ್ಲಿಸಿದರು. ಬ್ಯಾಂಕ್‌ಗಳು ಅರಿಶಿನ ಉದ್ಯಮಕ್ಕೆ ಸಾಲ ನೀಡಲು ಕಠಿಣ ಷರತ್ತುಗಳನ್ನು ವಿಧಿಸಬಾರದೆಂದು ಸೂಚನೆ ನೀಡುವುದಾಗಿ ಹಾಗೂ ಈ ಬಗ್ಗೆ ಸಭೆ ಕರೆಯುವುದಾಗಿ ಡಿಸಿ ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ಜಿಲ್ಲಾ ಉಪಾಧ್ಯಕ್ಷ ಕುಂದಕೆರೆ ಸಂಪತ್ತು ರಾಜ್ಯ ಅರಿಶಿನ ಬೆಳೆಗಾರರ ಒಕ್ಕೂಟದ ಸಂಚಾಲಕ ನಾಗಾರ್ಜುನ ಕುಮಾರ್, ಅರಿಶಿನ ಬೆಳೆಗಾರ ವಿ. ಚಿದಾನಂದ, ಕುಂದಕೆರೆ ಚಂದ್ರಶೇಖರ್, ಚಂದ್ರು, ಅರಕಲವಾಡಿ ಕುಮಾರ್, ವೀರನಪುರ ನಾಗರಾಜು, ಶಶಿಕುಮಾರ್, ಷಡಕ್ಷರಿ, ರಾಜು, ಮಾಡ್ರಹಳ್ಳಿ ಮಹದೇವಪ್ಪ ಆದಿತ್ಯ, ಪ್ರವೀಣ್, ಮಧು ಮತ್ತಿತರರು ಇದ್ದರು.



ಚಾಮರಾಜನಗರ ತಾಲೂಕಿನ ಬದನಗುಪ್ಪೆ ಗ್ರಾಮದಲ್ಲಿ ಗ್ರಾಮ ದೇವತೆ ಶ್ರೀಮಾರಮ್ಮ ತಾಯಿ ಹಬ್ಬ ವಿಜೃಂಭಣೆಯಿಂದ ನಡೆಯಿತು. ಚಿತ್ರ: ಬದನಗುಪ್ಪೆ ಮಲ್ಲಣ್ಣ.

ಮಂಟೇಸ್ವಾಮಿ ದೇಗುಲದ ಬಸವ ವಿಧಿವಶ



ಚಾಮರಾಜನಗರ, ಫೆ.16– ತಾಲೂಕಿನ ಮೂಡಲ ಅಗ್ರಹಾರ ಗ್ರಾಮದ ಮಂಟೇಸ್ವಾಮಿ ದೇವಸ್ಥಾನದ ಬಸವ ಅನಾರೋಗ್ಯದಿಂದ ಗುರುವಾರ ಬೆಳಗ್ಗೆ ವಿಧಿವಶವಾಯಿತು.

ಗ್ರಾಮದಲ್ಲಿ ಶಾಂತಿಯಿಂದ ಈ ಎಲ್ಲರೂ ಜೀವನ ನಡೆಸಲಿ. ಜೊತೆಗೆ ಉತ್ತಮ ಮಳೆ, ಬೆಳೆ ಆಗಲಿ ಎಂಬ ಉದ್ದೇಶದಿಂದ ದೇವರಿಗೆ ಕಳೆದ 10 ವರ್ಷಗಳ ಹಿಂದೆ ಹರಕೆ ಹೊತ್ತು ಬಸವನ ಬಿಡಲಾಗಿತ್ತು.

ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೃತ ಬಸವನ ಮೆರವಣಿಗೆ ಮಾಡಿ ಆ ನಂತರ ಗ್ರಾಮದ ಶನೇಶ್ವರ ದೇವಸ್ಥಾನದ ಬಳಿ ಅಂತ್ಯಸಂಸ್ಕಾರ ನೆರವೇರಿಸಲಾಯಿತು ಎಂದು ಗ್ರಾಮದ ಮುಖಂಡ ಮಂಜು ತಿಳಿಸಿದರು.

ಭಿಕ್ಷುಕರ ವಿರುದ್ಧ ಪೊಲೀಸ್ ಕ್ರಮದ ಬಗ್ಗೆ ವರದಿ ಸಲ್ಲಿಸಿ

ಸರ್ಕಾರಕ್ಕೆ ಕರ್ನಾಟಕ ಹೈಕೋರ್ಟ್ ನಿರ್ದೇಶನ

ಬೆಂಗಳೂರು, ಫೆ.16– ಕರ್ನಾಟಕ ಭಿಕ್ಷಾಟನೆ ನಿಷೇಧ ಕಾಯ್ದೆ, 1975ರ ಸೆಕ್ಷನ್ 11ರ ಪ್ರಕಾರ, ಕಾಯ್ದೆಯ ಸೆಕ್ಷನ್ 3ರ ವಿರುದ್ಧವಾಗಿ ಭಿಕ್ಷಾಟನೆಯಲ್ಲಿ ತೊಡಗಿರುವ ವ್ಯಕ್ತಿಗಳಿಗೆ ತಮ್ಮ ವ್ಯಾಪ್ತಿಯಲ್ಲಿ ಪೊಲೀಸರು ಹೇಗೆ ಕ್ರಮ ತೆಗೆದುಕೊಳ್ಳುತ್ತಿದ್ದಾರೆ ಎಂಬ ವರದಿಯನ್ನು ಸಲ್ಲಿಸುವಂತೆ ಕರ್ನಾಟಕ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ಸೂಚಿಸಿದೆ.

ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ.ವರಾಳೆ ಮತ್ತು ನ್ಯಾಯಮೂರ್ತಿ ಅಶೋಕ್ ಎಸ್ ಕಿಣಗಿ ಅವರ ವಿಭಾಗೀಯ ಪೀಠವು ಮಕ್ಕಳನ್ನು ಬೀದಿಗಳಲ್ಲಿ ವಸ್ತುಗಳನ್ನು ಮಾರಾಟ ಮಾಡಲು ಒತ್ತಾಯಿಸುವ ವಿಷಯದ ಕುರಿತು 2020 ರಲ್ಲಿ ಲೆಟ್ಜ್ ಕಿಟ್ ಫೌಂಡೇಶನ್ ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ಆಲಿಸುವಾಗ, ನಿರ್ದೇಶನ ನೀಡಿದೆ.

ಕಾಯ್ದೆಯ ಸೆಕ್ಷನ್ 11ರ ಬಗ್ಗೆ ತಳಮಟ್ಟದ ಪೊಲೀಸರಲ್ಲಿ ಸಾಕಷ್ಟು ಅರಿವಿಲ್ಲ ಎಂದು ರಾಜ್ಯ ಸರ್ಕಾರ ಒಪ್ಪಿಕೊಂಡ ಕಾರಣ ಈ ನಿರ್ದೇಶನವನ್ನು ನೀಡಲಾಗಿದೆ. 'ಯಾವುದೇ ಪೊಲೀಸ್ ಅಧಿಕಾರಿ ಅಥವಾ ಸರ್ಕಾರದ ಅಧಿಕೃತ ಅಧಿಕಾರಿ, ಮಗುವನ್ನು ಹೊರತುಪಡಿಸಿ ಇತರೆ ಯಾವುದೇ ವ್ಯಕ್ತಿಯು ಸೆಕ್ಷನ್ 3ರ ನಿಬಂಧನೆಗಳನ್ನು ಉಲ್ಲಂಘಿಸುವುದನ್ನು ಕಂಡುಬಂದರೆ, ಅಂತಹ ವ್ಯಕ್ತಿಯನ್ನು ಬಂಧಿಸಬೇಕು ಮತ್ತು ಅವರ ಬಂಧನಕ್ಕೆ ಕಾರಣಗಳನ್ನು ತಿಳಿಸಬೇಕು ಮತ್ತು ಅವರನ್ನು ಹತ್ತಿರದ ಸ್ವೀಕರಿಸುವ ಕೇಂದ್ರಕ್ಕೆ ಕಳುಹಿಸಬೇಕು' ಎಂದಿದೆ.

ರಾಮ ಸೇತು ಸುಬ್ರಮಣಿಯನ್ ಸ್ವಾಮಿ ಪಿಐಎಲ್ ವಿಚಾರಣೆಗೆ ಸುಪ್ರೀಂಕೋರ್ಟ್ ಒಪ್ಪಿಗೆ



ನವದೆಹಲಿ, ಫೆ16– ರಾಮ ಸೇತುವನ್ನು ರಾಷ್ಟ್ರೀಯ ಸ್ಮಾರಕವನ್ನಾಗಿ ಘೋಷಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿ ಬಿಜೆಪಿ ಮುಖಂಡ ಸುಬ್ರಮಣಿಯನ್ ಸ್ವಾಮಿ ಅವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್) ವಿಚಾರಣೆಗೆ ಸುಪ್ರೀಂಕೋರ್ಟ್ ಗುರುವಾರ ಒಪ್ಪಿಗೆ ನೀಡಿದೆ. ಮುಖ್ಯ ನ್ಯಾಯಮೂರ್ತಿ ಡಿ.ವೈ ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರನ್ನೊಳಗೊಂಡ ಪೀಠವು ಇಲ್ಲಿಯವರೆಗೆ ರಾಮ ಸೇತು ವಿಷಯದಲ್ಲಿ ಯಾವುದೇ ನಿರ್ಧಾರವನ್ನು ತೆಗೆದುಕೊಂಡಿಲ್ಲ ಎಂಬುದನ್ನು ಗಮನಿಸಿದ ಬಳಿಕ ಸುಬ್ರಮಣಿಯನ್ ಅವರು ಸಲ್ಲಿಸಿರುವ ಪಿಐಎಲ್ ಅನ್ನು ವಿಚಾರಣೆಗೆ ಪಟ್ಟಿ ಮಾಡಲು ಸಮ್ಮತಿಸಿತು.

ಮಾ.28, 29ರಂದು 19ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಪ್ರಯುಕ್ತ

ಪ್ರಕಟಣೆಗೆ ಕವನ, ಕಥೆ, ಲೇಖನಗಳ ಆಹ್ವಾನ




ಮೈಸೂರು,ಫೆ16(ಪಿಎಂ)– ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ವತಿಯಿಂದ ಮಾ.28 ಮತ್ತು 29ರಂದು ಜಿಲ್ಲೆಯ ತಿ.ನರಸೀಪುರ ಪಟ್ಟಣದಲ್ಲಿ 19ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸಿದ್ದು, ಇದರ ಪ್ರಯುಕ್ತ ಪ್ರಕಟಿಸಲಿರುವ ಕವನ ಸಂಕಲನ, ಕಥಾ ಸಂಕಲನ ಮತ್ತು ಸ್ಮರಣ ಸಂಚಿಕೆಗೆ ಆಸಕ್ತರು ತಮ್ಮ ಕವನ, ಕಥೆ ಹಾಗೂ ಲೇಖನಗಳನ್ನು ಕಳುಹಿಸಬಹುದು ಎಂದು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮ್ಮೇಳನದಲ್ಲಿ ಜಿಲ್ಲೆಯ ಯುವ ಕವಿಗಳು, ಲೇಖಕರು ಹಾಗೂ ಬರಹಗಾರರನ್ನು ಉತ್ತೇಜಿಸಲು ಕವನ ಸಂಕಲನ, ಕಥಾ ಸಂಕಲನ ಮತ್ತು ಸ್ಮರಣ ಸಂಚಿಕೆಗೆ ಪ್ರಕಟಿಸಲಾಗುತ್ತಿದೆ. ಸ್ಮರಣ ಸಂಚಿಕೆಗೆ ಜಿಲ್ಲೆಯ ಪ್ರಸಿದ್ಧ ಸ್ಥಳಗಳು, ಕನ್ನಡ ನಾಡು–ನುಡಿಯ ಬಗ್ಗೆ ಲೇಖನಗಳನ್ನು ಕಳುಹಿಸಬಹುದು. ಫೆ.28ರೊಳಗೆ ಮೈಸೂರಿನ ವಿಜಯನಗರದ ಮೈಸೂರು ಜಿಲ್ಲಾ ಕಸಾಪ ಕಚೇರಿಗೆ ಅಂಚೆ ಮೂಲಕ ಅಥವಾ ಖುದ್ದು ಬರಹಗಳನ್ನು ಸಲ್ಲಿಸಬಹುದು ಎಂದರು.

ಬರಹಗಳನ್ನು ಆಯ್ಕೆ ಮಾಡಿ ಪ್ರಕಟಿಸುವ ಸಂಬಂಧ ವಿಶೇಷ ಪರಿಣಿತರ ಸಮಿತಿ ರಚಿಸಲಾಗುವುದು. ಹೆಚ್ಚಿನ ಮಾಹಿತಿಗೆ ಜಿಲ್ಲಾ ಕಸಾಪ ವ್ಯವಸ್ಥಾಪಕ ಎ.ಜಿ.ದೇವರಾಜು (ಮೊ.ಸಂ. 91648 37773), ಕಾರ್ಯದರ್ಶಿ ಮನಲತಾ ಮೋಹನ್ (ಮೊ.ಸಂ. 79755 47238) ಅವರನ್ನು ಸಂಪರ್ಕಿಸಬಹುದು. ಸಮ್ಮೇಳನದ ಸ್ಥಳ ಹಾಗೂ ಅತಿಥಿಗಳ ಬಗ್ಗೆ ಶೀಘ್ರದಲ್ಲಿ ತಿಳಿಸಲಾಗುವುದು ಎಂದು ಹೇಳಿದರು. ಕಸಾಪ ಜಿಲ್ಲಾ ಕಾರ್ಯದರ್ಶಿ ಮನಲತಾ ಮೋಹನ್, ತಿ.ನರಸೀಪುರ ತಾಲೂಕು ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ, ಮೈಸೂರು ತಾಲೂಕು ಅಧ್ಯಕ್ಷ ಎ.ಸಿ.ಮಂಜುನಾಥ್, ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಗೋವಿಂದರಾಜು ಮತ್ತಿತರರು ಗೋಷ್ಠಿಯಲ್ಲಿದ್ದರು.

ರಕ್ತ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಗರ್ಭಿಣಿಗೆ ಸೂಕ್ತ ಚಿಕಿತ್ಸೆ ಮೂಲಕ ಯಶಸ್ವಿ ಹೆರಿಗೆ



ಮೈಸೂರು, ಫೆ.16(ಪಿಎಂ)– ಅಕ್ಯೂಟ್ ಲಿಂಫೋಬ್ಲಾಸ್ಟಿಕ್ ಲ್ಯುಕೇಮಿಯಾದಿಂದ (ರಕ್ತ ಕ್ಯಾನ್ಸರ್) ಬಳಲುತ್ತಿದ್ದ 24 ವರ್ಷದ ಗರ್ಭಿಣಿಯೊಬ್ಬರಿಗೆ ಭಾರತ್ ಹಾಸ್ಪಿಟಲ್ ಅಂಡ್ ಇನ್ಸ್‌ಟಿಟ್ಯೂಟ್ ಆಫ್ ಆಂಕಾಲಜಿಯಲ್ಲಿ ಸೂಕ್ತ ಚಿಕಿತ್ಸೆ ಮೂಲಕ ಯಶಸ್ವಿಯಾಗಿ ಹೆರಿಗೆ ಮಾಡಿಸಲಾಗಿದೆ ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಡಾ.ವೈ.ಎಸ್.ಮಾಧವಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ಯಾನ್ಸರ್ ಅತ್ಯಂತ ಅಪಾಯಕಾರಿ ಕಾಯಿಲೆ. ಮೂರು ಸಾವಿರದಲ್ಲಿ ಒಬ್ಬ ಗರ್ಭಿಣಿಯರಿಗೆ ಮಾತ್ರ ಕ್ಯಾನ್ಸರ್ ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಅದರಲ್ಲೂ ಗರ್ಭಿಣಿಯರಿಗೆ ರಕ್ತದ ಕ್ಯಾನ್ಸರ್ ಬರುವುದು ಅಪರೂಪ. ಇದು ಲಕ್ಷದಲ್ಲಿ ಒಬ್ಬರಿಗೆ ಕಾಣಿಸಿಕೊಳ್ಳಲಿದೆ. ಇದಕ್ಕೆ ಶೀಘ್ರ ಚಿಕಿತ್ಸೆ ನೀಡದಿದ್ದರೆ ತಾಯಿ, ಮಗು ಇಬ್ಬರ ಜೀವಕ್ಕೂ ಅಪಾಯ ಎಂದರು.

ಆಸ್ಪತ್ರೆಯ ಕನ್ಸಲ್ಟೆಂಟ್ ಮೆಡಿಕಲ್ ಆಂಕಾಲಜಿ ವೈದ್ಯ ಡಾ.ಜಿ.ಹೆಚ್.ಅಭಿಲಾಷ್ ಮಾತನಾಡಿ, ಈ ಪ್ರಕರಣದಲ್ಲಿ ಸದರಿ ಗರ್ಭಿಣಿಗೆ ಇದು ಮೊದಲ ಮಗು. ಎರಡನೇ ತ್ರೈಮಾಸಿಕದಲ್ಲಿ ಅವರಿಗೆ ರಕ್ತ ಕ್ಯಾನ್ಸರ್ ಪತ್ತೆಯಾಯಿತು. ಹೊಟ್ಟೆಯೊಳಗಿರುವ ಮಗುವಿಗೆ ಯಾವುದೇ ಅಡ್ಡ ಪರಿಣಾಮ ಆಗದ ರೀತಿಯಲ್ಲಿ ಅವರಿಗೆ ಕಿಮೋಥೆರಪಿ ನೀಡಲಾಯಿತು. 31ನೇ ವಾರದಲ್ಲಿ ಸಿಸೇರಿಯನ್ ಮೂಲಕ 2 ಕೆಜಿ ತೂಕದ ಆರೋಗ್ಯವಂತ ಮಗುವಿಗೆ ಜನ್ಮ ನೀಡಿದರು. ಅವರು ಕ್ಯಾನ್ಸರ್‌ನಿಂದ ಸಂಪೂರ್ಣವಾಗಿ ಗುಣಮುಖರಾಗಲಿದ್ದಾರೆ ಎಂದು ತಿಳಿಸಿದರು. ಸ್ತ್ರೀ ರೋಗ ಮತ್ತು ಪ್ರಸೂತಿ ತಜ್ಞವೈದ್ಯೆ ಡಾ.ಪೂರ್ಣಿಮಾ ಗೋಷ್ಠಿಯಲ್ಲಿದ್ದರು.

ಹಲಗೇವಡೇರಹಳ್ಳಿ ಡಿನೋಟಿಫಿಕೇಷನ್ ಪ್ರಕರಣ

ಮಾ.21ಕ್ಕೆ ತಪ್ಪದೇ ಹಾಜರಾಗುವಂತೆ ಮಾಜಿ ಸಿಎಂ ಹೆಚ್‌ಡಿಕೆಗೆ ಕೋರ್ಟ್ ಸೂಚನೆ



ಬೆಂಗಳೂರು, ಫೆ.16– ಹಲಗೇವಡೇರಹಳ್ಳಿ ಡಿನೋಟಿಫಿಕೇಷನ್ ಪ್ರಕರಣ ಸಂಬಂಧ ಮಾರ್ಚ್ 21ರಂದು ತಪ್ಪದೇ ವಿಚಾರಣೆಗೆ ಹಾಜರಾಗುವಂತೆ ಬೆಂಗಳೂರಿನ ಜನಪ್ರತಿನಿಧಿಗಳ ಕೋರ್ಟ್ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಸೂಚಿಸಿದೆ.

ಇಂದು ಪ್ರಕರಣದ ವಿಚಾರಣೆ ನಡೆಸಿದ ವೇಳೆ ಪದೇ ಪದೆ ವಿಚಾರಣೆಗೆ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಗೈರು ಹಾಜರಾಗುತ್ತಿರುವ ಬಗ್ಗೆ ನ್ಯಾಯಾಲಯ ಅಸಮಾಧಾನ ವ್ಯಕ್ತಪಡಿಸಿತು.

ಈ ವೇಳೆ ಹಾಜರಾತಿಗೆ ವಿನಾಯ್ತಿ ನೀಡುವಂತೆ ಕುಮಾರಸ್ವಾಮಿ ಪರ ವಕೀಲರು ಮನವಿ ಮಾಡಿದರು. ಆದರೆ, ಈ ಮನವಿಯನ್ನು ನ್ಯಾಯಾಲಯ ತಿರಸ್ಕರಿಸಿದಾಗ ಮುಂದಿನ ವಿಚಾರಣೆ ವೇಳೆ ತಪ್ಪದೇ ಹೆಚ್.ಡಿ.ಕುಮಾರಸ್ವಾಮಿ ಹಾಜರಿರಲಿದ್ದಾರೆ ಎಂದು ಅವರ ಪರ ವಕೀಲರು ಹೇಳಿದರು. ಈ ಹಿನ್ನಲೆಯಲ್ಲಿ ಮಾರ್ಚ್ 21ಕ್ಕೆ ನ್ಯಾಯಾಲಯ ವಿಚಾರಣೆಯನ್ನು ಮುಂದೂಡಿತು.

ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿಯವರ ವಿರುದ್ಧ ಚಾಮರಾಜನಗರದ ಎಸ್.ಮಹದೇವಸ್ವಾಮಿ ಎಂಬುವರು ಹಲಗೇವಡೇರಹಳ್ಳಿ ಡಿನೋಟಿಫಿಕೇಷನ್ ಸಂಬಂಧ ಖಾಸಗಿ ದೂರು ದಾಖಲಿಸಿದ್ದರು. ಈ ದೂರಿನ ಸಂಬಂಧ ಜನಪ್ರತಿನಿಧಿಗಳ ಕೋರ್ಟ್ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿಗೆ ಸಮನ್ಸ್ ಜಾರಿಗೊಳಿಸಿತ್ತು. ಆದರೆ ವಿಚಾರಣೆಗೆ ನಿರಂತರವಾಗಿ ಗೈರು ಹಾಜರಿದ್ದರು. ಇಂದು ವಿಚಾರಣೆ ವೇಳೆಯಲ್ಲಿ ಮುಂದಿನ ವಿಚಾರಣೆ ವೇಳೆ ತಪ್ಪದೇ ಹಾಜರಿಗೆ ಕೋರ್ಟ್ ಸೂಚನೆ ನೀಡಿದೆ.

ಶ್ರೀಮಂತ, ಸದೃಢ ಭಾರತ ನಿರ್ಮಾಣಕ್ಕೆ ಪ್ರಸಕ್ತ ಕೇಂದ್ರ ಬಜೆಟ್ ಭದ್ರ ಬುನಾದಿ

ಆರ್ಥಿಕ ತಜ್ಞ ವಿಶ್ವನಾಥ್ ಭಟ್ ಅಭಿಮತ



ಮೈಸೂರು, ಫೆ.16(ಎಂಕೆ)– 2023–24ರ ಕೇಂದ್ರ ಬಜೆಟ್ ಎಲ್ಲರ ಪ್ರಾತಿಯನ್ನೊಳಗೊಂಡ ಶ್ರೀಮಂತ ಮತ್ತು ಸದೃಢ ಭಾರತವನ್ನಾಗಿಸಲು ಭದ್ರ–ಬುನಾದಿಯಾಗಿದೆ ಎಂದು ಆರ್ಥಿಕ ತಜ್ಞ ವಿಶ್ವನಾಥ್ ಭಟ್ ಹೇಳಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಬಿಜೆಪಿ ಮೈಸೂರು ಘಟಕದ ವತಿಯಿಂದ ಆಯೋಜಿಸಿದ್ದ 'ಕೇಂದ್ರ ಅಮೃತಕಾಲ ಬಜೆಟ್ ವಿಮರ್ಶೆ ಮತ್ತು ವಿಶ್ಲೇಷಣೆ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೊದಲ ಬಾರಿಗೆ ಇಡೀ ವಿಶ್ವದಲ್ಲಿನ ಅಂತರರಾಷ್ಟ್ರೀಯ ಜಾಗತಿಕ ಹಣಕಾಸು ಸಂಸ್ಥೆಗಳು ಅತ್ಯಂತ ಕುತೂಹಲದಿಂದ ನೋಡಿದ ಬಜೆಟ್ ಇದಾಗಿದ್ದು, ಬಜೆಟ್ ಅನ್ನು 'ಗ್ರೋಥ್ ಇಂಜಿನ್ ಆಫ್ ಇಂಡಿಯಾ' ಎಂದು ಕರೆದಿವೆ ಎಂದರು.

ಮುಂದಿನ ದಿನಗಳಲ್ಲಿ ಮದ್ದು–ಗುಂಡಿನ ಯುದ್ಧಗಳ ಬದಲು ಕರೆನ್ಸಿ ವಾರ್‌ಗಳು ನಡೆಯುತ್ತವೆ. ಒಂದು ದೇಶದ ಆರ್ಥಿಕತೆಯನ್ನು ನಾಶ ಮಾಡಿದರೆ ಬದುಕಿರುವ ತನಕ ಕಷ್ಟದಲ್ಲಿಯೇ ಜೀವನ ಕಳೆಯಬೇಕಾಗುತ್ತದೆ. ಇಡೀ ಪ್ರಪಂಚದಲ್ಲಿಯೇ ಆರ್ಥಿಕ ಹಿಂಜರಿತದ ಪರಿಸ್ಥಿತಿಯಲ್ಲಿ ಭಾರತ ಶೇ.7 ರಷ್ಟು ಅಭಿವೃದ್ಧಿ ಸಾಧಿಸಿದೆ. 3–4 ಟ್ರಿಲಿಯನ್ ಡಾಲರ್ ಆರ್ಥಿಕತೆ ಹೊಂದಿರುವ ಭಾರತ, ಮುಂದಿನ 10–12 ವರ್ಷದ ಅವಧಿಯಲ್ಲಿ 10 ಟ್ರಿಲಿಯನ್ ಡಾಲರ್ ಆರ್ಥಿಕತೆಯ ರಾಷ್ಟ್ರವಾಗಲಿದೆ ಎಂದು ತಿಳಿಸಿದರು.

ಆರ್ಥಿಕ ಹಿಂಜರಿತ: ರಷ್ಯಾ ಮತ್ತು ಉಕ್ರೇನ್ ನಡುವಿನ ಸಂಘರ್ಷದಿಂದಾದ ನಿರಂತರ ಬೆಲೆ ಏರಿಕೆಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಬಹುತೇಕ ರಾಷ್ಟ್ರಗಳು ಬಡ್ಡಿ ದರವನ್ನು ಗಣನೀಯ ಪ್ರಮಾಣದಲ್ಲಿ ಏರಿಸಿದ್ದರಿಂದ ಎಲ್ಲರೂ ಸಹ ಸಾಲಕ್ಕೆ ಸಿಕ್ಕಿಹಾಕಿಕೊಂಡಿದ್ದಾರೆ. 107 ರಾಷ್ಟ್ರಗಳು ಆಹಾರ, ಇಂಧನ, ಹಣಕಾಸು ಹಾಗೂ ರಸಗೊಬ್ಬರದ ಬಿಕ್ಕಟ್ಟನ್ನು ಅನುಭವಿಸುತ್ತಿವೆ ಎಂದು ವಿಶ್ವಸಂಸ್ಥೆ ಹೇಳಿದೆ. ಕಳೆದ 24 ತಿಂಗಳಲ್ಲಿ ರಸಗೊಬ್ಬರದ ಬೆಲೆ ಮೂರು ಪಟ್ಟು ಹೆಚ್ಚಾಗಿದ್ದು, ಶ್ರೀಮಂತ ರಾಷ್ಟ್ರಗಳನ್ನು ಒಳಗೊಂಡಂತೆ ಶೇ.60–65 ರಷ್ಟು ರಾಷ್ಟ್ರಗಳು ಆರ್ಥಿಕ ಹಿಂಜರಿತವನ್ನು ಅನುಭವಿಸುತ್ತಿವೆ ಇದರಲ್ಲಿ ಭಾರತವೂ ಒಂದು ಭಾಗವಾಗಿದೆ ಎಂದರು.

ವಿತ್ತೀಯ ಕೊರತೆ: ಕೊರೊನಾ ವೇಳೆ ತೆರಿಗೆ ಸಂಗ್ರಹದಲ್ಲಿ ಉಂಟಾದ ಕೊರತೆಯ ಜೊತೆಗೆ, ವೆಚ್ಚದ ಏರಿಕೆಯಿಂದಾಗಿ ಸರ್ಕಾರ 20 ಲಕ್ಷ ಕೋಟಿ ರೂ. ಹೆಚ್ಚುವರಿ ಸಾಲ ಮಾಡಬೇಕಾಯಿತು. ಈ ಕಾರಣದಿಂದಾಗಿ 2020–21ರಲ್ಲಿ ವಿತ್ತೀಯ ಕೊರತೆ 9.2 ರಷ್ಟಾಯಿತು. ವಿತ್ತೀಯ ಕೊರತೆ ಇದೇ ರೀತಿ ಮುಂದುವರೆದರೆ ಐದಾರು ವರ್ಷದಲ್ಲಿಯೇ ದೇಶ ಮುಳುಗಿ ಹೋಗುತ್ತೆ ಎಂಬುದನ್ನರಿತ ಕೇಂದ್ರ ಸರ್ಕಾರ, ಅದೇ ವರ್ಷ ವಿತ್ತೀಯ ಶಿಸ್ತನ್ನು ಘೋಷಣೆ ಮಾಡಿತು. ಖರ್ಚನ್ನು ಹಂತ ಹಂತವಾಗಿ ಕಡಿಮೆ ಮಾಡುತ್ತಾ 2026ರರೊಳಗೆ ವಿತ್ತೀಯ ಕೊರತೆಯನ್ನು 5.9 ರಷ್ಟಕ್ಕೆ ಇಳಿಸುತ್ತೇವೆ ಎಂದಿತು. ಅಂದರೆ ಸಾಲ ಕಡಿಮೆ ಮಾಡುವುದಾಗಿದೆ ಎಂಬುದನ್ನು ಉದಾಹರಣೆ ಸಹಿತ ಅರ್ಥಮಾಡಿಸಿದರಲ್ಲದೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಬಜೆಟ್ ಸಿದ್ಧಪಡಿಸುವ ಸಂದರ್ಭದಲ್ಲಿ 'ಸಾಲ' ಕಡಿಮೆ ಮಾಡುವುದರ ಜೊತೆಗೆ 'ಬಂಡವಾಳ ಹೂಡಿಕೆ ಹೆಚ್ಚಿಸಬೇಕಾದ ಸವಾಲುಗಳು ಎದುರಾಗಿವೆ. ಇಂತಹ ಸಂದರ್ಭದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿ ಇದ್ದಿದ್ದರೇ ದೇಶದ ಪರಿಸ್ಥಿತಿ ಶ್ರೀಲಂಕಾದಂತಾಗುತ್ತಿತ್ತು ಎಂದು ಕುಟುಕಿದರು.

ದಾಖಲೆ ಮಟ್ಟದಲ್ಲಿ ಸಬ್ಸಿಡಿ: ಕಳೆದ ಮೂರು ವರ್ಷಗಳಲ್ಲಿ ಕೇಂದ್ರ ಸರ್ಕಾರವು ಆಹಾರ ಮತ್ತು ರಸಗೊಬ್ಬರ ಕ್ಷೇತ್ರದಲ್ಲಿ ದಾಖಲೆ ಮಟ್ಟದಲ್ಲಿ ಸಬ್ಸಿಡಿ ನೀಡಿದೆ. 2022–23ರ ಬಜೆಟ್ ಮಂಡಿಸುವಾಗ 3.2 ಲಕ್ಷ ಕೋಟಿ ರೂ.ಗಳನ್ನು ರಸಗೊಬ್ಬರ ಮತ್ತು ಆಹಾರದ ಮೇಲೆ ಸಬ್ಸಿಡಿ ಕೊಡುವುದಾಗಿ ಹೇಳಲಾಗಿತ್ತು ಅಲ್ಲಿಂದ ಇಲ್ಲಿಯವರೆಗೆ 5.6 ಲಕ್ಷ ಕೋಟಿ ರೂ. ಸಬ್ಸಿಡಿ ನೀಡಲಾಗಿದೆ. ಅಂದರೆ 2.4 ಲಕ್ಷ ಕೋಟಿಯನ್ನು ಹೆಚ್ಚುವರಿಯಾಗಿಯೇ ನೀಡಲಾಗಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ 'ರಾಷ್ಟ್ರ ಮೊದಲು' ಎಂಬ ಧ್ಯೇಯದಿಂದ ಭವಿಷ್ಯದ ಮುನ್ನೋಟವನ್ನು ಇಟ್ಟುಕೊಂಡು ಅಭಿವೃದ್ಧಿ, ಉದ್ಯೋಗ ಸೃಷ್ಟಿಗೆ ಹೆಚ್ಚಿನ ಆದ್ಯತೆ ನೀಡುವ ನಿಟ್ಟಿನಲ್ಲಿ ಯಾವ ಕಾಲಕ್ಕೂ ಹಳಿತಪ್ಪದ ಬಜೆಟ್ ನೀಡಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರಗತಿಗೆ ದಾರಿದೀಪ: ಕೇಂದ್ರ ಬಜೆಟ್ ಪ್ರಗತಿಗೆ ದಾರಿದೀಪವಾಗಿದೆ. ಸರ್ವರ ಅಭಿವೃದ್ಧಿ, ತಲುಪಲು ಕಷ್ಟಸಾಧ್ಯವಾದ ಪ್ರದೇಶ ಹಾಗೂ ಜನರನ್ನು ತಲುಪುವುದು, ಮೂಲಸೌಕರ್ಯ ಹೂಡಿಕೆ, ಭಾರತದ ಸಾಮರ್ಥ್ಯ ಪ್ರಜ್ವಲಿಸುವುದು, ಹಸಿರು ಅರ್ಥಿಕತೆಯ ಅಭಿವೃದ್ಧಿ, ಯುವಶಕ್ತಿಯ ವರ್ಧನೆ ಹಾಗೂ ಹಣಕಾಸು ವಿಚಾರಗಳನ್ನು ಇಟ್ಟುಕೊಂಡು ಸಪ್ತಋಷಿ ಎಂಬ 7 ಪ್ರಮುಖ ಅಂಶಗಳನ್ನೊಳಗೊಂಡ ಯೋಜನೆಯನ್ನು ರೂಪಿಸಿದೆ. ಮೂಲ ಸೌಕರ್ಯ ಕ್ಷೇತ್ರದಲ್ಲಿ 10 ಲಕ್ಷ ಕೋಟಿ ರೂ. ಹೂಡಿಕೆ ಮಾಡಲಾಗಿದೆ. ಅಂದರೆ 2013–14ರಲ್ಲಿ ಹೂಡಿಕೆ ಮಾಡಿದ್ದ 2.5 ಲಕ್ಷ ಕೋಟಿ ರೂ. ಇದರ ಮುಂದೆ ಲೆಕ್ಕಕ್ಕೆ ಇಲ್ಲದಂತಾಗಿದೆ. ಮೂಲ ಸೌಕರ್ಯ ಕ್ಷೇತ್ರದ ಅಭಿವೃದ್ಧಿ ರಾಜ್ಯ ಮಟ್ಟದಲ್ಲೂ ಆಗಬೇಕೆನ್ನುವ ದೃಷ್ಟಿಯಿಂದ 3,69,988 ಕೋಟಿ ರೂ. ಅನುದಾನ ನೀಡಲಾಗಿದೆ. ಹಾಗೆಯೇ ರೈಲ್ವೆ ಕ್ಷೇತ್ರಕ್ಕೆ 2.4 ಲಕ್ಷ ಕೋಟಿ ರೂ. ಹೂಡಿಕೆ ಮಾಡುವ ಮೂಲಕ ಕೇಂದ್ರ ಸರ್ಕಾರ ಹೊಸ ಕ್ರಾಂತಿಯನ್ನು ಸೃಷ್ಟಿಸಿದೆ. 2013–14ರಲ್ಲಿ ಕಾಂಗ್ರೆಸ್ ಸರ್ಕಾರ ರೈಲ್ವೆ ಕ್ಷೇತ್ರದಲ್ಲಿ ಹೂಡಿಕೆ ಮಾಡಿದ್ದರ 9 ಪಟ್ಟು ಹೆಚ್ಚಿನ ಹೂಡಿಕೆಯನ್ನು ಕೇಂದ್ರ ಬಿಜೆಪಿ ಸರ್ಕಾರ ಮಾಡಿದೆ ಒಟ್ಟಾರೆ 2023–24ರ ಕೇಂದ್ರ ಬಜೆಟ್ ಅಭಿವೃದ್ಧಿ ಮಾರ್ಗದರ್ಶಕವಾಗಿದೆ ಎಂದರು.

ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಮೇಯರ್ ಶಿವಕುಮಾರ್, ಉಪ ಮೇಯರ್ ಡಾ.ಜಿ.ರೂಪ, ವ್ಯಾಪಾರ ಮತ್ತು ವಾಣಿಜ್ಯ ಪ್ರಕೋಷ್ಠದ ಸಹ ಸಂಚಾಲಕ ಪ್ರಕಾಶ್ ಮಂಡೋ ಮತ್ತಿತರರಿದ್ದರು.

ರೈತರಿಗೆ ಪ್ರಧಾನಿ ಮೋದಿ ಬಂಪರ್ ಕೊಡುಗೆ...

ಇತಿಹಾಸ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹ ಕೆಲಸ ಮಾಡಿರುವ ಪ್ರಧಾನಿ ನರೇಂದ್ರ ಮೋದಿ, ರೈತರಿಗೆ ಬಂಪರ್ ಕೊಡುಗೆ ನೀಡಿದ್ದಾರೆ. ರಸಗೊಬ್ಬರಕ್ಕೆ 2022ರಲ್ಲಿ 1.5 ಲಕ್ಷ ಕೋಟಿ ರೂ. ಸಬ್ಸಿಡಿ ನೀಡುವುದಾಗಿ ಹೇಳಲಾಗಿತ್ತು. ಅದೀಗ 2.55 ಲಕ್ಷ ಕೋಟಿ ರೂಗಳಿಗೆ ಹೆಚ್ಚಾಗಿದೆ. 2019–20ರಲ್ಲಿ 80 ಸಾವಿರ ಕೋಟಿ ರೂ.ನಿಂದ ಈ ವರ್ಷ 2.55 ಲಕ್ಷ ಕೋಟಿ ರೂಗಳಿಗೆ ಅಂದರೆ ಕಳೆದ ವರ್ಷ ಮೂರು ವರ್ಷದಲ್ಲಿ ರಸಗೊಬ್ಬರದ ಮೇಲೆ ಕೊಟ್ಟಿರುವ ಸಬ್ಸಿಡಿ ತ್ರಿಬಲ್ ಆಗಿದೆ. ಕನಿಷ್ಠ ಬೆಂಬಲ ಬೆಲೆಯಲ್ಲೂ ಶೇ.50 ರಷ್ಟು ಹೆಚ್ಚಾಗಿದೆ. ಹಾಗೆಯೇ ಆಹಾರ ಪದಾರ್ಥಗಳ ಉತ್ಪಾದನೆಯಲ್ಲೂ ಭಾರತ ಮುಂದಿದ್ದು, ಮೊದಲ ಬಾರಿ ಗ್ರಾಮೀಣ ಭಾರತದಲ್ಲಿ ಅಭಿವೃದ್ಧಿ ಕಂಡು ಬರುತ್ತಿದೆ ಎಂದು ಹಲವಾರು ತಜ್ಞರು ಹೇಳುತ್ತಿದ್ದಾರೆ.

- ವಿಶ್ವನಾಥ್ ಭಟ್, ಆರ್ಥಿಕ ತಜ್ಞ

ಜೆ.ಪಿ.ನಗರ ನಿವಾಸಿಗಳ ನಾನಾ ಸಮಸ್ಯೆ ಚರ್ಚೆ



ಮೈಸೂರು, ಫೆ.16(ಎಸ್‌ಬಿಡಿ)– ಮೈಸೂರಿನ ಜೆ.ಪಿ.ನಗರ ಬಡಾವಣೆ ನಿವಾಸಿಗಳು ಸಭೆ ನಡೆಸಿ, ಸಾರ್ವಜನಿಕ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿದರು.

ಬಡಾವಣೆಯ ಗೊಬ್ಬಳಿಮರದ ಬಳಿ ನಡೆದ ಸಭೆಯಲ್ಲಿ ಮಾತನಾಡಿದ ಆರ್ಥಿಕ ತಜ್ಞರಾದ ಪ್ರೊ.ಆರ್.ಎಂ.ಚಿಂತಾಮಣಿ, ಬಡಾವಣೆಯಲ್ಲಿ ಒಳಚರಂಡಿ, ನೀರು, ವಿದ್ಯುತ್, ರಸ್ತೆ ಸೇರಿದಂತೆ ಮೂಲ ಸೌಕರ್ಯಗಳು ಸಮರ್ಪಕವಾಗಿಲ್ಲ. ಸಮಸ್ಯೆಗಳ ಪರಿಹಾರಕ್ಕೆ ಹಲವು ಬಾರಿ ಮನವಿ ಮಾಡಿದರೂ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಶಿವಕುಮಾರ್ ಮಾತನಾಡಿ, ಅಕ್ಕಮಹಾದೇವಿ ರಸ್ತೆಯಲ್ಲಿ ಜೆಎಸ್‌ಎಸ್ ಪಬ್ಲಿಕ್ ಶಾಲೆ ಬಳಿ ತುರ್ತಾಗಿ ಎರಡು ರಸ್ತೆ ಡುಬ್ಬಗಳನ್ನು ನಿರ್ಮಿಸಬೇಕಿದೆ. ಈ ಸ್ಥಳದಲ್ಲಿ ವಾಹನಗಳನ್ನು ವೇಗವಾಗಿ ಓಡಿಸುತ್ತಾರೆ. ಅದೃಷ್ಟವಶಾತ್ ಈವರೆಗೆ ಅಪಘಾತ ಸಂಭವಿಸಿಲ್ಲ. ಹಾಗಂತ ಮುಂಜಾಗ್ರತಾ ಕ್ರಮ ಕೈಗೊಳ್ಳದಿದ್ದರೆ ಅವಘಡ ಸಂಭವಿಸುವ ಸಾಧ್ಯತೆ ಇದೆ ಎಂದು ಆಗ್ರಹಿಸಿದರು.

ಶಾರದಾವಿಲಾಸ ಕಾಲೇಜಿನ ಪ್ರಾಧ್ಯಾಪಕಿ ಪ್ರೊ.ದೇವಿಕಾ ಮಾತನಾಡಿ, ಬಡಾವಣೆಯ ಬಹುತೇಕ ರಸ್ತೆಗಳು ಹಾಳಾಗಿವೆ. ಅದರಲ್ಲೂ ಶನೇಶ್ವರ ದೇವಸ್ಥಾನದ ಬಳಿ ವೃತ್ತದಲ್ಲಿ ಮಳೆ ಬಂದಾಗ ನೀರು ನಿಲ್ಲುವುದರಿಂದ ವಾಹನ ಸವಾರರಿಗೆ ತೀವ್ರ ತೊಂದರೆಯಾಗುತ್ತದೆ. ಈ ಬಗ್ಗೆ ಯಾವುದೇ ಪರಿಹಾರ ಕ್ರಮ ಕೈಗೊಂಡಿಲ್ಲ ಎಂದು ದೂರಿದರು.

ತೀರ್ಥಪ್ರಸಾದ್ ಮಾತನಾಡಿ, ಹಿಂದೆ ನಾಡು–ನುಡಿಗೆ ಸಬಂಧಿಸಿದ ಹೋರಾಟ, ಸಾರ್ವಜನಿಕ ಸಮಸ್ಯೆ ಸಂಬಂಧ ಪ್ರತಿಭಟನೆಗೆ ಯುವಕರು ಸ್ವಯಂ ಪ್ರೇರಿತವಾಗಿ ಭಾಗವಹಿಸುತ್ತಿದ್ದೆವು. ಆದರೆ ಈಗ ಹಿರಿಯರೇ ಹೋರಾಟ ನಡೆಸಬೇಕಾದ ಪರಿಸ್ಥಿತಿ ಇದೆ. ಈ ಬಗ್ಗೆ ಯುವ ಸಮುದಾಯವನ್ನು ಜಾಗೃತಗೊಳಿಸುವ ಕೆಲಸವೂ ಅವಶ್ಯವಾಗಿ ಆಗಬೇಕಿದೆ ಎಂದು ಅಭಿಪ್ರಾಯಿಸಿದರು.

ಜನಪ್ರತಿನಿಧಿಗಳು ನೀಡುವ ಆಶ್ವಾಸನೆಗಳನ್ನು ಈಡೇರಿಸುವುದಿಲ್ಲ. ಸಮಸ್ಯೆ ಗಳನ್ನು ಹೇಳಿಕೊಂಡರೂ ಸ್ಪಂದಿಸುವುದಿಲ್ಲ. ಅಧಿಕಾರಿಗಳಿಗಂತೂ ಜನರ ಕುಂದುಕೊರತೆ ಗಳೆಂದರೆ ಅಸಡ್ಡೆ ಎಂದು ಅನೇಕರು ಆರೋಪಿಸಿದರು. ಬಡಾವಣೆಯ ಸಮಸ್ಯೆಗಳನ್ನು ಪಟ್ಟಿ ಮಾಡಿ ಪರಿಹಾರಕ್ಕಾಗಿ ಜನ ಪ್ರತಿನಿಧಿಗಳು ಹಾಗೂ ಅಧಿಕಾರಿಗಳನ್ನು ಒಮ್ಮತದಿಂದ ಆಗ್ರಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಮಾಜಿ ಮೇಯರ್ ಬಿ.ಎಲ್.ಭೈರಪ್ಪ, ವಕೀಲ ಮಂಜುನಾಥ್, ಈಶ್ವರ್, ನಾ.ಮಹಾವೀರ ಪ್ರಸಾದ್ ಮತ್ತಿತರರು ಭಾಗವಹಿಸಿದ್ದರು.

ಫೆ.23, ಮಂಚೇಗೌಡನ ಕೊಪ್ಪಲಲ್ಲಿ ಗ್ರಾಮ ದೇವತೆ ಜಾತ್ರೆ



ಮೈಸೂರು, ಫೆ.16–ಮೈಸೂರಿನ ಮಂಚೇಗೌಡನ ಕೊಪ್ಪಲಿನ ಗ್ರಾಮ ದೇವತೆಗಳಾದ ಶ್ರೀ ಹಿರಿಯಮ್ಮ ಶ್ರೀ ಕುಂಬಳದೇವಿ ಅಮ್ಮನವರ ಜಾತ್ರಾಮಹೋತ್ಸವ ಫೆ.23 ರಂದು ಅದ್ಧೂರಿಯಾಗಿ ಜರುಗಲಿದೆ.

ಪ್ರತಿ 5 ವರ್ಷಕ್ಕೊಮ್ಮೆ ಈ ಗ್ರಾಮ ದೇವತೆಯ ಜಾತ್ರಾಮಹೋತ್ಸವ ನಡೆಯಲಿದೆ. ಈ ಜಾತ್ರೆಗೆ ಈಗಾಗಲೇ ಗ್ರಾಮದಲ್ಲಿ ಭರದಿಂದ ಸಿದ್ಧತೆಗಳು ನಡೆಯುತ್ತಿವೆ.

ಫೆ.23ರಂದು ಸಂಜೆ 4.00 ಗಂಟೆಗೆ ಚೌಟ್ರಿ ಸರ್ಕಲ್‌ನ ಬಳಿ ಇರುವ ಅರಿಲಮ್ಮನ ದೇವಸ್ಥಾನದ ಕೊಳದಿಂದ ಮಂಚೇಗೌಡನಕೊಪ್ಪಲಿನ ಕುಂಬಳದೇವಮ್ಮ ದೇವಸ್ಥಾನದವರೆಗೆ ಶ್ರೀ ಹಿರಿಯಮ್ಮ ಶ್ರೀ ಕುಂಬಳದೇವಿ ಅಮ್ಮನವರು ಹಾಗೂ ಮಂಟೇಸ್ವಾಮಿ ಬಸಪ್ಪ ಮತ್ತು ದೇವನಹಳ್ಳಿ ಸಿದ್ದಪ್ಪಾಜಿ ಬಸಪ್ಪನವರ ಮೆರವಣಿಗೆ ಆಯೋಜಿಸಲಾಗಿದೆ.

ಮರುದಿನ ಫೆ.24ರ ಶುಕ್ರವಾರದಂದು ಕುಂಬಳದೇವಮ್ಮ ದೇವಸ್ಥಾನದ ಹತ್ತಿರ ಭೂಪೇಗೌಡರ ಛತ್ರದಲ್ಲಿ ಮಧ್ಯಾಹ್ನ 12 ಗಂಟೆಗೆ ಅನ್ನಸಂತರ್ಪಣೆಯನ್ನು ಏರ್ಪಡಿಸಲಾಗಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಶ್ರೀ ಹಿರಿಯಮ್ಮ ಕುಂಬಳದೇವಿ ಕೃಪೆಗೆ ಪಾತ್ರರಾಗಬೇಕೆಂದು ಪೈ.ನಾರಾಯಣ ಗುಡ್ಡಪ್ಪ ಹಾಗೂ ಮಂಚೇಗೌಡನಕೊಪ್ಪಲು ಯಜಮಾನರು, ಗ್ರಾಮಸ್ಥರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಇಂದಿನಿಂದ ರಾಷ್ಟ್ರ ಮಟ್ಟದ ಹೊನಲು ಬೆಳಕಿನ ಮ್ಯಾಟ್ ಕಬಡ್ಡಿ ಪಂದ್ಯಾವಳಿ




ಮೈಸೂರು, ಫೆ16(ಪಿಎಂ)– ಅಶೋಕಪುರಂ ಫ್ರೆಂಡ್ಸ್ ಸಂಘಟನೆ ವತಿಯಿಂದ ಫೆ.17ರಿಂದ 19ರವರೆಗೆ ರಾಷ್ಟ್ರ ಮಟ್ಟದ ಹೊನಲು ಬೆಳಕಿನ ಮ್ಯಾಟ್ ಕಬಡ್ಡಿ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಸಂಘಟನೆ ಸದಸ್ಯ ಮತ್ತು ಫುಟ್‌ಬಾಲ್ ಪಟು ಎಂ.ಎನ್.ಮಧುಸೂದನ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಶೋಕಪುರಂನ ಎಂಟಿಎಂ ಶಾಲೆಯ ಮೈದಾನದಲ್ಲಿ ಪಂದ್ಯಾವಳಿ ನಡೆಯಲಿದೆ. ಇದು ಆಹ್ವಾನಿತ ಪಂದ್ಯಾವಳಿ ಆಗಿದ್ದು, ತಮಿಳುನಾಡು, ಕೇರಳ, ಹರಿಯಾಣ ಸೇರಿದಂತೆ ವಿವಿಧ ರಾಜ್ಯಗಳ ತಂಡಗಳು ಭಾಗವಹಿಲಿವೆ. ಜೊತೆಗೆ ಬೆಂಗಳೂರು, ಮೈಸೂರು, ಮಂಡ್ಯ, ಕೊಡಗು, ಚಾಮರಾಜನಗರ ಜಿಲ್ಲೆಗಳಿಂದಲೂ ತಂಡಗಳು ಪಾಲ್ಗೊಳ್ಳಲಿದ್ದು, ಒಟ್ಟು 12 ತಂಡಗಳು ಭಾಗವಹಿಸಲಿವೆ ಎಂದರು.

ಭಾರತೀಯ ಅಮೆಚ್ಯೂರ್ ಕಬಡ್ಡಿ ಅಸೋಸಿಯೇಷನ್, ಕರ್ನಾಟಕ ರಾಜ್ಯ ಅಮೆಚ್ಯೂರ್ ಕಬಡ್ಡಿ ಅಸೋಸಿಯೇಷನ್ ಮತ್ತು ಮೈಸೂರು ಅಮೆಚ್ಯೂರ್ ಕಬಡ್ಡಿ ಅಸೋಸಿಯೇಷನ್ ಸಹಯೋಗದಲ್ಲಿ ಪಂದ್ಯಾವಳಿ ನಡೆಯಲಿದೆ ಪ್ರಥಮ, ದ್ವಿತೀಯ, ತೃತೀಯ ಮತ್ತು ನಾಲ್ಕನೇ ಸ್ಥಾನ ಗಳಿಸುವ ತಂಡಗಳಿಗೆ ಕ್ರಮವಾಗಿ ಲಕ್ಷ ರೂ., 50 ಸಾವಿರ ರೂ. ಮತ್ತು ತಲಾ 25 ಸಾವಿರ ರೂ. ನಗದು ಬಹುಮಾನ ನೀಡಲಾಗುವುದು ಎಂದು ಹೇಳಿದರು.

ಫೆ.17ರಂದು ಮಧ್ಯಾಹ್ನ 3ಕ್ಕೆ ಸಂಸದ ವಿ.ಶ್ರೀನಿವಾಸ ಪ್ರಸಾದ್ ಪಂದ್ಯಾವಳಿಗೆ ಚಾಲನೆ ನೀಡಲಿದ್ದಾರೆ. ಪಂದ್ಯಾವಳಿಯಲ್ಲಿ ರಾಷ್ಟ್ರ ಮತ್ತು ಪ್ರೋ ಕಬಡ್ಡಿ ಆಟಗಾರರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ವಿವೇಕ ಸೋಶಿಯಲ್ ಕ್ಲಬ್ ಕಾರ್ಯದರ್ಶಿ ರಾಜೇಂದ್ರ, ಬಿಜೆಪಿ ಮುಖಂಡ ಸಿ.ಈಶ್ವರ್, ಮುಖಂಡರಾದ ವೆಂಕಟರಾಜು, ಮಹದೇವ್ರ, ಹೆಚ್.ಎಸ್.ಸೋಮಶೇಖರ್ ಗೋಷ್ಠಿಯಲ್ಲಿದ್ದರು.

ನೃಪತುಂಗ ವಿದ್ಯಾಸಂಸ್ಥೆ ಅಧ್ಯಕ್ಷರಾಗಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಆಯ್ಕೆ



ಮೈಸೂರು, ಫೆ16– ಮೈಸೂರಿನ ಕನ್ನಡ ವಿಕಾಸ ವಿದ್ಯಾಸಂಸ್ಥೆ ಮತ್ತು ನೃಪತುಂಗ ವಿದ್ಯಾಸಂಸ್ಥೆಯ ನೂತನ ಅಧ್ಯಕ್ಷರಾಗಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಶನಿವಾರ ನಡೆದ ಆಡಳಿತ ಮಂಡಳಿ ಸರ್ವ ಸದಸ್ಯರ ಸಭೆಯಲ್ಲಿ ಸರ್ವಾನುಮತದಿಂದ ಆಯ್ಕೆಯಾದರು. ಕನ್ನಡ ಪರ ಹೋರಾಟಗಾರ ಪ.ಮಲ್ಲೇಶ್ ಅವರ ನಿಧನದಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಸಂಸ್ಥೆಯ ಕಾರ್ಯದರ್ಶಿ ಪ್ರೊ.ಎಚ್.ಜಿ.ಕೃಷ್ಣಪ್ಪ ಅವರು ಶಾಸಕ ಡಾ.ಯತೀಂದ್ರ ಹೆಸರನ್ನು ಸೂಚಿಸಿದರು. ನಂತರ ಕಾರ್ಯದರ್ಶಿ ಸವಿತಾ ಅನುಮೋದಿಸಿದರು. ಹಾಜರಿದ್ದ ಸದಸ್ಯರು ಒಪ್ಪಿಗೆ ಸೂಚಿಸಿ, ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಸಭೆ ಬಳಿಕ ಮಾತನಾಡಿದ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಸಾರ್ವಜನಿಕ ಹಿತಾಸಕ್ತಿ ಹಾಗೂ ಆದರ್ಶಗಳ ಇತಿಹಾಸ ಹೊಂದಿರುವ ಸಂಸ್ಥೆಯನ್ನು ಎಲ್ಲರೂ ಒಗ್ಗಟ್ಟಾಗಿ ಕಟ್ಟಬೇಕಿದೆ ಎಂದು ತಿಳಿಸಿದರು. ಆಡಳಿತ ಮಂಡಳಿಯ ಉಪಾಧ್ಯಕ್ಷ ಸ.ರ.ಸುದರ್ಶನ ಅಧ್ಯಕ್ಷತೆ ವಹಿಸಿದ್ದರು.

ಪ್ರಗತಿಯಲ್ಲಿ ವಿದ್ಯಾರ್ಥಿ ಸಮುದಾಯದ್ದು ಪ್ರಮುಖ ಪಾತ್ರ

ಮೈಸೂರು ವಿವಿ ಹಂಗಾಮಿ ಕುಲಪತಿ ಪ್ರೊ.ಎಚ್.ರಾಜಶೇಖರ್ ಅಭಿಮತ



ಮೈಸೂರು, ಫೆ.16– ಸಮಾಜ, ಸಂಸ್ಥೆ, ವಿದ್ಯಾರ್ಥಿ ಸಮುದಾಯ ಈ ವ್ಯವಸ್ಥೆಯ ಪ್ರಧಾನ ಭಾಗಗಳಾಗಿವೆ. ಇವುಗಳಲ್ಲಿ ವಿದ್ಯಾರ್ಥಿ ಸಮುದಾಯವು ದೇಶದ ಪ್ರಗತಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಹಂಗಾಮಿ ಕುಲಪತಿ ಪ್ರೊ.ಎಚ್.ರಾಜಶೇಖರ್ ತಿಳಿಸಿದರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಾಲೇಜಿನಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ನಡೆಯುತ್ತಿರುವ ಎರಡು ದಿನಗಳ 'ಅಭಿವಿನ್ಯಾಸ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ಉಜ್ವಲಗೊಳಿಸುವ ಆಶಯದೊಂದಿಗೆ ಪವಿತ್ರವಾದ ನೆನಪುಗಳು ಮತ್ತು ಸ್ವಂತ ಆದ್ಯತೆಗಳೊಂದಿಗೆ ಸಂಸ್ಥೆಗಳನ್ನು ಪ್ರವೇಶಿಸುತ್ತಾರೆ. ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳ ಎಲ್ಲಾ ವಿಶಿಷ್ಟ ವಿಚಾರಗಳನ್ನು ಗುರುತಿಸಿ ಪೋಷಿಸಬೇಕು. ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿವೆ. ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರತಿಭಾವಂತರಾಗಿ ಗುರುತಿಸಿಕೊಂಡಿದ್ದಾರೆ' ಎಂದರು.

ಕಾಲೇಜು ಸಮುಚ್ಚಯದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರೊ.ಬಿ.ವಿ. ಸಾಂಬಶಿವಯ್ಯ ಮಾತನಾಡಿ, 'ಧೀಕ್ಷಾರಂಭ' ಅಥವಾ 'ಅಭಿವಿನ್ಯಾಸ' ಕಾರ್ಯಕ್ರಮದ ಪರಿಕಲ್ಪನೆ ಮತ್ತು ಮಹತ್ವವನ್ನು ವಿವರಿಸಿ, ಸ್ನಾತಕ ಪದವಿಯಿಂದ ಸ್ನಾತಕೋತ್ತರ ಪದವಿಗೆ ಪ್ರವೇಶ ಪಡೆದಾಗ ವಿದ್ಯಾರ್ಥಿಗಳು ನಾನಾ ಚಿಂತನೆ, ಕನಸುಗಳೊಂದಿಗೆ ಬಂದಿರುತ್ತಾರೆ. ಈ ಸಂದರ್ಭದಲ್ಲಿ ಕಾಲೇಜಿನ ಬಗ್ಗೆ ಕಾಲೇಜಿನ ಬಗ್ಗೆ, ಅವರ ವಿಷಯಗಳ ಆಯ್ಕೆ, ಪರೀಕ್ಷಾ ವ್ಯವಸ್ಥೆ, ಕಾಲೇಜು ನಿಯಮಗಳು ಇತ್ಯಾದಿ ವಿಷಯಗಳ ಬಗ್ಗೆ ಮಾಹಿತಿ ನೀಡುವುದು ಮಹತ್ವದ ಕೆಲಸವಾಗಿದ್ದು, ಇದಕ್ಕಾಗಿ ಯುಜಿಸಿ 'ಧೀಕ್ಷಾರಂಭ' ಕಾರ್ಯಕ್ರಮವನ್ನು ರೂಪಿಸಿದೆ, ಈ ಎರಡು ದಿನಗಳ ಕಾರ್ಯಕ್ರಮ 'ಧೀಕ್ಷಾರಂಭ' ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಈ ಎಲ್ಲಾ ಮಾಹಿತಿಯನ್ನು ಒದಗಿಸುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಪ್ರೊ.ಎಂ.ಪಿ.ವಿಜಯೇಂದ್ರ ಕುಮಾರ್, ಪ್ರಾಧ್ಯಾಪಕ ಪ್ರೊ.ಮೊರಬದ ಮಲ್ಲಿಕಾರ್ಜುನ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದರೆ 'ನಾಗರಿಕ ದಂಗೆ'

- ವಿಪಕ್ಷ ನಾಯಕ ಸಿದ್ದರಾಮಯ್ಯ ತರಾಟೆ
- ಈಗ ಎಲ್ಲಿ ಹೋದರೂ ಹೊಡಿ... ಬಡಿ... ಕಡಿ...!



ಬೆಂಗಳೂರು, ಫೆ. 16 (ಕೆಎಂಶಿ)–ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬಂದರೆ ನಾಗರಿಕ ದಂಗೆ ಆರಂಭವಾಗಲಿದೆ ಎಂದು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹೊಡಿ, ಬಡಿ, ಕಡಿ ಎನ್ನುವ ಮೂಲಕ ದೇಶದಲ್ಲಿ ಬಿಜೆಪಿಯವರು ಭಯದ ವಾತಾವರಣ ಸೃಷ್ಟಿಸುತ್ತಿದ್ದಾರೆ. ಸಾಮಾನ್ಯರನ್ನು ಹಾಳುಗೆಡವಿ ಅಶಾಂತಿ ಮೂಡಿಸುವುದೇ ಇವರ ಉದ್ದೇಶ ಎಂದರು.

ಉನ್ನತ ಶಿಕ್ಷಣ ಸಚಿವ ಅಶ್ವತ್ಥ್‌ನಾರಾಯಣ್ ಅದೇ ಧಾಟಿಯಲ್ಲಿ ನನ್ನ ವಿರುದ್ಧ ಮಾತನಾಡಿದ್ದಾರೆ. ನನ್ನನ್ನು ಮುಗಿಸಿ ಎಂದರೆ ಏನು ಅರ್ಥ. ಜನರನ್ನು ರಕ್ಷಿಸಬೇಕಾದವರೇ ಈ ರೀತಿ ಮಾತನಾಡಿದರೆ ಇದಕ್ಕೆ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಷಾ ಉತ್ತರ ನೀಡಬೇಕೆಂದರು.

ಈ ಮಧ್ಯೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಾಜ್ಯ ಉಸ್ತುವಾರಿ ಹೊಣೆ ಹೊತ್ತ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ್, ಮಹಾತ್ಮಾ ಗಾಂಧಿ ಕೊಂದವರು ಇಂತಹದ್ದೇ ಹಿಂಸಾತ್ಮಕ ಹೇಳಿಕೆ ನೀಡುತ್ತಿದ್ದಾರೆ ಎಂದು ಸಚಿವ ಡಾ. ಅಶ್ವತ್ಥ್ ನಾರಾಯಣ್ ಅವರನ್ನು ತರಾಟೆಗೆ ತೆಗೆದುಕೊಂಡರು.

ಬಿಜೆಪಿ ರಾಜ್ಯದಲ್ಲಿ ಮುಂದೆ ಎದುರಾಗುತ್ತಿರುವ ಸೋಲಿನ ಭೀತಿಯಿಂದ ದಿಗ್ಭ್ರಾಂತರಾಗಿರುವುದಕ್ಕೆ ಅವರ ಹೇಳಿಕೆಯೇ ಸಾಕ್ಷಿ. ಇದು ಅವರ ಮಾನಸಿಕ ಸ್ಥಿತಿ ಹಾಗೂ ಭ್ರಷ್ಟಾಚಾರ ದುರಾಡಳಿತದ ಪ್ರತೀಕ ಎಂದರು. ಅವರು ನಮಗೆ ಜೀವ ಬೆದರಿಕೆ ಹಾಕಿದರೂ ನಾವು ಅವರಿಗೆ ಪ್ರತಿ ವಿಶ್ವಾಸವನ್ನೇ ನೀಡುತ್ತೇವೆ. ಸಚಿವರ ಹೇಳಿಕೆಯ ಬಗ್ಗೆ ಗೃಹ ಸಚಿವರು ಮತ್ತು ಮುಖ್ಯಮಂತ್ರಿಗಳು ಕಾನೂನಿನಡಿ ಕ್ರಮ ಜರುಗಿಸಬೇಕೆಂದು ಆಗ್ರಹಿಸಿದರು.

ಬ್ಯಾಂಕಿಂಗ್ ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ

ಮೈಸೂರು, ಫೆ16– ರಾಷ್ಟ್ರೀಕೃತ ಬ್ಯಾಂಕ್ ಹಾಗೂ ಗ್ರಾಮೀಣ ಬ್ಯಾಂಕ್‌ಗಳ ಪ್ರೊಬೇಷನರಿ ಆಫೀಸರ್ಸ್ ಹಾಗೂ ಕ್ಲರಿಕಲ್ ಹುದ್ದೆ ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳಿಗೆ ಮೈಸೂರಿನ ಕೃಷಿಕ್ ಸರ್ವೋದಯ ಫೌಂಡೇಷನ್ ವತಿಯಿಂದ ತರಬೇತಿ ನೀಡಲಿದ್ದು, ಕೆನರಾ ಬ್ಯಾಂಕ್ ನಿವೃತ್ತ ಜನರಲ್ ಮ್ಯಾನೇಜರ್ ಡಾ.ಎಸ್.ಟಿ.ರಾಮಚಂದ್ರ ಹಾಗೂ ಪರಿಣಿತ ಸಂಪನ್ಮೂಲ ವ್ಯಕ್ತಿಗಳಿಂದ ಫೆ20ರ ಸಂಜೆ 5.30ರಿಂದ ಆನ್‌ಲೈನ್ ಹಾಗೂ ಆಫ್‌ಲೈನ್ ತರಬೇತಿ ಕಲ್ಪಿಸಲಾಗುವುದು. ನೋಂದಣಿ ಹಾಗೂ ಹೆಚ್ಚಿನ ಮಾಹಿತಿಗೆ ದೂ.ಸಂ.0821–2301564, 8296218607 ಸಂಪರ್ಕಿಸುವಂತೆ ಫೌಂಡೇಷನ್‌ನ ಮೈಸೂರು ಶಾಖೆ ಕಾರ್ಯದರ್ಶಿ ಬಿ.ಕೆ.ಶಿವಣ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ವಿಧಾನಸಭೆಯಲ್ಲಿ 'ಗದ್ದಲ'

ಎಂಬುದು ತಿಳಿಯದಷ್ಟು ಗೊಂದಲದ ಪರಿಸ್ಥಿತಿ ನಿರ್ಮಾಣವಾಯಿತು. ಡಾ. ಅಶ್ವತ್ಥನಾರಾಯಣ ಬೆಂಬಲಕ್ಕೆ ಸಚಿವ ಡಾ. ಸುಧಾಕರ್ ಮತ್ತಿತರರು ಧಾವಿಸಿದರು. ಇದಕ್ಕೂ ಮುನ್ನ ವಿಷಯ ಪ್ರಸ್ತಾಪಿಸಿದ ಯು.ಟಿ.ಖಾದರ್, ಕಳೆದ ಒಂದು ತಿಂಗಳಿನಿಂದ ರಾಜ್ಯದಲ್ಲಿ ಕೋಮು ಸೌಹಾರ್ದಕ್ಕೆ ಧಕ್ಕೆ ತರುವ, ಅಶಾಂತಿ ಸೃಷ್ಟಿಸುವ ಹೇಳಿಕೆಗಳನ್ನು ಸಚಿವರು ಮತ್ತು ಶಾಸಕರು ನೀಡುತ್ತಿದ್ದಾರೆ. ಉಳ್ಳಾಲದಿಂದ ಹಿಡಿದು, ಚಿಕ್ಕಮಗಳೂರು, ಮತ್ತಿತರ ಕಡೆ ಈ ರೀತಿಯ ಹೇಳಿಕೆಗಳನ್ನು ನೀಡುತ್ತಿದ್ದಾರೆ.

ಸಂವಿಧಾನಬದ್ಧವಾಗಿ ಪ್ರಮಾಣ ವಚನ ಸ್ವೀಕರಿಸಿದ ಸಚಿವರ ಬಾಯಿಯಿಂದಲೇ ಇಂತಹ ಹೇಳಿಕೆಗಳು ಬಂದರೆ, ಸಮಾಜದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವವರು ಯಾರು. ಬಿಜೆಪಿಯವರ ಕೋಮು ಭಾವನೆಗಳನ್ನು ಕೆರಳಿಸಿ ನಮ್ಮನ್ನು ಪ್ರಚೋದನೆ ಮಾಡುತ್ತಿದ್ದರು. ನಾವು ಅವರ ಬಲೆಯಲ್ಲಿ ಬೀಳಬಾರದು ಎಂದು ಹೇಳಿಕೆ ಕೊಟ್ಟಿರಲಿಲ್ಲ. ಆದರೆ, ರಾಜ್ಯದ ಒಬ್ಬ ಜನನಾಯಕ, ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರ ವಿರುದ್ಧ ಹೇಳಿಕೆ ನೀಡಿದಾಗ ಸುಮ್ಮನಿರಬೇಕೆ ಎಂದು ಪ್ರಶ್ನಿಸಿದರು. ಈ ದೇಶದಲ್ಲಿ ಕಲಿಯದೇ ಇರುವವರಿಗಿಂತ ಕಲಿತವರಿಂದಲೇ ಹೆಚ್ಚು ಸಮಸ್ಯೆಗಳು ಸೃಷ್ಟಿಯಾಗುತ್ತವೆ. ಡಾ. ಅಶ್ವತ್ಥನಾರಾಯಣ ಅವರು ಮೂಲತಃ ವೈದ್ಯರು. ಅವರ ಬಾಯಿಂದ ಇಂತಹ ಮಾತುಗಳು ಬರಬಾರದು. ಬಾಯಿಗೆ ಬಂದಂತೆ ಕೆಲವರು ಮಾತನಾಡುತ್ತಿದ್ದಾರೆ. ಮೀರ್ ಸಾಧಿಕ್ ವಂಶಸ್ಥರು ತುಂಬಾ ಜನರಿದ್ದಾರೆ. ನೇರಾ ನೇರ ಹೋರಾಟ ಮಾಡದೇ ಹಿಂದಿನಿಂದ ಜನರನ್ನು ಪ್ರಚೋದನೆ ಮಾಡುತ್ತಾರೆ. ಅದರಲ್ಲೂ ಹಿರಿಯ ಸಚಿವರ ಬಾಯಲ್ಲಿ ಇಂತಹ ಮಾತು ಬರಬಾರದಿತ್ತು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಡಾ. ಅಶ್ವತ್ಥ ನಾರಾಯಣ ಅವರ ವಿರುದ್ಧ ಸ್ವಯಂ ದೂರು ದಾಖಲಿಸಿ ಕಾನೂನು ಕ್ರಮ ಜರುಗಿಸಬೇಕು. ಸುಪ್ರೀಂಕೋರ್ಟ್ ಕೂಡ ದ್ವೇಷ ಭಾಷಣ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟಿದ್ದರು.

ಆಗ ಸದನದಲ್ಲಿ ಗದ್ದಲದ ವಾತಾವರಣ ಉಂಟಾಯಿತು. ಗದ್ದಲದ ನಡುವೆಯೇ ಡಾ. ಅಶ್ವತ್ಥನಾರಾಯಣ ಉತ್ತರಿಸುತ್ತಿದ್ದಾಗ ಈಶ್ವರ ಖಂಡ್ರೆ ಏರಿದ ಧ್ವನಿಯಲ್ಲಿ ಮಾತಾಡಿದ್ದು, ಸಭಾಧ್ಯಕ್ಷರನ್ನು ಕೆರಳಿಸಿತು. ಪದೇ ಪದೆ ಕುಳಿತುಕೊಳ್ಳಿ ಎಂದು ಸೂಚನೆ ನೀಡಿದ ಹೊರತಾಗಿಯೂ, ಖಂಡ್ರೆ ಮಾತನಾಡುವುದನ್ನು ನಿಲ್ಲಿಸಲಿಲ್ಲ. ಇದರಿಂದ ಸಹನೆ ಕಳೆದುಕೊಂಡ ಕಾಗೇರಿ ಅವರು, ನೀವು ಹಿರಿಯರು, ಈ ರೀತಿ ನಡೆದುಕೊಳ್ಳುವುದು ನಿಮಗೆ ಶೋಭೆ ತರುವುದಿಲ್ಲ. ಸಚಿವರಾಗಿ ಕೆಲಸ ಮಾಡಿದ ಅನುಭವವಿದೆ. ಸಭಾಧ್ಯಕ್ಷರು ಹೇಳಿದ ಮೇಲೂ ನೀವು ಪೀಠಕ್ಕೆ ಗೌರವ ಕೊಡದೆ ಮಾತನಾಡುತ್ತಿದ್ದೀರಿ. ಇದೇನಾ ನೀವು ಸಭಾಧ್ಯಕ್ಷರಿಗೆ ಕೊಡುವ ಗೌರವ ಎಂದು ಪ್ರಶ್ನಿಸಿದರು. ನಾನು ಇದುವರೆಗೆ ಸಹನೆ ಕಳೆದುಕೊಳ್ಳದೇ ಮಾತನಾಡಿದ್ದೇನೆ. ಪೂರ್ಣ ಅಧಿಕಾರ ಚಲಾಯಿಸುವ ಅವಕಾಶ ಮಾಡಿಕೊಡಬೇಡಿ. ನನ್ನನ್ನು ಅನಗತ್ಯವಾಗಿ ಎಳೆದು ಮಾತನಾಡಿಸುತ್ತೀರಿ. ಕೇಳುವ ಸೌಜನ್ಯವಿಲ್ಲವೇ. ಪದೇ ಪದೆ ಇದೇ ರೀತಿ ಮುಂದುವರೆದರೆ, ಸದನದಿಂದ ಹೊರ ಹಾಕಬೇಕಾಗುತ್ತದೆ ಎಂದು ಸಭಾಧ್ಯಕ್ಷರು ಎಚ್ಚರಿಕೆ ನೀಡಿದರು. ಸಭಾಧ್ಯಕ್ಷರ ಈ ಹೇಳಿಕೆಗೆ ಕಾಂಗ್ರೆಸ್ ಸದಸ್ಯರಿಂದ ತೀವ್ರ ಆಕ್ರೋಶ ವ್ಯಕ್ತವಾಯಿತು. ಪ್ರಿಯಾಂಕ ಖರ್ಗೆ ಅವರು, ಇದೇನು ಸರ್ವಾಧಿಕಾರವೇ. ನಾವು ಈ ಸದನದ ಸದಸ್ಯರು. ಮಾತನಾಡುವ ಹಕ್ಕು ನಮಗೂ ಇದೆ. ಈ ರೀತಿ ಸೂಚಿಸುವುದು ಸರಿಯಲ್ಲ ಎಂದು ಆಕ್ಷೇಪಿಸಿದರು. ಆಗ ಸಭಾಧ್ಯಕ್ಷರು, ನಿಮಗೆ ಮಾತ್ರ ಬಿಪಿ ಬರುವುದಿಲ್ಲ. ನನಗೂ ಕೂಡ ಬಿಪಿ ಬರುತ್ತದೆ. ನಿಮಗೆ ಕೊನೆ ಬಾರಿ ಎಚ್ಚರಿಕೆ ಕೊಡುತ್ತಿದ್ದೇನೆ. ಹೊರಗೆ ಹಾಕಬೇಕೇ ಎಂದು ಪ್ರಶ್ನಿಸಿ, ನಿಮ್ಮಂಥವರು ಆಯ್ಕೆಯಾಗಿ ಬರುವುದು ಈ ಸದನಕ್ಕೆ ಅವಮಾನ ಎಂದು ಹೇಳುತ್ತಿದ್ದಂತೆ ಸದನದಲ್ಲಿ ಕೋಲಾಹಲ ಉಂಟಾಯಿತು. ಸಭಾಧ್ಯಕ್ಷರ ಮಾತಿಗೆ ತೀವ್ರವಾಗಿ ಆಕ್ಷೇಪಿಸಿದ ಕಾಂಗ್ರೆಸ್ ಸದಸ್ಯರು, ಬಾಲ್ಕಿ ಜನರಿಗೆ ಮಾಡಿದ ಅವಮಾನವಿದು ಎಂದು ವಿರೋಧಿಸಿ ಸದನದ ಬಾವಿಗಿಳಿದು ಧರಣಿ ನಡೆಸಲು ಮುಂದಾದರು. ಸದನ ಸಹಜ ಸ್ಥಿತಿಗೆ ಬಾರದ ಕಾರಣ ಸಭಾಧ್ಯಕ್ಷರು ಸದನದ ಕಾರ್ಯಕಲಾಪವನ್ನು 15 ನಿಮಿಷ ಕಾಲ ಮುಂದೂಡಿದರು.

ಜನರಿಗೆ ಪ್ರಚೋದನೆ ನೀಡಿದಂತೆ ಅಲ್ಲವೇ

ಅಮಿತ್ ಶಾ ಹೇಳಲಿ. ಕೂಡಲೇ ಸಚಿವ ಡಾ.ಅಶ್ವತ್ಥ್‌ನಾರಾಯಣ ವಜಾಗೊಳಿ ಸಬೇಕು ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್‌ಗೆ ಸಿದ್ದರಾಮಯ್ಯ ಮನವಿ ಮಾಡಿದ್ದಾರೆ.

ಆತ ಮನುಷ್ಯನೋ ರಾಕ್ಷಸನೋ ನೀವೇ ತಿಳಿದು ಕೊಳ್ಳಿ. ಮಹಾತ್ಮ ಗಾಂಧಿಯವರನ್ನು ಹತ್ಯೆ ಮಾಡಿದವ ರನ್ನು ಬೆಂಬಲಿಸುವ ಪಕ್ಷದ ಅಶ್ವತ್ಥ್ ನಾರಾಯಣ ಅವರಿಂದ ಇಂಥ ಹೇಳಿಕೆ ಮೂಡಿಬಂದಿರುವುದರಿಂದ ಅಚ್ಚರಿ ಯಿಲ್ಲ. ಬಹಿರಂಗವಾಗಿ ಹತ್ಯೆಗೆ ಕರೆ ನೀಡಿದ ಸಚಿವರ ವಿರುದ್ಧ ಈವರೆಗೆ ಯಾವುದೇ ಕ್ರಮ ಕೈಗೊಳ್ಳದಿರುವುದು ಅಚ್ಚರಿ ಮೂಡಿಸಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಗೃಹ ಸಚಿವ ಆರಗ ಜ್ಞಾನೇಂದ್ರ ಹಾಗೂ ಅವರ ಸರ್ಕಾರ ನಿದ್ದೆ ಮಾಡುತ್ತಿದೆ. ಅಶ್ವತ್ಥ್ ನಾರಾಯಣ ಮಾನಸಿಕ ಅಸ್ವಸ್ಥನಾಗಿದ್ದಾನೆ ಎಂದು ಏಕವಚನದಲ್ಲಿ ನಿನ್ನೆ ಸಿದ್ದರಾಮಯ್ಯ ಟ್ವೀಟ್ ಮಾಡಿದ್ದರು.

ವಜಾಕ್ಕೆ ಕಾಂಗ್ರೆಸ್ ಒತ್ತಾಯ

ಮಣಿಸಲು ಯತ್ನಿಸುತಿತ್ತು. ಈಗ ಸೋಲಿನ ಹತಾಶೆಯಲ್ಲಿ ಕೊಲೆ ಮಾಡುವ ಹಂತಕ್ಕೆ ಇಳಿದಿದೆ. ನಿಜಕ್ಕೂ ಕಾನೂನು ಪಾಲನೆಯಾಗುತ್ತಿದ್ದರೆ ಡಾ.ಸಿಎನ್ ಅಶ್ವತ್ಥ ನಾರಾಯಣ ಅವರನ್ನು ಬಂಧಿಸಬೇಕು ಎಂದು ಆಗ್ರಹಿಸಿದೆ. ಕೊಲೆ ಮಾಡುವುದು ಬಿಜೆಪಿಗೆ ಆರ್ ಎಸ್ ಎಸ್ ನಿಂದ ಬಂದಿರುವ ಗುಣ. ಅಂದು ಮಹಾತ್ಮ ಗಾಂಧಿಯನ್ನು ಕೊಂದ ಸಿದ್ಧಾಂತದವರೇ ಇಂದು ಸಿದ್ದರಾಮಯ್ಯರನ್ನೂ ಕೊಲ್ಲಲು ಕರೆ ಕೊಟ್ಟಿದ್ದಾರೆ. ಈ ಕೊಲೆ ಮಾಡುವ ಯೋಜನೆ, ಯೋಜನೆ ಬಂದಿರುವುದು ಕೇಶವ ಕೃಪದಿಂದಲೋ, ನಾಗಪುರದಿಂದಲೋ ಎಂದು ರಾಜ್ಯ ಬಿಜೆಪಿಯನ್ನು ಪ್ರಶ್ನಿಸಿರುವ ಕಾಂಗ್ರೆಸ್, ಇಲ್ಲಿನ ಬಿಜೆಪಿಗರಿಗೂ ತಾಲಿಬಾನಿನ ಉಗ್ರರಿಗೂ ವ್ಯತ್ಯಾಸವಿಲ್ಲ ಎಂದಿದೆ. ಮತ್ತೊಂದೆಡೆ ಡಾ. ಅಶ್ವತ್ಥ ನಾರಾಯಣ ಕೂಡಲೇ ತಮ್ಮ ಹೇಳಿಕೆ ಹಿಂಪಡೆದು, ಸಿದ್ದರಾಮಯ್ಯ ಅವರಲ್ಲಿ ಬಹಿರಂಗ ಕ್ಷಮೆ ಯಾಚಿಸಬೇಕು, ಇಲ್ಲದಿದ್ದರೆ ಬೀದಿಗಿಳಿದು ಹೋರಾಟ ನಡೆಸಬೇಕಾದೀತು ಎಂದು ಶಾಸಕ ಜಮೀರ್ ಅಹಮದ್ ಖಾನ್ ಟ್ವೀಟ್‌ನಲ್ಲಿ ಎಚ್ಚರಿಕೆ ನೀಡಿದ್ದಾರೆ.

ಅರ್ಥದಲ್ಲಷ್ಟೇ ನಾನು ಆ ಮಾತು ಆಡಿದ್ದೇನೆ

ವಿರೋಧಿ ಟಿಪ್ಪುವನ್ನು ಎಲ್ಲಿಗೆ ಕಳುಹಿಸಬೇಕು ಹೇಳಿ, ಟಿಪ್ಪುವನ್ನು ಉರಿಗೌಡ ಮತ್ತು ದೊಡ್ಡ ನಂಜೇಗೌಡ ಏನು ಮಾಡಿದರು ಎಂದು ಪ್ರಶ್ನೆ ಮಾಡಿದರು. ಆಗ ನೆರೆದಿದ್ದ ಜನ ಹೊಡೆದು ಹಾಕಿದರು ಎಂದು ಉತ್ತರಿಸಿದರು. ಸಭಿಕರ ಮಾತು ಅಶ್ವತ್ಥ್ ನಾರಾಯಣ ಅವರನ್ನು ಹುರಿದುಂಬಿಸಿತು. ಆವೇಶಭರಿತರಾಗಿ ಮಾತನಾಡುತ್ತಾ ಟಿಪ್ಪುವನ್ನು ಹೊಡೆದು ಹಾಕಿದ ರೀತಿಯಲ್ಲಿ ಇವರನ್ನೂ ಹೊಡೆದು ಹಾಕಬೇಕಲ್ಲವೇ, ಸಿದ್ದರಾಮಯ್ಯನವರನ್ನೂ ಹೊಡೆದು ಹಾಕಿ ಎಂದು ಬಿಟ್ಟರು. ನೆರೆದಿದ್ದವರು ಚಪ್ಪಾಳೆ, ಶಿಳ್ಳೆ ಹೊಡೆದರು.

ಈ ಹೇಳಿಕೆ ಹೊರಬಂದಿದ್ದೇ ತಡ ಸಿದ್ದರಾಮಯ್ಯನವರು ಆಕ್ರೋಶಭರಿತರಾದರು, ಹೊಡೆದು ಹಾಕಿ ಎಂದರೆ ನನ್ನನ್ನು ಸಾಯಿಸಿ ಎಂದು ನೀವು ಜನತೆಗೆ ಪ್ರಚೋದನೆ ಕೊಟ್ಟಂತಲ್ಲವೇ ಎಂದು ಸೋಷಿಯಲ್ ಮೀಡಿಯಾದಲ್ಲಿ ಖಾರವಾಗಿ ಪ್ರಶ್ನಿಸಿದರು. ಅಶ್ವಥ್ ನಾರಾಯಣ ಆಡಿದ ಮಾತುಗಳು ವಿವಾದ ಹುಟ್ಟಿಸಿದವು.

ಇದಕ್ಕೆ ಇಂದು ಬೆಂಗಳೂರಿನಲ್ಲಿ ಮಾಧ್ಯಮ ಪ್ರತಿನಿಧಿಗಳು ಪ್ರಶ್ನಿಸಿದಾಗ ಸಚಿವ ಡಾ ಅಶ್ವಥ್ ನಾರಾಯಣ, ಟಿಪ್ಪು ಸುಲ್ತಾನ್ ಮತ್ತು ವಿಧಾನಸಭೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರನ್ನು ಹೋಲಿಸಿ ಆಡಿರುವ ಮಾತುಗಳು ಸಾಂದರ್ಭಿಕ ಪ್ರಸ್ತಾಪವೇ ವಿನಃ ಯಾವುದೇ ದುರುದ್ದೇಶದ ಮಾತುಗಳಲ್ಲ, ರಾಜಕೀಯ ಭಾಷಣ ಮಾಡುವಾಗ ಬಂದು ಹೋದ ಮಾತುಗಳಷ್ಟೆ, ಅವರಲ್ಲಿ ನನಗೆ ವೈಯಕ್ತಿಕ ದ್ವೇಷವಿಲ್ಲ, ಅವರನ್ನು ಕೊಂದುಹಾಕಿ ಎಂಬರ್ಥದಲ್ಲಿ ನಾನು ಆಡಿದ ಮಾತುಗಳಲ್ಲ ಎಂದು ಸ್ಪಷ್ಟನೆ ನೀಡಿ ವಿವಾದವನ್ನು ತಣ್ಣಗಾಗಿಸುವ ಪ್ರಯತ್ನ ಮಾಡಿದ್ದಾರೆ. ಅಲ್ಲದೆ ಸಿದ್ದರಾಮಯ್ಯನವರಿಗೆ ನನ್ನ ಮಾತುಗಳಿಂದ ನೋವಾಗಿದ್ದರೆ ವೈಯಕ್ತಿಕವಾಗಿ ವಿಷಾದ ವ್ಯಕ್ತಪಡಿಸುತ್ತೇನೆ ಎಂದಿದ್ದಾರೆ. ಪ್ರಧಾನಿಯವರನ್ನು ನರ ಹಂತಕ ಎನ್ನುವುದು, ಮುಖ್ಯಮಂತ್ರಿ ಅವರಿಗೆ ಮನೆ ಹಾಳಾಗ ಎನ್ನುವುದು ಸಿದ್ದರಾಮಯ್ಯ ಅವರ ಸಂಸ್ಕೃತಿ ಆಗಿರಬಹುದು. ಆದರೆ, ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ಸನ್ನು ಸೋಲಿಸಬೇಕು ಎನ್ನುವ ಅರ್ಥದಲ್ಲಷ್ಟೇ ನಾನು ಆ ಮಾತು ಆಡಿದ್ದೇನೆ. ಅದರಿಂದ ಅವರಿಗೆ ನೋವುಂಟಾಗಿದ್ದಾರೆ ವಿಷಾದಿಸುತ್ತೇನೆ ಎಂದು ಸಚಿವ ಅಶ್ವಥ್ ನಾರಾಯಣ ಹೇಳಿದ್ದಾರೆ.

ಸಾಂದರ್ಭಿಕವಾಗಿ ಆಡು ಭಾಷೆಯಲ್ಲಿ ಸೋಲಿಸಿ ಎಂಬ ಅರ್ಥದಲ್ಲಿ ಹೇಳಿರುವ ಮಾತನ್ನು ತಮಗೆ ಬೇಕಾದ ಹಾಗೆ ಅರ್ಥೈಸಿಕೊಂಡು ಮಾತನಾಡುತ್ತಿರುವ ಸಿದ್ದರಾಮಯ್ಯ ಅವರ ಭಾಷಾ ಪ್ರಾವೀಣ್ಯತೆ, ಅವರು ಬಳಸುವ ಗ್ರಾಮೀಣ ಪದಗಳು ಏನೆಂಬುದನ್ನು ರಾಜ್ಯದ ಜನತೆಯೇ ನೋಡಿದೆ. ಅಷ್ಟಕ್ಕೂ, ಟಿಪ್ಪುವಿನಲ್ಲಿರುವ ಕಟುಕತನದ ಮನಸ್ಥಿತಿ ನಮ್ಮ ಮಂಡ್ಯದ ಜನತೆಗೆ ಇಲ್ಲ ಎಂದರು.

ಕಡೇ ಬಜೆಟ್ ಇಂದು ಮಂಡನೆ

ಅನುಷ್ಠಾನ ಘೋಷಣೆ ಸಾಧ್ಯತೆ ಇದೆ. ಈ ನಡುವೆ ಸಾಲ ಮನ್ನಾದಂತಹ ಬಜೆಟ್ ಘೋಷಣೆಗೆ ಕೈ ಹಾಕುವ ಸಾಧ್ಯತೆ ಕಡಿಮೆ ಎನ್ನಲಾಗಿದೆ. ಕೆಲ ಅಭಿವೃದ್ಧಿ ನಿಗಮಗಳಲ್ಲಿ ಪಡೆದಿರುವ ಸಾಲಮನ್ನಾಗೆ ಬೇಡಿಕೆ ಪ್ರಸ್ತಾಪ ಇದೆ. ಆದರೆ ಕೆಲ ಸಬ್ಸಿಡಿ ಇಳಿಕೆ ವಿಚಾರದಲ್ಲಿ ಕ್ರಮಗಳನ್ನು ತೆಗೆದುಕೊಂಡಿರುವ ಕೇಂದ್ರ ಸರ್ಕಾರದ ನಿಲುವು, ಸಾಲಮನ್ನಾ ಯೋಜನೆಗಿಂತ ಸುಧಾರಣಾ ಕ್ರಮಗಳತ್ತ ಪ್ರಧಾನಿ ನರೇಂದ್ರ ಮೋದಿ ಕೂಡ ಒಲವು ವ್ಯಕ್ತಪಡಿಸಿರುವ ಕಾರಣದಿಂದಾಗಿ ಸಾಲಮನ್ನಾ ವಿಚಾರದಲ್ಲಿ ಎಚ್ಚರಿಕೆಯ ಹೆಜ್ಜೆ ಇಡಲು ಬೊಮ್ಮಾಯಿ ಪ್ಲಾನ್ ಮಾಡಿದ್ದಾರೆ ಎನ್ನಲಾಗಿದೆ.

2018ರಲ್ಲಿ ಸಿದ್ದರಾಮಯ್ಯ ಮಂಡಿಸಿದ ಬಜೆಟ್ ಪೂರ್ಣ ಆಗಲಿಲ್ಲ. ಸಿದ್ದರಾಮಯ್ಯ ಅಧಿಕಾರ ಹೋಗಿ ಇನ್ನೊಂದು ಬಜೆಟ್ ಬಂತು. ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದ 5 ತಿಂಗಳಲ್ಲೇ ಇನ್ನೊಂದು ಬಜೆಟ್ ಆಗಿದ್ದು, ಆ ಸಮ್ಮಿಶ್ರ ಸರ್ಕಾರದಲ್ಲಿ ಸಿಎಂ ಆಗಿದ್ದ ಹೆಚ್.ಡಿ ಕುಮಾರಸ್ವಾಮಿ ಬಜೆಟ್ ಮಂಡನೆ ಮಾಡಿದ್ದರು. ಹೀಗಾಗಿ ಬೊಮ್ಮಾಯಿ ಬಜೆಟ್ 4-5 ತಿಂಗಳ ಎಲೆಕ್ಷನ್ ಬಜೆಟ್ ಆಗಿದ್ದು, ಮುಂದೆಯೂ ಬಿಜೆಪಿ ಸರ್ಕಾರ ಬಂದರೆ ಮಾತ್ರ ಅವರ ಬಜೆಟ್ ಭದ್ರವಾಗಿರುತ್ತದೆ. ಒಟ್ಟಿನಲ್ಲಿ ಎಲೆಕ್ಷನ್ ಬಜೆಟ್ ಆದರೂ ಜನಪ್ರಿಯ ಯೋಜನೆಗಳ ಘೋಷಣೆಗಳ ಬಗ್ಗೆ ಸಾಕಷ್ಟು ನಿರೀಕ್ಷೆಗಳಿವೆ. ಬೊಮ್ಮಾಯಿ ಕಡೆಯ ಆಟ ಹೇಗೆ ಜನರನ್ನು ಮುಟ್ಟುತ್ತದೆ ಎಂಬುದನ್ನು ಕಾದು ನೋಡಬೇಕಿದೆ.

ಹೈದರಾಬಾದ್‌ನ ಇಸಿಐಎಲ್‌ನ 55 ಇಂಜಿನಿಯರ್‌ಗಳಿಂದ

ಮೈಸೂರಲ್ಲಿ ಇಂದಿನಿಂದ ವಿವಿ ಪ್ಯಾಟ್‌ಗಳ ಮೊದಲ ಹಂತದ ಪರಿಶೀಲನೆ

ಮೈಸೂರು, ಫೆ. 16(ಆರ್‌ಕೆ)- ಮೈಸೂರಿಗೆ ತರಲಾಗಿರುವ 4,274 ವಿವಿ ಪ್ಯಾಟ್ ಉಪಕರಣಗಳ ಮೊದಲ ಹಂತದ ಪರಿಶೀಲನಾ ಕಾರ್ಯ ನಾಳೆ (ಫೆ. 17)ಯಿಂದ ಆರಂಭವಾಗಲಿದೆ.

ಹೈದರಾಬಾದ್‌ನ ಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್ ಆಫ್ ಇಂಡಿಯನ್ ಲಿಮಿಟೆಡ್ (ಇಸಿಐಎಲ್) ಕಂಪನಿಯಿಂದ ಬುಧವಾರ ರಾತ್ರಿ ವಿವಿ ಪ್ಯಾಟ್‌ಗಳನ್ನು ಮೈಸೂರಿಗೆ 7 ಟ್ರಕ್‌ಗಳಲ್ಲಿ ತಂದು ಸಿದ್ಧಾರ್ಥನಗರದ ಜಿಲ್ಲಾ ಕಚೇರಿಗಳ ಸಂಕೀರ್ಣದ ಆವರಣದಲ್ಲಿ ನಿರ್ಮಿಸಿರುವ ಇವಿಎಂ ಉಗ್ರಾಣದಲ್ಲಿರಿಸಲಾಗಿದೆ. ಈಗಾಗಲೇ ಚುನಾವಣಾ ನೋಡಲ್ ಅಧಿಕಾರಿಯಾಗಿರುವ ಮುಡಾ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್ ನೇತೃತ್ವದಲ್ಲಿ 100 ಮಂದಿ ಕಂದಾಯ ಇಲಾಖೆ ಸಿಬ್ಬಂದಿ ಮೈಸೂರು ಜಿಲ್ಲೆಗೆ ಇನ್‌ವರ್ಡ್ ತೋರಿಸಿ ಸಾಫ್ಟ್‌ವೇರ್‌ನಲ್ಲಿ ಅಳವಡಿಸಿದ್ದಾರೆ.



ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ವಿವಿ ಪ್ಯಾಟ್‌ಗಳನ್ನು ಪರಿಶೀಲಿಸಿದರು. ಈ ಸಂದರ್ಭದಲ್ಲಿ ಮುಡಾ ಆಯುಕ್ತ ದಿನೇಶ್, ಅಪರ ಜಿಲ್ಲಾಧಿಕಾರಿ ಕವಿತಾ ರಾಜರಾಂ, ಚುನಾವಣಾ ತಹಶಿಲ್ದಾರ್ ರಾಮ್ ಪ್ರಸಾದ್ ಮತ್ತಿತರರಿದ್ದರು.

ಇದೀಗ ವಿವಿ ಪ್ಯಾಟ್‌ಗಳ ಮೊದಲ ಹಂತದ ಪರಿಶೀಲನೆ ಕಾರ್ಯವು ನಾಳೆ (ಫೆ. 17)ಯಿಂದ ಆರಂಭವಾಗಲಿದ್ದು, ಅದಕ್ಕಾಗಿ ಇಸಿಐಎಲ್‌ನ 55 ಇಂಜಿನಿಯರ್‌ಗಳು ಇಂದು ಸಂಜೆ ಮೈಸೂರು ತಲುಪಿದ್ದಾರೆ. ಶುಕ್ರವಾರ ಇವಿಎಂ ಉಗ್ರಾಣದಲ್ಲಿರುವ ವಿವಿ ಪ್ಯಾಟ್‌ಗಳನ್ನು ಪರಿಶೀಲಿಸುವರು. ಸ್ಕ್ಯಾನಿಂಗ್ ಮಾಡುವಾಗ ಕಂಡು ಬಂದಿರುವ ಲೋಪ-ದೋಷ ಉಳ್ಳ ಯಂತ್ರಗಳನ್ನು ಬೇರ್ಪಡಿಸಿ ಪ್ರತ್ಯೇಕವಾಗಿರಿಸಲಾಗಿದ್ದು, ಮೊದಲ ಹಂತದ ಪರಿಶೀಲನೆ ವೇಳೆ ದೋಷ ಕಂಡುಬಂದ ವಿವಿ ಪ್ಯಾಟ್‌ಗಳನ್ನು ತೆಗೆದಿರಿಸಿ ಭಾರತ ಚುನಾವಣಾ ಆಯೋಗದ ಗಮನಕ್ಕೆ ತಂದು ಹಿಂದಿರುಗಿಸಲಾಗುವುದು ಎಂದು ಚುನಾವಣಾ ನೋಡಲ್ ಅಧಿಕಾರಿ ಜಿ.ಟಿ. ದಿನೇಶ್‌ಕುಮಾರ್ ತಿಳಿಸಿದ್ದಾರೆ.

2023ರ ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆಗೆ ಬಳಸಲು ಮೈಸೂರು ಜಿಲ್ಲೆಗೆ ಹೊಚ್ಚ ಹೊಸ ಇವಿಎಂ, ಕಂಟ್ರೋಲ್ ಯೂನಿಟ್ ಮತ್ತು ವಿವಿ ಪ್ಯಾಟ್ ಯಂತ್ರಗಳನ್ನು ಭಾರತ ಚುನಾವಣಾ ಆಯೋಗವು ಪೂರೈಸಿದ್ದು, ಅವುಗಳನ್ನು ಈ ಹಿಂದೆಯೇ ಹೈದರಾಬಾದ್‌ನ ಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ ಕಂಪನಿಯಿಂದ ಮೈಸೂರಿಗೆ ತರಲಾಗಿತ್ತು.

ಶುಕ್ರವಾರದಿಂದ ಆರಂಭವಾಗುವ ಫಸ್ಟ್ ಲೆವೆಲ್ ಚೆಕ್ಕಿಂಗ್ ಕಾರ್ಯಕ್ಕೆ ಕಂಪನಿಯಿಂದ ನಿಯೋಜಿಸಿರುವ ಒಟ್ಟು 55 ಮಂದಿ ಇಂಜಿನಿಯರ್‌ಗಳು ಇಂದೇ ಸಂಜೆ ಮೈಸೂರು ತಲುಪಿದ್ದು, ಜಿಲ್ಲಾಡಳಿತವು ಅವರಿಗೆ ಅಗತ್ಯ ಸೌಲಭ್ಯ ಕಲ್ಪಿಸಿರುವ ಜೊತೆಗೆ ವ್ಯಾಪಕ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಿ ಸೂಕ್ತ ಭದ್ರತೆ ಒದಗಿಸಿದೆ. ಅದೇ ರೀತಿ 3 ಹಂತದಲ್ಲಿ ಪರಿಶೀಲಿಸಿದ ನಂತರ ದೋಷಪೂರಿತ ಯಂತ್ರಗಳನ್ನು ವಾಪಸ್ ಕಳುಹಿಸಿ, ಗುಣಮಟ್ಟದ ವಿವಿ ಪ್ಯಾಟ್‌ಗಳನ್ನು ತರಲಾಗುವುದು ಎಂದು ಚುನಾವಣಾ ನೋಡಲ್ ಅಧಿಕಾರಿ ಜಿ.ಟಿ. ದಿನೇಶ್‌ಕುಮಾರ್ ತಿಳಿಸಿದ್ದಾರೆ.

3 ಹಂತಗಳಲ್ಲಿ ಚೆಕ್ ಮಾಡಿದ ಬಳಿಕ ಚುನಾವಣೆ ಸಮೀಪಿಸುತ್ತಿದ್ದಂತೆಯೇ ಎಲ್ಲಾ ಅಭ್ಯರ್ಥಿಗಳು ಹಾಗೂ ಅವರ ಏಜೆಂಟರುಗಳ ಸಮ್ಮುಖದಲ್ಲಿ ಇವಿಎಂ ಕಂಟ್ರೋಲ್ ಯೂನಿಟ್ ಹಾಗೂ ವಿವಿ ಪ್ಯಾಟ್‌ಗಳನ್ನು ಬಳಸಿ ಅಣಕು ಮತದಾನ ಮಾಡಿ ತೋರಿಸುವ ಮೂಲಕ ಅವು ಸಮರ್ಪಕವಾಗಿ ಕೆಲಸ ಮಾಡುತ್ತಿವೆ ಎಂಬುದರ ಬಗ್ಗೆ ದೃಢಪಡಿಸಲಾಗುವುದು ಎಂದು ಅವರು ತಿಳಿಸಿದರು.

ಬಜೆಟ್‌ನಲ್ಲಿ ರಾಜ್ಯ ಕುಂಬಾರರ ಅಭಿವೃದ್ಧಿ ನಿಗಮ ಸ್ಥಾಪಿಸಿ ; 200 ಕೋಟಿ ಅನುದಾನ ಕಲ್ಪಿಸಿ

● ಶ್ರೀ ಕುಲಾಲಗುಂಡ ಬ್ರಹ್ಮಾರ್ಯ ಕುಂಬಾರರ ಸಂಘ ಒತ್ತಾಯ ● ಫೆ.20ರಂದು ಶ್ರೀ ಸಂತ ಕವಿ ಸರ್ವಜ್ಞ ಜಯಂತಿ



ಮೈಸೂರು,ಫೆ.16(ಪಿಎಂ)- ಡಿ.ದೇವ ರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅಧೀನದಲ್ಲಿರುವ ಕುಂಭಕಲಾ ಅಭಿವೃದ್ಧಿ ಮಂಡಳಿಯನ್ನು ಪ್ರತ್ಯೇಕಿಸಿ ರಾಜ್ಯ ಕುಂಬಾರರ ಅಭಿವೃದ್ಧಿ ನಿಗಮವಾಗಿ ಪರಿವರ್ತಿಸಿ, 200 ಕೋಟಿ ಅನುದಾನ ಕಲ್ಪಿಸಲು ಪ್ರಸಕ್ತ ಸಾಲಿನ ರಾಜ್ಯ ಬಜೆಟ್‌ನಲ್ಲಿ ಕ್ರಮ ವಹಿಸಬೇಕೆಂದು ಶ್ರೀ ಕುಲಾಲಗುಂಡ ಬ್ರಹ್ಮಾರ್ಯ ಕುಂಬಾರರ ಸಂಘ ಒತ್ತಾಯಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸಂಘದ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಮುದಾಯದ ಮುಖಂಡ ಡಾ.ಎಂ.ಪಿ.ವರ್ಷ, ಉದ್ದೇಶಿತ ನಿಗಮಕ್ಕೆ ಕುಂಬಾರ ಜನಾಂಗದವರನ್ನೇ ಅಧ್ಯಕ್ಷರು, ನಿರ್ದೇಶಕರಾಗಿ ನೇಮಕ ಮಾಡಬೇಕು. ಇದು ಸಮುದಾಯದ ಒಕ್ಕೊರಲಿನ ಬೇಡಿಕೆಯಾಗಿದ್ದು, ಯಾವುದೇ ಕಾರಣಕ್ಕೂ ನಿರ್ಲಕ್ಷ್ಯ ಮಾಡಬಾರದು ಎಂದು ಆಗ್ರಹಿಸಿದರು.

ಬೇಡಿಕೆ ಈಡೇರಿಸದಿದ್ದಲ್ಲಿ ಬಜೆಟ್ ಮಂಡನೆಯ ದಿನದಿಂದಲೇ ಈಗಾಗಲೇ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಸುತ್ತಿರುವ ಅನಿರ್ಷ್ಟಾವಧಿ ಹೋರಾಟವನ್ನು ಅಮರಣಾಂತ ಉಪವಾಸ ಸತ್ಯಾಗ್ರಹವಾಗಿ ಮಾರ್ಪಡಿಸಿ ಹೋರಾಟ ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಸಂಘದ ಜಿಲ್ಲಾಧ್ಯಕ್ಷ ಹೆಚ್.ಎಸ್. ಪ್ರಕಾಶ್ ಮಾತನಾಡಿ, ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶ್ರೀ ಕುಲಾಲ ಗುಂಡ ಬ್ರಹ್ಮಾರ್ಯ ಕುಂಬಾರ ಸಂಘ ಹಾಗೂ ಸಮುದಾಯದ ಸಂಘ-ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಫೆ.20ರಂದು ಮೈಸೂರಿನ ಕಲಾಮಂದಿರದಲ್ಲಿ ಶ್ರೀ ಸಂತ ಕವಿ ಸರ್ವಜ್ಞ ಜಯಂತಿ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಅಂದು ಬೆಳಗ್ಗೆ 10ಕ್ಕೆ ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರಿನಿಂದ ಕಲಾಮಂದಿರದವರೆಗೆ ಸರ್ವಜ್ಞರ ಮೂರ್ತಿಯ ಅದ್ದೂರಿ ಮೆರವಣಿಗೆ ಆಯೋಜಿಸಲಾಗಿದೆ. ಬಳಿಕ ಮಧ್ಯಾಹ್ನ 12ಕ್ಕೆ ಕಲಾಮಂದಿರದಲ್ಲಿ ಸರ್ವಜ್ಞ ಜಯಂತಿಯ ಸಭಾ ಕಾರ್ಯಕ್ರಮ ನಡೆಯಲಿದೆ. ಶ್ರೀ ಬಸವ ಕುಂಬಾರ ಗುಂಡಯ್ಯ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಉದ್ಘಾಟನೆ ನೆರವೇರಿಸಲಿದ್ದಾರೆ. ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸಲಿದ್ದು, ಮೇಯರ್ ಶಿವಕುಮಾರ್ ಸೇರಿದಂತೆ ಶಾಸಕರು, ಸಂಸದರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಇದಕ್ಕೂ ಮುನ್ನ ಬೆಳಗ್ಗೆ 9ಕ್ಕೆ ಮೈಸೂರು ಮಹಾನಗರ ಪಾಲಿಕೆ ಹಿಂಭಾಗ, ಡಿಬನುಮಯ್ಯ ರಸ್ತೆಯಲ್ಲಿ ಸಂಘದ ವಿದ್ಯಾರ್ಥಿನಿಲಯದ ಕಟ್ಟಡದ ಉದ್ಘಾಟನೆಯನ್ನು ಕೆಪಿಎಸ್‌ಸಿ ಮಾಜಿ ಅಧ್ಯಕ್ಷ ಡಾ.ಬಿ.ಎಸ್.ಕೃಷ್ಣಪ್ರಸಾದ್ ನೆರವೇರಿಸಲಿದ್ದಾರೆ ಎಂದರು. ಸಂಘದ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಹೆಚ್.ಸುಂದರ್, ಆಡಳಿತ ಮಂಡಳಿ ಸದಸ್ಯರಾದ ಎಂ.ಮಾರಶೆಟ್ಟಿ, ಕೆ.ಪಿ.ವೆಂಕಟೇಶ್, ಬಾಲಕೃಷ್ಣ ಗೋಷ್ಠಿಯಲ್ಲಿದ್ದರು.

ಸಚಿವ ಅಶ್ವಥ್ ನಾರಾಯಣ ಹೇಳಿಕೆ ಕರ್ನಾಟಕಕ್ಕೆ ಮಾರಕ

ಪ್ರದೇಶ ಕುರುಬರ ಸಂಘ ಕಿಡಿ



ಮೈಸೂರು, ಫೆ.16- ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು 'ಟಿಪ್ಪು ರೀತಿಯೇ ಹೊಡೆದು ಹಾಕಬೇಕು' ಎಂದಿರುವ ಗೋಡ್ಸೆ ಸಂತತಿಯ ಸಚಿವ ಅಶ್ವತ್ಥ ನಾರಾಯಣ್ ಅವರ ಹೇಳಿಕೆ ಕರ್ನಾಟಕಕ್ಕೆ ಮಾರಕವಾಗಿದೆ ಎಂದು ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಕಿಡಿಕಾರಿದ್ದಾರೆ.

ಆರ್‌ಎಸ್‌ಎಸ್ ಹೇಳಿಕೊಟ್ಟಿರುವುದನ್ನು ಚಾಚೂ ತಪ್ಪದೇ ಪಾಲಿಸುತ್ತಿರುವ ಅಶ್ವಥ್ ನಾರಾಯಣ ಅವರ ಮಾನಸಿಕ ಅಸ್ವಸ್ಥತೆ ಈ ರಾಜ್ಯದ ಜನಕ್ಕೆ ಈಗ ಗೊತ್ತಾಗಿದೆ. ಇಂತಹ ಹೇಳಿಕೆಗಳು ಮುಂದಿನ ದಿನಗಳಲ್ಲೂ ಹೆಚ್ಚಾಗಲಿದ್ದು, ಇದಕ್ಕೆ ಆರ್‌ಎಸ್‌ಎಸ್ ಕುಮ್ಮಕ್ಕೂ ಇದೆ. ಕರ್ನಾಟಕ ಅಭಿವೃದ್ಧಿಯಲ್ಲಿ ಶೂನ್ಯ ಸಾಧನೆ ಮಾಡಿರುವ ಬಿಜೆಪಿ ನಾಯಕರಿಗೆ ಹೇಳಿಕೊಳ್ಳಲು ಯಾವುದೇ ಅಭಿವೃದ್ಧಿ ಕೆಲಸಗಳಿಲ್ಲ. ಹಾಗಾಗಿ ಇಂತಹ ಪ್ರಚೋದನಾಕಾರಿ ಹೇಳಿಕೆಗಳನ್ನು ನೀಡಿ, ಸಮಾಜದಲ್ಲಿ ಶಾಂತಿ-ಸುವ್ಯವಸ್ಥೆ ಹಾಳು ಮಾಡುತ್ತಿದ್ದಾರೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಶ್ವಥ್ ನಾರಾಯಣ ಅವರ ಹೇಳಿಕೆ ಖಂಡಿಸಿ ಮಂಡ್ಯ ಹಾಗೂ ರಾಜ್ಯಾದ್ಯಂತ ವಿವಿಧೆಡೆ ಪ್ರತಿಭಟನೆ ನಡೆಯಲಿದೆ. ಮಂಡ್ಯದಲ್ಲಿ ಫೆ.17ರಂದು ಬೆಳಿಗ್ಗೆ 10ಕ್ಕೆ ಜಿಲ್ಲಾಧಿಕಾರಿ ಕಚೇರಿ ಎದುರು, ಸೋಮವಾರ ಬೆಳಗ್ಗೆ 10 ಗಂಟೆಗೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗುತ್ತದೆ. ಮಂಡ್ಯ ಜಿಲ್ಲಾಧಿಕಾರಿಗಳು, ಮಂಡ್ಯದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಸ್ವಯಂಪ್ರೇರಿತವಾಗಿ, ಸಿಆರ್‌ಪಿಸಿ ಆಕ್ಟ್ ಅಡಿಯಲ್ಲಿ ಕೇಸ್ ದಾಖಲಿಸಿ ಅವರನ್ನು ಬಂಧಿಸಬೇಕು. ಮುಖ್ಯವಾಗಿ ಸಿದ್ದರಾಮಯ್ಯ ಅವರಿಗೆ ಸರ್ಕಾರ ಜೆಡ್‌ಪ್ಲಸ್ ಭದ್ರತೆ ನೀಡಬೇಕು ಎಂದು ಒತ್ತಾಯಿಸಿದ್ದಾರೆ. ಇಲ್ಲದಿದ್ದರೇ ರಾಜ್ಯಾದ್ಯಂತ ಸಿದ್ದರಾಮಯ್ಯ ಅಭಿಮಾನಿಗಳು ಜಾತ್ಯಾತೀತವಾಗಿ ಉಗ್ರ ಪ್ರತಿಭಟನೆ ನಡೆಸಲಿದ್ದಾರೆ.

ಸಚಿವ ಡಾ. ಅಶ್ವತ್ಥನಾರಾಯಣ್ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ



ಮೈಸೂರು, ಫೆ. 16(ಆರ್‌ಕೆ)- ಟಿಪ್ಪು ಸುಲ್ತಾನ್ ಅಂತ್ಯ ಹೋಲಿಸಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯರ ವಿರುದ್ಧ ಪ್ರಚೋದನಾಕಾರಿ ಹೇಳಿಕೆ ನೀಡಿರುವ ಉನ್ನತ ಶಿಕ್ಷಣ ಸಚಿವ ಡಾ. ಅಶ್ವತ್ಥನಾರಾಯಣರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಬೇಕೆಂದು ಆಗ್ರಹಿಸಿ ಕಾಂಗ್ರೆಸ್ ಕಾರ್ಯಕರ್ತರು ಇಂದು ಮೈಸೂರಲ್ಲಿ ಪಕ್ಷದ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯಲ್ಲಿ ಡಾ. ಅಶ್ವತ್ಥನಾರಾಯಣ ಬಳಸಿರುವ ಪದಗಳು ಕಾನೂನು ನಿಷೇಧಿತ ಹಾಗೂ ಅಸಂವಿಧಾನಿಕವಾದುದಾಗಿರುವುದರಿಂದ ಅವರ ವಿರುದ್ಧ ಭಾರತೀಯ ದಂಡ ಸಂಹಿತೆ 108 ಮತ್ತು 505 ಅಡಿ ತಕ್ಷಣವೇ ಕ್ರಿಮಿನಲ್ ಪ್ರಕರಣ ದಾಖಲಿಸಬೇಕೆಂದು ಒತ್ತಾಯಿಸಿದರು.

ಈ ಬಗೆಯ ಕ್ರಿಮಿನಲ್ ಹಿನ್ನೆಲೆಯುಳ್ಳ ವ್ಯಕ್ತಿಗೆ ಮತ ನೀಡಿ ಆಯ್ಕೆ ಮಾಡಿದರೆ ಬೇಜವಾಬ್ದಾರಿ ಹೇಳಿಕೆ ನೀಡಿ ಸಮಾಜದಲ್ಲಿ ಅಶಾಂತಿ ಉಂಟುಮಾಡಿ ಕಾನೂನು-ಸುವ್ಯವಸ್ಥೆ ಹಾಳು ಮಾಡುತ್ತಾರೆ ಎಂದ ಪ್ರತಿಭಟನಾಕಾರರು, ಸಚಿವ ಅಶ್ವತ್ಥನಾರಾಯಣ ವಿರುದ್ಧ ಘೋಷಣೆಗಳನ್ನು ಕೂಗಿದರಲ್ಲದೆ, ತಕ್ಷಣವೇ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿದರು.

ಮುಖಂಡರಾದ ಮೊಹಮದ್ ನಲ್ಪಾಡ್, ಅಬ್ರಾರ್, ರವಿಕುಮಾರ್, ಎಂ. ರಾಜೇಶ್, ದೀಪಕ್ ಶಿವಣ್ಣ ಎನ್.ಎಂ. ನವೀನ್‌ಕುಮಾರ್, ಪೈಲ್ವಾನ್ ಸುನಿಲ್, ರಾಕೇಶ್‌ಗೌಡ, ಮಲ್ಲೇಶ್, ಭರತ್, ಆನಂದ, ಉಮೇಶ್ ಹಾಗೂ ಇತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಖಂಡನೆ: ಸಚಿವ ಡಾ.ಅಶ್ವತ್ಥನಾರಾಯಣ ವಿವಾದಾತ್ಮಕ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿರುವ ಕರ್ನಾಟಕ ಪ್ರಜಾ ಪಾರ್ಟಿ (ರೈತ ಪರ್ವ) ಸಂಸ್ಥಾಪಕ ರಾಜ್ಯಾಧ್ಯಕ್ಷ ಡಾ. ಬಿ. ಶಿವಣ್ಣ, ಸಚಿವರನ್ನು ಸಂಪುಟದಿಂದ ವಜಾಗೊಳಿಸಬೇಕೆಂದು ಮುಖ್ಯಮಂತ್ರಿಗಳನ್ನು ಒತ್ತಾಯಿಸಿದ್ದಾರೆ.

ಅರಣ್ಯಕಾಂಡ ನಾಟಕ

ಮೈಸೂರು, ಫೆ.16(ಎಂಟಿವೈ)- ಮೈಸೂರಿನ ಜೆ.ಪಿ.ನಗರದ ನವೋದಯ ತಂಡದ ವತಿಯಿಂದ ಫೆ.18 ಮತ್ತು 19ರಂದು ಕಲಾಮಂದಿರದ ಕಿರು ರಂಗಮಂದಿರದಲ್ಲಿ ವಾಲ್ಮೀಕಿ ರಾಮಾಯಣ ಆಧಾರಿತ ಅರಣ್ಯಕಾಂಡ ಸಂಗೀತ ಪ್ರಧಾನ ನಾಟಕ ಪ್ರದರ್ಶನ ನಡೆಯಲಿದೆ ಎಂದು ನಿರ್ದೇಶಕ ಡಾ. ಶ್ರೀಪಾದ್‌ಭಟ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನವೋದಯ ತಂಡ ರಾಷ್ಟ್ರ ಮಟ್ಟದ ರೆಪರ್ಟರಿಯಾಗಿದ್ದು, ಕಳೆದ ಒಂದು ವರ್ಷದಿಂದ ವೃತ್ತಿಪರ ನಟರೊಂದಿಗೆ ನಗರದಲ್ಲಿ ಕಾರ್ಯನಿರತವಾಗಿದೆ. ಈ ಅರಣ್ಯಕಾಂಡ ನಾಟಕವು ಸೀತಾರಾಮರು ತಮ್ಮ ವನವಾಸವನ್ನು ಹದಿಮೂರು ವರ್ಷ ಪ್ರೇಮಿಗಳಂತೆ ಕಳೆದ ರೀತಿಯನ್ನು ಆಧರಿಸಿದೆ. ಮೈಸೂರಿನ ರಂಗಭೂಮಿ ಆಸಕ್ತರಿಗೆ ಈ ನಾಟಕ ಮುದ ನೀಡಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ನವೋದಯ ತಂಡದ ಯದುಶ್ರೇಷ್ಠ, ಅಕ್ಷತಾ, ಮುನ್ನ, ಶೇಖ್ ಇದ್ದರು.

ಕಾಡುಪ್ರಾಣಿಗಳಿಂದ ಮೃತಪಟ್ಟ ಕುಟುಂಬಕ್ಕೆ ಪೂರ್ಣ ಪರಿಹಾರ ನೀಡಿ



ಬೆಂಗಳೂರು, ಫೆ 16, ಮೈಸೂರು ಚಾಮರಾಜನಗರ ಜಿಲ್ಲೆಗಳಲ್ಲಿ ಕಾಡುಪ್ರಾಣಿಗಳ ದಾಳಿಗೆ ಬಲಿಯಾದ ಕುಟುಂಬದವರಿಗೆ ಅರ್ಧ ಪರಿಹಾರ ನೀಡಿ ಉಳಿದ ಹಣವನ್ನು ಇದುವರೆಗೂ ಬಿಡುಗಡೆ ಮಾಡಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಆರೋಪಿಸಿದರು. ವಿಧಾನಪರಿಷತ್‌ನಲ್ಲಿ ರಾಜ್ಯಪಾಲರ ಭಾಷಣ ಕುರಿತು ಮಾತನಾಡಿದ ಅವರು ರಾಜ್ಯಪಾಲರು ಬೆಂಗಳೂರು ನಗರ ಅಭಿವೃದ್ಧಿಗೆ 8 ಸಾವಿರ ಕೋಟಿ ಮೀಸಲಿಟ್ಟಿರುವುದಾಗಿ ತಿಳಿಸಿದ್ದಾರೆ. ಆದರೆ ರಾಜ್ಯದ 2ನೇ ರಾಜಧಾನಿ, ಜಗತ್‌ಪ್ರಸಿದ್ಧ ದಸರಾ ನಡೆಯುವ ಮೈಸೂರಿನ ಅಭಿವೃದ್ಧಿಗೆ ಯಾವುದೇ ಹಣ ಒದಗಿಸಿರುವುದಾಗಿ ತಿಳಿಸಿಲ್ಲ. ದೇಶ ಕಾಯುವ ಯೋಧ ಯೌವ್ವನದ ಕಾಲದಲ್ಲಿ ಸಂಸಾರವನ್ನು ಬಿಟ್ಟು ದೇಶದ ಗಡಿ ಕಾಯುತ್ತಾನೆ. ನಿವೃತ್ತಿಯ ನಂತರ ಸರ್ಕಾರಿ ಕೆಲಸ ಸಿಕ್ಕಾಗ ಅವರವರ ಜಿಲ್ಲೆಗೆ ನಿಯುಕ್ತಿಗೊಳಿಸಬೇಕು ಮತ್ತು ಸೈನಿಕರ ಕುಟುಂಬಕ್ಕೆ ಸರ್ಕಾರದಿಂದ ನೀಡುವ ನಿವೇಶನಗಳಿಗೆ ಶೇ. 50% ರಿಯಾಯಿತಿ ದರದಲ್ಲಿ ನೀಡಬೇಕು. ಕಾಡುಪ್ರಾಣಿಗಳಿಂದ ಹಾನಿಯಾದ ಬೆಳೆಗಳಿಗೆ ಸಕಾಲಕ್ಕೆ ಸರಿಯಾದ ಪರಿಹಾರ ನೀಡಬೇಕು.

ರಕ್ಷಣೆಗೆ ಸದಾ ನಮಗೆ ಬೆಂಗಾವಲಾಗಿರುವ ಪೊಲೀಸರಿಗೆ ಮೈಸೂರಿನ ಹೂಟಗಳ್ಳಿಯಲ್ಲಿರುವ ಮನೆಗಳನ್ನು ದುರಸ್ತಿ ಮಾಡಿಸಿ ಕೊಡಬೇಕು. ರೈತರ ಬಗ್ಗೆ ಬಹಳ ಕಾಳಜಿ ವಹಿಸಿದ್ದೇವೆ ಎಂದು ಮಾತನಾಡುತ್ತೀರಿ, ಆದರೆ ಗ್ರಾಮೀಣ ಭಾಗದ ಕೆರೆ ಕಟ್ಟೆಗಳಿಗೆ ನೀರು ತುಂಬಿಸಲು ಕಾರ್ಯಕ್ರಮವೇ ಇಲ್ಲ. ರಾಜ್ಯದಲ್ಲಿ 19 ಹೊಸ ಇಎಸ್‌ಐ ಆಸ್ಪತ್ರೆಗಳನ್ನು ತೆರೆದು ಕಾರ್ಮಿಕರಿಗೆ ಅವರ ಕುಟುಂಬಕ್ಕೆ ಅನುಕೂಲವಾಗುತ್ತದೆ ಎಂದು ತಿಳಿಸಿದ್ದೀರಿ, ಆದರೆ ಇಎಸ್‌ಐ ಆಸ್ಪತ್ರೆಗಳನ್ನು ತೆರೆದು ಕಾರ್ಮಿಕ ವಿಮಾ ಸೊಸೈಟಿ ಮಾಡುವುದಾಗಿ ಸುತ್ತೋಲೆ ಹೊರಡಿಸಿದ್ದೀರಿ. ಅಲ್ಲಿ ಕೆಲಸ ಮಾಡುವ ವೈದ್ಯರು ಮತ್ತೆ ಸಿಬ್ಬಂದಿಗೆ ಯಾವುದೇ ಭದ್ರತೆ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ತಿಳಿಸಿಲ್ಲ. ಮೈಸೂರಿನಲ್ಲಿ 35 ಕೋಟಿ ರೂ. ಖರ್ಚು ಮಾಡಿ ಆಸ್ಪತ್ರೆ ಕಟ್ಟಿಸಿದ್ದಾರೆ ನುರಿತ ತಜ್ಞವೈದ್ಯರಿದ್ದಾರೆ ಆದರೆ ಹೊಸ ಯಂತ್ರಗಳಿಲ್ಲದೆ ಖಾಸಗಿ ಆಸ್ಪತ್ರೆಗೆ ಹೋಗುತ್ತಿದ್ದಾರೆ. ಹೀಗೆ ಸರ್ಕಾರದ ಹಣ ದುರುಪಯೋಗವಾಗುತ್ತಿದೆ ಎಂದರು.

ತಿಂಗಳಾಂತ್ಯಕ್ಕೆ ರಾಜ್ಯದ ನಾಲ್ಕೂ ಕಂದಾಯ ವಿಭಾಗಗಳಲ್ಲಿ ಡಯಾಲಿಸಿಸ್ ಕೇಂದ್ರ ಆರಂಭ

ಬೆಂಗಳೂರು, ಫೆ. 16 (ಕೆಎಂಶಿ)-ರಾಜ್ಯಾದ್ಯಂತ ನಾಲ್ಕು ಕಂದಾಯ ವಿಭಾಗಗಳಲ್ಲೂ ಡಯಾಲಿಸಿಸ್ ಕೇಂದ್ರಗಳನ್ನು ತಿಂಗಳಾಂತ್ಯಕ್ಕೆ ಆರಂಭಿಸಲಾಗುವುದೆಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ವಿಧಾನಸಭೆಗೆ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಡಿ.ಎಸ್.ಸುರೇಶ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಈ ತಿಂಗಳ 23ರಂದು ಟೆಂಡರ್‌ಗೆ ಕಡೇ ದಿನವಾಗಿದೆ. ತಿಂಗಳ ಅಂತ್ಯಕ್ಕೆ ಟೆಂಡರ್ ಪ್ರಕ್ರಿಯೆ ಮುಗಿಯಲಿದ್ದು, ನಾಲ್ಕು ವಿಭಾಗಗಳಲ್ಲಿ ಡಯಾಲಿಸಿಸ್ ಯಂತ್ರಗಳು ಕಾರ್ಯಾರಂಭ ಮಾಡಲಿವೆ ಎಂದರು. ಯಾವುದೇ ಸಮಸ್ಯೆ ಉಂಟಾದಾಗ ಡಯಾಲಿಸಿಸ್ ಯಂತ್ರಗಳನ್ನು ಸಮಯಕ್ಕೆ ಸರಿಯಾಗಿ ಸರಿಪಡಿಸಲು ಇಲ್ಲವೆ, ತಾಂತ್ರಿಕವಾಗಿ ಸಮಸ್ಯೆಗಳಿದ್ದರೆ, ಬದಲಾಯಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಎಸ್ಕಾನ್ ಇ ಸಂಜೀವಿನಿ ಸಂಸ್ಥೆಯವರು ಇದನ್ನು ನಿರ್ವಹಣೆ ಮಾಡುತ್ತಿದ್ದಾರೆ. ರೋಗಿಗಳಿಗೆ ತೊಂದರೆಯಾಗದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಲಿದೆ ಎಂದು ಹೇಳಿದರು.

ದಲಿತರ ಮೇಲಿನ ದೌರ್ಜನ್ಯ ತಡೆ ಪ್ರಕರಣಗಳಲ್ಲಿ ಸುಳ್ಳು ಪ್ರತಿದೂರು ದಾಖಲು

ಶಿಸ್ತು ಕ್ರಮಕ್ಕೆ ಒತ್ತಾಯಿಸಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದಸಂಸ ಮನವಿ ಸಲ್ಲಿಕೆ

ಮೈಸೂರು,ಫೆ.16(ಪಿಎಂ)- ಜಿಲ್ಲೆಯಾದ್ಯಂತ ದಲಿತರ ಮೇಲಿನ ದೌರ್ಜನ್ಯ ತಡೆ ಪ್ರಕರಣಗಳಲ್ಲಿ ಸುಳ್ಳು ಪ್ರತಿದೂರು ದಾಖಲಿಸಿ, ದೌರ್ಜನ್ಯ ಪ್ರಕರಣಗಳ ತನಿಖೆಯನ್ನು ದುರ್ಬಲಗೊಳಿಸಲಾಗುತ್ತಿದೆ ಎಂದು ದಲಿತ ಸಂಘರ್ಷ ಸಮಿತಿ (ದಸಂಸ) ಜಿಲ್ಲಾ ಸಂಚಾಲಕ ಚೋರನಹಳ್ಳಿ ಶಿವಣ್ಣ ಆರೋಪಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಕೆಲವರು ಪೊಲೀಸರ ಒತ್ತಾಯಕ್ಕೆ ಮಣಿದು ರಾಜೀ ಮಾಡಿಕೊಳ್ಳುತ್ತಾರೆ. ರಾಜೀ ಮಾಡಿಕೊಳ್ಳದ ಪ್ರಕರಣಗಳಲ್ಲಿ ಆರೋಪಿಗಳಿಂದಲೂ ಸುಳ್ಳು ಪ್ರತಿದೂರು (ಪ್ರಕರಣ/ಎಫ್‌ಐಆರ್) ದಾಖಲಿಸುವ ಪ್ರವೃತ್ತಿ ನಡೆಯುತ್ತಿದೆ. ಹೀಗೆ ಸ್ಥಳೀಯ ಪೊಲೀಸರು ತಮ್ಮ ಅಧಿಕಾರ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಆಪಾದಿಸಿದರು.

ಇಂತಹ ಸುಳ್ಳು ಪ್ರತಿದೂರು ಕುರಿತಂತೆ ಪರಿಶೀಲಿಸಿ ಸಂಬಂಧಿಸಿದವರ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕೆಂದು ಫೆ.9ರಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರಿಗೆ ದೂರು ಸಲ್ಲಿಸಿದ್ದೇವೆ. ನಂಜನಗೂಡು ತಾಲೂಕು ತಾಂಡ್ಯ ಕೈಗಾರಿಕಾ ಪ್ರದೇಶದ ಐಟಿಸಿ ಕಾರ್ಖಾನೆಯಲ್ಲಿ ಕಾರ್ಮಿಕ ಕಾನೂನುಗಳನ್ನು ಉಲ್ಲಂಘಿಸಿ ಗುತ್ತಿಗೆ ಕಾರ್ಮಿಕರಿಂದ ಮೆಷನರಿ ವರ್ಕ್ಸ್ ಮಾಡಿಸಲಾಗುತ್ತಿದೆ. ಈ ಸಂಬಂಧ ಕಾರ್ಮಿಕ ಇಲಾಖೆಯೂ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಆದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ದೂರಿದರು.

ಜೊತೆಗೆ ನಿರಂತರವಾಗಿ 5 ವರ್ಷಗಳು ಕೆಲಸ ಮಾಡಿದ 450ಕ್ಕೂ ಹೆಚ್ಚು ಗುತ್ತಿಗೆ ಕಾರ್ಮಿಕರನ್ನು ಹೊಸದಾಗಿ ನೇಮಕ ಮಾಡಿಕೊಳ್ಳುವುದಾಗಿ ಕೆಲಸದಿಂದ ತೆಗೆದಿದ್ದರು. ಇದರ ವಿರುದ್ಧ ಕಾರ್ಮಿಕರು 2 ತಿಂಗಳಕಾಲ ಹೋರಾಟ ನಡೆಸಿ, ಯಶಸ್ವಿಯಾದರು. ಆದರೆ ಹೋರಾಟದ ನೇತೃತ್ವ ವಹಿಸಿದ್ದ ಕಾರ್ಮಿಕ ಮುಖಂಡ ಜೆ.ಶಿವಮೂರ್ತಿ ವಿರುದ್ಧ ಕಾರ್ಖಾನೆಯವರು ಸುಳ್ಳು ದೂರು ದಾಖಲಿಸಿದ್ದರು. ಹೋರಾಟದ ಸಂದರ್ಭದಲ್ಲಿ ಸ್ಥಳದಲ್ಲಿ ಪೊಲೀಸರೂ ಇದ್ದ ಕಾರಣ ಸುಳ್ಳು ದೂರು ಎಂಬುದು ಸಾಬೀತಾಯಿತು ಎಂದರು.

ಪೊಲೀಸರು ಕಾರ್ಖಾನೆಯವರ ಸದರಿ ಸುಳ್ಳು ದೂರಿನ ವಿರುದ್ಧ ದಲಿತರ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಿದ್ದಾರೆ. ಆದರೆ ಯಾವುದೇ ಕ್ರಮ ಕೈಗೊಳ್ಳದೇ ವಿಚಾರ ಮುಕ್ತಾಯ ಮಾಡಿದ್ದೇವೆ ಎಂದು ಹಿಂಬರಹ ನೀಡಿ, ಪ್ರಕರಣ ಮುಚ್ಚಿ ಹಾಕಲೆತ್ನಿಸುತ್ತಿದ್ದಾರೆ ಎಂದು ದೂರಿದರು.

ಜೊತೆಗೆ ಇದೇ ಕಾರ್ಖಾನೆಯ ಕಾರ್ಮಿಕರಾದ ದಲಿತ ಸಮುದಾಯದ ಮದನ್‌ಕುಮಾರ್ ಮತ್ತು ಸೋಮೇಶ್ ಮೇಲೆ ಹಲ್ಲೆ ನಡೆಸಿದ ಗುತ್ತಿಗೆದಾರ ರಾಮಕೃಷ್ಣ ಮತ್ತಿತರರ ವಿರುದ್ಧ ಪ್ರಕರಣ ದಾಖಲಿಸಿದ್ದರೂ ಆರೋಪಿಗಳ ಆಮಿಷಕ್ಕೆ ಒಳಗಾಗಿ ದಲಿತರ ಮೇಲಿನ ದೌರ್ಜನ್ಯ ತಡೆ ಕಾಯ್ದೆಯನ್ನು ಪ್ರಕರಣದಿಂದ ಕೈಬಿಟ್ಟಿದ್ದಾರೆ. ನಂಜನಗೂಡು ತಾಲೂಕು ಹಗಿನವಾಳು ಗ್ರಾಮದಲ್ಲಿ ದಲಿತ ಯುವಕನ ಮೇಲೆ ಸವರ್ಣೀಯರು ಹಲ್ಲೆ ನಡೆಸಿರುವ ಸಂಬಂಧ ಆಮಿಷಕ್ಕೆ ಒಳಗಾಗಿ ಪ್ರತಿದೂರು ದಾಖಲಿಸಲಾಗಿದೆ ಎಂದು ಆರೋಪಿಸಿದರು.

ನಂಜನಗೂಡು ತಾಲೂಕು ಗೊದ್ದನಪುರದಲ್ಲಿ ರಸ್ತೆ ಬದಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ನಾಮಫಲಕ ಹಾಕಿದ್ದನ್ನು ಸವರ್ಣೀಯರು ಪೊಲೀಸರ ಎದುರು ಕಿತ್ತು ಹಾಕಿದ್ದಾರೆ. ಇದೇ ವೇಳೆ ಸವರ್ಣೀಯ ಮಹಿಳೆಯೊಬ್ಬರು ಬೋರ್ಡ್ ತೆಗೆಯುವಂತೆ ಒತ್ತಾಯಿಸಿ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದರು. ಈ ಪ್ರಕರಣದಲ್ಲಿಯೂ ದಲಿತರ ವಿರುದ್ಧವೇ ಸುಳ್ಳು ಪ್ರತಿದೂರು ದಾಖಲಿಸಲಾಗಿದೆ. ತಿ.ನರಸೀಪುರ ತಾಲೂಕಿನ ರಂಗನಾಥಪುರದಲ್ಲಿಯೂ ಡಾ.ಅಂಬೇಡ್ಕರ್ ಫ್ಲೆಕ್ಸ್‌ಗೆ ಅಪಮಾನಿಸಿದ ಕಿಡಿಗೇಡಿಗಳ ವಿರುದ್ಧವೂ ಪೊಲೀಸರು ಯಾವುದೇ ಕ್ರಮ ಜರುಗಿಸಿಲ್ಲ ಎಂದು ದೂರಿದರು. ಕಾರ್ಮಿಕ ಮುಖಂಡ ಜೆ.ಶಿವಮೂರ್ತಿ, ದಸಂಸ ಮುಖಂಡರಾದ ಕೆ.ವಿ.ದೇವೇಂದ್ರ ಕಿರುಗೂರು ಸ್ವಾಮಿ ಮತ್ತಿತರರು ಗೋಷ್ಠಿಯಲ್ಲಿದ್ದರು.

ರಾಜ್ಯದ ಭ್ರಷ್ಟ, 40% ಸರ್ಕಾರ ತೊಲಗಿಸಿ, 'ಕೈ' ಬೆಂಬಲಿಸಿ

ಪ್ರಜಾಧ್ವನಿ ಯಾತ್ರೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮನವಿ



ಚುಂಚನಕಟ್ಟೆ, ಫೆ.16– ರಾಜ್ಯದಲ್ಲಿ ಅಧಿಕಾರದಲ್ಲಿರುವ ಭ್ರಷ್ಟ ಮತ್ತು 40% ಸರ್ಕಾರ ತೊಲಗಿ ಜನರಿಗೆ ಅನುಕೂಲವಾಗಬೇಕಾದರೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಿಳಿಸಿದರು.

ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದ ಸಾಲಿಗ್ರಾಮದಲ್ಲಿ ನಡೆದ ಕಾಂಗ್ರೆಸ್ ಪ್ರಜಾಧ್ವನಿ ಯಾತ್ರೆಯಲ್ಲಿ ಮಾತನಾಡಿದ ಅವರು, ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ ಸರ್ಕಾರ ರೈತರ ಆದಾಯ ದ್ವಿಗುಣ ಮಾಡುತ್ತೇವೆ ಎಂದು ಹೇಳಿ ಸುಳ್ಳಿನ ರಾಜಕಾರಣ ಮಾಡುತ್ತಿದ್ದು, ಇದು ಹೆಚ್ಚು ದಿನ ನಡೆಯುವುದಿಲ್ಲ ಎಂದರು.

ದೇಶದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ಎಲ್ಲಾ ವರ್ಗದವರು ಅಧಿಕಾರಕ್ಕೆ ಬಂದ ಹಾಗೆ. ಪ್ರತಿಯೊಬ್ಬರೂ ಇದನ್ನರಿತು ಕಾಂಗ್ರೆಸ್ ಬೆಂಬಲಿಸಬೇಕೆಂದು ಮನವಿ ಮಾಡಿದ ಅವರು, ಜನರ ಬದುಕು ಹಸನಾಗಿ ಎಲ್ಲಾ ವರ್ಗದವರಿಗೂ ಸಾಮಾಜಿಕ ನ್ಯಾಯ ದೊರೆಯಬೇಕಾದರೆ ಕಾಂಗ್ರೆಸ್ ಅಧಿಕಾರದ ಗದ್ದುಗೆ ಏರಬೇಕು ಎಂದರು.

ಜೆಡಿಎಸ್‌ಗೆ ಮತ ಹಾಕಿದರೆ ಯಾವುದೇ ಪ್ರಯೋಜನವಿಲ್ಲ. ಬಿಜೆಪಿ ಬೆಂಬಲಿಸಿದರೆ ಭ್ರಷ್ಟಾಚಾರ ತಪ್ಪುವುದಿಲ್ಲ. ಆದರೆ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡಿದರೆ ಯಾರಿಗೂ ಮೋಸವಾಗುವುದಿಲ್ಲ. ನಮ್ಮನ್ನು ಕೈ ಹಿಡಿದರೆ ಸದಾ ನಿಮ್ಮ ಬೆನ್ನಿಗೆ ನಿಂತು ಕೆಲಸ ಮಾಡುತ್ತೇವೆ ಎಂದು ಭರವಸೆ ನೀಡಿದರು. ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ರವಿಶಂಕರ್ ಅವರನ್ನು ಈ ಬಾರಿ ಆಯ್ಕೆ ಮಾಡಿ ವಿಧಾನಸೌಧಕ್ಕೆ ಕಳುಹಿಸಿ, ನಿಮ್ಮ ಮನೆ ಮಗನಾಗಿರುವ ನನ್ನ ಕೈ ಬಲಪಡಿಸಬೇಕೆಂದು ಕೋರಿಕೊಂಡರು. ಕ್ಷೇತ್ರದಲ್ಲಿ ಡಿ.ರವಿಶಂಕರ್ ಅಭ್ಯರ್ಥಿ ಅಲ್ಲ. ಬದಲಿಗೆ ನಾನು, ಸಿದ್ದರಾಮಯ್ಯ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಭ್ಯರ್ಥಿ ಎಂದು ಮುಖಂಡರು ಮತ್ತು ಕಾರ್ಯಕರ್ತರು ಮತದಾರರ ಮನೆ ಬಾಗಿಲಿಗೆ ಹೋಗಿ ಅವರ ಬೆಂಬಲ ಯಾಚಿಸಬೇಕು ಎಂದರು.

ಕಾಂಗ್ರೆಸ್ ಮುಖಂಡ ಡಿ.ರವಿಶಂಕರ್ ಮಾತನಾಡಿ, ಕ್ಷೇತ್ರದಲ್ಲಿ ವಿರೋಧ ಪಕ್ಷದವರು ಭಯದ ವಾತಾವರಣ ಉಂಟು ಮಾಡುತ್ತಿದ್ದು, ಇದಕ್ಕೆ ಯಾರೂ ಹೆದರಬಾರದು. ನಿಮ್ಮ ಜತೆ ಸದಾ ಕಾಂಗ್ರೆಸ್ ಪಕ್ಷ ಮತ್ತು ನಾವು ಇರುತ್ತೇವೆ ಎಂದು ಅಭಯ ನೀಡಿದರು.

ಕಾಂಗ್ರೆಸ್ ಪಕ್ಷ ಮತ್ತು ನಾವು ಸಂಕಷ್ಟದಲ್ಲಿದ್ದು, ಇದನ್ನರಿತು ಮತದಾರ ಪ್ರಭುಗಳು ಹರಸಿ ಆಶೀರ್ವದಿಸಿ ಬೆಂಬಲ ನೀಡಿ ವಿಧಾನಸಭೆಗೆ ಆಯ್ಕೆ ಮಾಡಿ ಎಂದು ಮನವಿ ಮಾಡಿದರು.

ಇದಕ್ಕೂ ಮುನ್ನಾ ಸಾಲಿಗ್ರಾಮಕ್ಕೆ ಆಗಮಿಸಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮತ್ತು ಇತರ ಮುಖಂಡರನ್ನು ಪಟ್ಟಣದ ತೋಪಮ್ಮನ ದೇವಾಲಯದ ಬಳಿ ಸಾವಿರಾರು ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಪಟಾಕಿ ಸಿಡಿಸಿ ಬರಮಾಡಿಕೊಂಡರಲ್ಲದೆ ಬೈಕ್ ರ‍್ಯಾಲಿ ಮೂಲಕ ಹಂಪಾಪುರ, ಮಿರ್ಲೆ, ಅಂಕನಹಳ್ಳಿ ಮಾರ್ಗವಾಗಿ ವೇದಿಕೆಗೆ ಕರೆದೊಯ್ದರು.

ಈ ವೇಳೆ ಕೆ.ಆರ್.ನಗರ ಪಟ್ಟಣ ಸೇರಿದಂತೆ ಗಂಧನಹಳ್ಳಿ ಗೇಟ್, ಮಿರ್ಲೆ ಮತ್ತು ಅಂಕನಹಳ್ಳಿ ಗ್ರಾಮಗಳಲ್ಲಿ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ವಿವಿಧ ಬಗೆಯ ಬೃಹತ್ ಗಾತ್ರದ ಹಾರಗಳನ್ನು ಹಾಕಿ ಕೆಪಿಸಿಸಿ ಅಧ್ಯಕ್ಷರಿಗೆ ಸ್ವಾಗತ ಕೋರಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ, ರಾಜ್ಯಸಭಾ ಸದಸ್ಯ ಜಿ.ಸಿ.ಚಂದ್ರಶೇಖರ್, ಕೆಪಿಸಿಸಿ ಮಾಜಿ ಸದಸ್ಯ ಎಸ್.ಪಿ. ತಮ್ಮಯ್ಯ, ಮಾಜಿ ಸಚಿವರಾದ ಹೆಚ್.ಎಂ.ರೇವಣ್ಣ ಹೆಚ್.ಸಿ. ಮಹದೇವಪ್ಪ ರಾಣಿಸತೀಶ್, ಕಾಂಗ್ರೆಸ್ ಮಹಿಳಾಧ್ಯಕ್ಷೆ ಪುಷ್ಪಾ ಅಮರನಾಥ್, ಪ್ರಧಾನ ಕಾರ್ಯದರ್ಶಿ ಮಂಜುಳಾ ರಾಜ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಕಾರ್ಯದರ್ಶಿ ಎಸ್.ಎಸ್.ಸಂದೇಶ್ ಕುಮಾರ್, ಎಐಸಿಸಿ ಸಹ ವಕ್ತಾರೆ ಐಶ್ವರ್ಯ ಮಹದೇವ್, ಕಾಂಗ್ರೆಸ್ ಉಸ್ತುವಾರಿ ರೋಜಿಜಾನ್,ತಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಕೆ.ಆರ್.ನಗರ ಪುರಸಭಾಧ್ಯಕ್ಷ ಸೈಯದ್ ಸಿದ್ಧಿಕ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್. ಮಹದೇವ್, ಉದಯ ಕುಮಾರ್, ನಗರ ಕಾಂಗ್ರೆಸ್ ಅಧ್ಯಕ್ಷ ಎಂ.ಜೆ.ರಮೇಶ್, ವಕ್ತಾರ ಸೈಯದ್ ಜಾಬೀರ್ ಸೇರಿದಂತೆ ಸ್ಥಳೀಯ ಕಾಂಗ್ರೆಸ್ ಮುಖಂಡರು ಮತ್ತು ಸಾವಿರಾರು ಕಾರ್ಯಕರ್ತರು ಇದ್ದರು.

ಪರೋಕ್ಷವಾಗಿ ಸಿಎಂ ಆಗುವ ಬಯಕೆ ವ್ಯಕ್ತಪಡಿಸಿದ ಡಿಕೆಶಿ

ಕೆ.ಆರ್.ನಗರ: ಮಣ್ಣಿನ ಮಗನಾಗಿರುವ ನನ್ನನ್ನು ಜನತೆ ಬೆಂಬಲಿಸಿ ವಿಧಾನಸೌಧದ 3ನೇ ಮಹಡಿಗೆ ಕಳುಹಿಸಿ ನಿಮ್ಮ ಸೇವೆ ಮಾಡಲು ಅವಕಾಶ ಮಾಡಿಕೊಡಬೇಕು ಎನ್ನುವ ಮೂಲಕ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗುವ ಬಯಕೆಯನ್ನು ಪರೋಕ್ಷವಾಗಿ ವ್ಯಕ್ತಪಡಿಸಿದರು.

ಸಾಲಿಗ್ರಾಮದಲ್ಲಿ ನಡೆದ ಪ್ರಜಾಧ್ವನಿ ಯಾತ್ರೆಯಲ್ಲಿ ಮಾತನಾಡಿದ ಅವರು, ನಾನು ಸತತ 7 ಬಾರಿ ಶಾಸಕನಾಗಿ ವಿಧಾನಸಭೆ ಪ್ರವೇಶಿಸಿದ್ದು, ಜನಸೇವೆ ಮಾಡುವ ಹೆಬ್ಬಯಕೆ ಹೊಂದಿದ್ದೇನೆ. ಹಾಗಾಗಿ ನನಗೆ ನಿಮ್ಮ ಆಶೀರ್ವಾದಬೇಕೆಂದು ಮನವಿ ಮಾಡಿದರು.

ವಿಧಾನಸೌಧದ ಮೂರನೇ ಮಹಡಿಯಲ್ಲಿ ಕುಳಿತು ನಿಮ್ಮ ಸೇವೆ ಮಾಡುವ ಅವಕಾಶ ನನಗೆ ಬೇಕು ಎಂದು ಪದೇ ಪದೇ ಹೇಳಿದ ಅವರು ಮುಖ್ಯಮಂತ್ರಿಯಾಗುವ ತಮ್ಮ ಮನದಿಂಗಿತ ವ್ಯಕ್ತಪಡಿಸಿದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಆಂಟ್ ಮ್ಯಾನ್ ಅಂಡ್ ದಿ ವಾಸ್ಪ್ (3ಡಿ)(ಇಂ): ಬೆ.11ಕ್ಕೆ, ಮ.1.45ಕ್ಕೆ, ರಾ.7.15ಕ್ಕೆ, ರಾ.9.50ಕ್ಕೆ, ಪಠಾಣ್ (ಹಿಂ): ಸಂ.4.25ಕ್ಕೆ.
ಸ್ಕ್ರೀನ್ 2	ವಾತಿ (ತ): ಬೆ.10.35ಕ್ಕೆ, ಕ್ರಾಂತಿ (ಕ): ಮ.1.20ಕ್ಕೆ, ಎಸ್‌ಎಲ್‌ವಿ (ಕ): ಸಂ.4.30ಕ್ಕೆ, ಪಠಾಣ್ (ಹಿಂ): ರಾ.7ಕ್ಕೆ, ಒಂದೊಳ್ಳೆ ಲವ್ ಸ್ಟೋರಿ (ಕ): ರಾ.9.50ಕ್ಕೆ.
ಸ್ಕ್ರೀನ್ 3	ಬರೀ 10% ಬಡ್ಡಿ (ಕ): ಬೆ.10.40ಕ್ಕೆ, ಖೆಯೋಸ್ (ತ): ಮ.1.30ಕ್ಕೆ, ದೊಡ್ಡಹಟ್ಟಿ ಬೋರೇಗೌಡ (ಕ): ಸಂ.4.35ಕ್ಕೆ, ಲವ್‌ಬರ್ಡ್ಸ್ (ಕ): ರಾ.7.10ಕ್ಕೆ, ಎಂಕಿಲುಮ್ ಚಂದ್ರಿಕೆ (ಮ): ರಾ.9.50ಕ್ಕೆ.
ಸ್ಕ್ರೀನ್ 4	ಶೆಹಜಾದಾ (ಹಿಂ): ಬೆ.10.40ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ವಾತಿ (ತ): ಮ.1.30ಕ್ಕೆ, ಸಂ.4.20ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಶೆಹಜಾದಾ (ಹಿಂ): ಬೆ.10.10ಕ್ಕೆ, ಮ.1.15ಕ್ಕೆ, ಸಂ.4.20ಕ್ಕೆ, ರಾ.7.25ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಆಂಟ್ ಮ್ಯಾನ್ ಅಂಡ್ ದಿ ವಾಸ್ಪ್ (3ಡಿ)(ಇಂ): ಬೆ.11ಕ್ಕೆ, ಮ.1.45ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	ರೋಮಾಂಚಂ(ಕ): ಬೆ.10.50ಕ್ಕೆ, ಲವ್ ಬರ್ಡ್ಸ್ (ಕ): ಮ.1.35ಕ್ಕೆ, ರಾ.7.15ಕ್ಕೆ, ವಾತಿ (ತ): ಸಂ.4.20ಕ್ಕೆ, ಖೆಯೋಸ್ (ತ): ರಾ.10ಕ್ಕೆ.
ಸ್ಕ್ರೀನ್ 4	ಬರೀ 10% ಬಡ್ಡಿ (ಕ): ಬೆ.11.20ಕ್ಕೆ, ದೊಡ್ಡಹಟ್ಟಿ ಬೋರೇಗೌಡ (ಕ): ಮ.2.10ಕ್ಕೆ, ಸಕೂಚಿ (ಕ): ಸಂ.4.50ಕ್ಕೆ, ರೋಮಾಂಚಂ (ಮ): ರಾ.7.35ಕ್ಕೆ, ಪಠಾಣ್ (ಹಿಂ): ರಾ.10.20ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಕ್ರಾಂತಿ (ಕ): ಬೆ.7.30ಕ್ಕೆ, ಮ.1.45ಕ್ಕೆ, ರಾ.9ಕ್ಕೆ.
ಸ್ಕ್ರೀನ್ 2	ಕ್ರಾಂತಿ (ಕ): ಬೆ.6.45ಕ್ಕೆ, ಬೆ.9.55ಕ್ಕೆ, ಮ.1ಕ್ಕೆ, ಸಂ.4.05ಕ್ಕೆ, ರಾ.7.10ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 3	ಕ್ರಾಂತಿ (ಕ): ಬೆ.7ಕ್ಕೆ, ಬೆ.10.05ಕ್ಕೆ, ಮ.1.10ಕ್ಕೆ, ಸಂ.4.15ಕ್ಕೆ, ರಾ.10.15ಕ್ಕೆ, ಪಠಾಣ್ (ಹಿಂ): ರಾ.7.20ಕ್ಕೆ.
ಸ್ಕ್ರೀನ್ 4	ಕ್ರಾಂತಿ (ಕ): ಬೆ.7.10ಕ್ಕೆ, ಸಂ.6.50ಕ್ಕೆ, ಪಠಾಣ್ (ಹಿಂ): ಬೆ.10.15ಕ್ಕೆ, ಮ.1.15ಕ್ಕೆ, ರಾ.9.55ಕ್ಕೆ, ಗಾಂಧಿ ಗೋಡ್ಸೆ ಏಕ್ ಯುದ್ಧ್ (ಹಿಂ): ಸಂ.4ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕ್ರಾಂತಿ (ಕ): ಬೆ.11.45ಕ್ಕೆ, ಮ.3.10ಕ್ಕೆ, ಸಂ.6.35ಕ್ಕೆ, ರಾ.10ಕ್ಕೆ, ಪಠಾಣ್ (ಹಿಂ): ಬೆ.9.30ಕ್ಕೆ, ಬೆ.11.05ಕ್ಕೆ, ಮ.12.45ಕ್ಕೆ, ಮ.2.20ಕ್ಕೆ, ಸಂ.4ಕ್ಕೆ, ರಾ.7.15ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, ಧಮನ್ (ಹಿಂ): ಸಂ.4.10ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಸಂ.5.35ಕ್ಕೆ, ಬಿಟಿಎಸ್ (ಕೊ): ಮ.1.45ಕ್ಕೆ, ಸಂ.6.50ಕ್ಕೆ, ದಿ ವುಮನ್ ಕಿಂಗ್ (ಇಂ): ಬೆ.10ಕ್ಕೆ, ಮ.3.55ಕ್ಕೆ, ರಾ.9.50ಕ್ಕೆ, ನಾಕ್ ಅಟ್ ದಿ ಕ್ಯಾಬಿನ್ (ಇಂ): ಮ.2.10ಕ್ಕೆ, ರಾ.7.50ಕ್ಕೆ, ರನ್ ಬೇಬಿ ರನ್ (ತ): ಮ.1ಕ್ಕೆ, ಸಂ.6.55ಕ್ಕೆ, ಮೈಕೆಲ್ (ತ): ಸಂ.4.35ಕ್ಕೆ, ರೈಟರ್ ಪದ್ಮಭೂಷಣ್ (ತೆ): ರಾ.9.15ಕ್ಕೆ, ಮೈಕೆಲ್ (ತೆ): ರಾ.10.55ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಹೊಂದಿಸಿ ಬರೆಯಿರಿ (ಕ) ಕ್ರಾಂತಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ವಾದಿ (ತ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಶೆಹಜಾದಾ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಲವ್ ಬರ್ಡ್ಸ್ (ಕ)	2 ಪ್ರದರ್ಶನಗಳು
ಕ್ರಾಂತಿ (ಕ)	2 ಪ್ರದರ್ಶನಗಳು
ಗಾಯಿತ್ರಿ	
ಪಟಾಣ್ (ಹಿ)	4 ಪ್ರದರ್ಶನಗಳು
ರಾಜ್‌ಕಮಲ್	
ವಸಂತ ಕೋಕಿಲ (ತ)	4 ಪ್ರದರ್ಶನಗಳು
ಸಂಗಂ	
10% ಬಡ್ಡಿ (ಕ)	4 ಪ್ರದರ್ಶನಗಳು
ಲಿಡೋ	
ಕ್ರಾಂತಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಪಠಾಣ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಖೆಯೋಸ್ (ಕ)	4 ಪ್ರದರ್ಶನಗಳು

ತಿ.ನರಸೀಪುರ ಬಿಜೆಪಿ ಟಿಕೆಟ್ ನೀಡಲು ಮನವಿ



ತಿ.ನರಸೀಪುರ, ಫೆ.16– ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ದಿ.ಅನಂತ ಕುಮಾರ್ ಹಾಗೂ ಕೆ.ಎಸ್.ಈಶ್ವರಪ್ಪನವರ ಮಾರ್ಗದರ್ಶನದಲ್ಲಿ 1989 ರಲ್ಲಿ ಬಿಜೆಪಿಗೆ ಸೇರ್ಪಡೆಗೊಂಡು ಪಕ್ಷವನ್ನು ತಳಮಟ್ಟದಿಂದ ಸಂಘಟಿಸಿರುವ ನನಗೆ ಮುಂದಿನ ಚುನಾವಣೆಯಲ್ಲಿ ತಿ.ನರಸೀಪುರ ಕ್ಷೇತ್ರದ ಬಿಜೆಪಿ ಟಿಕೆಟ್ ನೀಡುವಂತೆ ಬಿಜೆಪಿ ಹಿರಿಯ ಮುಖಂಡ ಕರೋಹಟ್ಟಿ ಮಹದೇವಯ್ಯ ವರಿಷ್ಠರಿಗೆ ಮನವಿ ಮಾಡಿದ್ದಾರೆ.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ಷೇತ್ರದಲ್ಲಿ ಬಿಜೆಪಿ ಪಕ್ಷವನ್ನು ತಳಮಟ್ಟದಿಂದ ಸಂಘಟಿಸಿರುವ ನನಗೆ ಈ ಬಾರಿ ಪಕ್ಷದ ವರಿಷ್ಠರು ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಮಾಡಿಕೊಡಬೇಕು. ನನಗೆ ಇದೇ ಕೊನೆ ಅವಕಾಶವಾಗಿರುವುದರಿಂದ ಪಕ್ಷಕ್ಕೆ ನಾನು ಸಲ್ಲಿಸಿರುವ ಸೇವೆ ಪರಿಗಣಿಸಿ ವರಿಷ್ಠರು ಕ್ಷೇತ್ರದ ಜನತೆ ಸೇವೆ ಮಾಡಲು ಅನುವು ಮಾಡಿಕೊಡಬೇಕೆಂದು ಮನವಿ ಮಾಡಿದರು.

ಸ್ಥಳೀಯರಿಗೆ ಅವಕಾಶ ಬೇಕಿದೆ!: ಚುನಾವಣೆ ಸಮೀಪಿಸುತ್ತಿದ್ದಂತೆ ಹೊರಗಿನವರು ಕ್ಷೇತ್ರದಲ್ಲಿ ರಾಜಕೀಯ ನೆಲೆ ಕಂಡುಕೊಳ್ಳಲು ಹಪಾಹಪಿಸುತ್ತಿದ್ದು, ಟಿಕೆಟ್ ಪಡೆಯಲು ಇನ್ನಿಲ್ಲದ ಕಸರತ್ತು ನಡೆಸುತ್ತಿದ್ದಾರೆ. ಆದರೆ ಕ್ಷೇತ್ರಕ್ಕೆ ಹೊರಗಿನವರ ಅವಶ್ಯಕತೆ ಇಲ್ಲ. ಇಲ್ಲಿಯೇ ಹಲವು ಮಂದಿ ಸಮರ್ಥರಾಗಿದ್ದಾರೆ. ಹೊರಗಿನಿಂದ ಬಂದವರಿಗೆ ಬಿಜೆಪಿ ಮಣೆ ಹಾಕಬಾರದು. ಕ್ಷೇತ್ರ ತಬ್ಬಲಿಯೇನಲ್ಲ. ಹಲವು ಮಹನೀಯರನ್ನು ಕ್ಷೇತ್ರದಿಂದ ರಾಜ್ಯಕ್ಕೆ ಕೊಡುಗೆ ನೀಡಿದ ಕ್ಷೇತ್ರವಿದು. ಈ ಬಾರಿ ಚುನಾವಣೆಯಲ್ಲಿ ಸ್ಥಳೀಯರಿಗೆ ಅವಕಾಶಬೇಕು. ಕ್ಷೇತ್ರದ ಜನರಿಗೆ ಚಿರಪರಿಚಿತವಾಗಿರುವ ನನಗೆ ಈ ಬಾರಿ ವರಿಷ್ಠರು ಟಿಕೆಟ್ ನೀಡಿ ಆಶೀರ್ವದಿಸಿದಲ್ಲಿ ಚುನಾವಣೆಯಲ್ಲಿ ಗೆಲುವು ಸಾಧಿಸುತ್ತೇನೆ ಎಂದು ಆತ್ಮವಿಶ್ವಾಸದಿಂದ ನುಡಿದರು.

ವ್ಯಕ್ತಿ ನಾಪತ್ತೆ



ಮೈಸೂರು, ಫೆ.16– ನಂಜನಗೂಡು ತಾಲೂಕು ಹೊಸಕೋಟೆಯ ದಿವಂಗತ ದೊಡ್ಡಮಲ್ಲಣ್ಣ ಅವರ ಮಗ ನಾಗರಾಜು ಜ.15 ರಿಂದ ಕಾಣೆಯಾಗಿರುವ ಸಂಬಂಧ ಅವರ ಪತ್ನಿ ಬಿಳಿಗೆರೆ ಠಾಣೆಗೆ ದೂರು ದಾಖಲಿಸಿದ್ದಾರೆ. ಅಂದು ಬೆಳಗ್ಗೆ 8.30ಕ್ಕೆ ಕೂಲಿ ಕೆಲಸಕ್ಕಾಗಿ ಹೋದವರು ವಾಪಸ್ಸಾಗಿಲ್ಲ ಎಂದು ದೂರಿನಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ಮಾಹಿತಿ ಇದ್ದಲ್ಲಿ ಬಿಳಿಗೆರೆ ಠಾಣೆ 08221–232255, ಮೈಸೂರು ಜಿಲ್ಲಾ ಕಂಟ್ರೋಲ್ ರೂಂ 0821–2444800 ಇಲ್ಲಿಗೆ ತಿಳಿಸುವಂತೆ ಕೋರಲಾಗಿದೆ.

ಕಾಡುಪ್ರಾಣಿಗಳ ಹಾವಳಿ ತಡೆಗೆ ಆಗ್ರಹಿಸಿ ಪ್ರತಿಭಟನೆ



ನಂಜನಗೂಡು, ಫೆ.16– ಕಾಡಂಚಿನ ಗ್ರಾಮಗಳಲ್ಲಿ ಕಾಡುಪ್ರಾಣಿಗಳ ಹಾವಳಿ ತಡೆಗೆ ಆಗ್ರಹಿಸಿ ತಾಲೂಕಿನ ಕೊತ್ತನಹಳ್ಳಿ ಗೇಟ್ ಬಳಿಯ ಓಂಕಾರ ಅರಣ್ಯ ವಲಯ ಕಚೇರಿ ಎದುರು ಗುರುವಾರ ರೈತ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ವಿದ್ಯಾಸಾಗರ್ ಮಾತನಾಡಿ, ಕಾಡಂಚಿನ ಗ್ರಾಮಗಳ ಜಮೀನುಗಳಲ್ಲಿ ರೈತರು ಕಷ್ಟಪಟ್ಟು ಬೆಳೆದ ಬೆಳೆಗಳನ್ನು ಕಾಡಾನೆಗಳು ತಿಂದು–ತುಳಿದು ಹಾಳು ಮಾಡುತ್ತಿವೆ. ಹೀಗಾಗಿ ಅರಣ್ಯ ಇಲಾಖೆ ಕಾಡುಪ್ರಾಣಿಗಳ ಹಾವಳಿ ತಪ್ಪಿಸುವ ಜೊತೆಗೆ ಬೆಳೆ ಕಳೆದುಕೊಂಡ ರೈತನಿಗೆ ಕನಿಷ್ಠ 1 ಲಕ್ಷ ರೂ. ಪರಿಹಾರಧನ ನೀಡಬೇಕು ಎಂದು ಆಗ್ರಹಿಸಿದರು.

ಅರಣ್ಯದಲ್ಲಿ ವ್ಯಾಪಕವಾಗಿ ನೀಲಗಿರಿ ಮರ ಬೆಳೆಸಿರುವುದರಿಂದ ಕಾಡುಪ್ರಾಣಿಗಳಿಗೆ ಆಹಾರ ಸಿಗದೇ ಕಾಡಂಚಿನ ಗ್ರಾಮಗಳ ರೈತರ ಜಮೀನುಗಳಿಗೆ ನುಗ್ಗಿ ಬೆಳೆ ನಾಶ ಮಾಡುತ್ತಿವೆ. ಮಲ್ಲುಪುರ, ಕೆಲ್ಲೂಪುರ, ಚೆನ್ನಪಟ್ಟಣ, ಹಾಡ್ಯ, ಸಿದ್ದೇಗೌಡನ ಹುಂಡಿ, ಹೊಸಪುರ, ದೇಪೇಗೌಡನಪುರ ಮಡುವಿನಹಳ್ಳಿ, ಹಂಚೀಪುರ, ಕೊತ್ತನಹಳ್ಳಿ ವ್ಯಾಪ್ತಿಯ ಗ್ರಾಮಗಳಲ್ಲಿ ಹಂದಿ, ಜಿಂಕೆ, ಕಾಡೆಮ್ಮೆ ಹಿಂಡು ಹೊಗೆಸೊಪ್ಪಿನ ಗಿಡಗಳನ್ನು ತಿನ್ನುತ್ತಿವೆ. ರಾಗಿ, ಬಾಳೆ ಆನೆ ದಾಳಿಗೆ ಸಿಲುಕಿ ನಾಶವಾಗಿವೆ. ರಾತ್ರಿ ವೇಳೆ ಹುಲಿ, ಚಿರತೆಗಳು ಜಾನುವಾರುಗಳ ಮೇಲೆ ದಾಳಿ ನಡೆಸುತ್ತಿವೆ. ತಾಲೂಕಿನ ಓಂಕಾರ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಇನ್ನೂ 24 ಕಿಮೀ ರೈಲು ಕಂಬಿಗಳ ಬ್ಯಾರಿಕೇಡ್ ನಿರ್ಮಿಸಿಲ್ಲ. ಇದರಿಂದ ಕಾಡಾನೆಗಳು ಗ್ರಾಮಗಳಿಗೆ ನುಗ್ಗುತ್ತಿವೆ. ಕಾಡುಪ್ರಾಣಿಗಳ ದಾಳಿಯಿಂದ ಬೆಳೆ ಕಳೆದುಕೊಂಡ ರೈತರಿಗೆ ಕಳೆದ 6 ತಿಂಗಳಿನಿಂದ ಪರಿಹಾರ ಧನ ವಿತರಣೆಯಾಗಿಲ್ಲ ಎಂದು ದೂರಿದರು.

ರೈತ ನಾಗೇಂದ್ರ ಮಾತನಾಡಿ, ಬಂಡೀಪುರ ಅರಣ್ಯಕ್ಕೆ ಬೆಂಕಿ ಬಿದ್ದ ಮೇಲೆ ಪ್ರಾಣಿಗಳು ನಮ್ಮ ಭಾಗದ ಗ್ರಾಮಗಳಿಗೆ ನುಗ್ಗುತ್ತಿವೆ. ವರ್ಷಪೂರ್ತಿ ಕಷ್ಟಪಟ್ಟು ಬೆಳೆದ ಬೆಳೆ ಕೈ ಹತ್ತುತ್ತಿಲ್ಲ. ಕಾಡುಪ್ರಾಣಿಗಳ ಹಾವಳಿ ಹೆಚ್ಚಾಗಿದೆ. ಅರಣ್ಯ ಇಲಾಖೆ ಬೆಳೆ ನಾಶಕ್ಕೆ ಸೂಕ್ತ ಪರಿಹಾರವನ್ನು ವಿಳಂಬ ಮಾಡದೆ ನೀಡಬೇಕು ಎಂದರು.

ಡಿಸಿಎಫ್ ಬಸವರಾಜು ಮಾತನಾಡಿ, ಕಾಡಂಚಿನ ಗ್ರಾಮಗಳಲ್ಲಿ ಹೆಚ್ಚು ಹಾನಿಗೆ ಒಳಗಾಗುತ್ತಿರುವ ಗ್ರಾಮಗಳ ಸಮೀಕ್ಷೆ ನಡೆಸಲಾಗುತ್ತಿದೆ. ಕಾಡು ಪ್ರಾಣಿಗಳ ಹಾವಳಿ ತಡೆಯಲು ಉಳಿದ 24 ಕಿಮೀ ವ್ಯಾಪ್ತಿಯಲ್ಲಿ ಸೋಲಾರ್ ಬೇಲಿ, ರೈಲು ಕಂಬಿ ಬ್ಯಾರಿಕೇಡ್ ಅಳವಡಿಕೆ ಕಾಮಗಾರಿಯನ್ನು ನಾಳೆಯಿಂದಲೇ ಆರಂಭಿಸಲಾಗುವುದು. ಅರಣ್ಯ ಗಸ್ತು ಹೆಚ್ಚಿಸಲಾಗುವುದು. ಶೀಘ್ರ ಬೆಳೆ ಪರಿಹಾರ ಧನ ವಿತರಣೆಗೆ ಕ್ರಮವಹಿಸಲಾಗುವುದು ಎಂದರು.

ಪ್ರತಿಭಟನೆಯಲ್ಲಿ ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ರಘು, ತಾಲೂಕು ರೈತ ಸಂಘದ ಅಧ್ಯಕ್ಷ ಸತೀಶ್‌ರಾವ್, ಮಹದೇವಸ್ವಾಮಿ, ಸೋಮಣ್ಣ, ಸಿದ್ದಪ್ಪ, ನವೀನ್ ಕುಮಾರ್, ನಾಗಣ್ಣಾಚಾರ್, ನಾಗೇಶ್ ರಾಜ್, ಮಹದೇವಪ್ಪ, ಚಂದ್ರಶೇಖರ, ವೇಣುಗೋಪಾಲ್, ಡಿಎಫ್‌ಓ ಕಿರಣ್ ಕುಮಾರ್ ಉಪಸ್ಥಿತರಿದ್ದರು.

ಜೆಡಿಎಸ್ ರೈತರ ಪರ ಹೋರಾಡುವ ಪಕ್ಷ: ಸಾರಾ



ಭೇರ್ಯ, ಫೆ.16– ರೈತರ ಪರ ಹೋರಾಡುವ ಪಕ್ಷವಿದ್ದರೆ ಅದು ಜೆಡಿಎಸ್ ಮಾತ್ರ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಮಿರ್ಲೆ ಗ್ರಾಮದ ಜಲಸಿರಿ ರೈತ ಉತ್ಪಾದಕರ ಸಂಸ್ಥೆ ಕಚೇರಿ ಆವರಣದಲ್ಲಿ ತಾಲೂಕು ರೈತ ಉತ್ಪಾದಕರ ಸಂಸ್ಥೆಗಳ ವತಿಯಿಂದ ಹಮ್ಮಿಕೊಂಡಿದ್ದ ವಿವಿಧ ರೈತ ಉತ್ಪಾದಕರ ಸಂಸ್ಥೆಗಳಿಗೆ ಸುತ್ತುನಿಧಿಯ ಚೆಕ್ ವಿತರಿಸಿ ಮಾತನಾಡಿದರು.

ರೈತರ ಅನುಕೂಲಕ್ಕಾಗಿ ತಾಲೂಕಿನಲ್ಲಿ ಹಲವಾರು ಅಭಿವೃದ್ಧಿ ಕಾರ್ಯ ಮಾಡಿದ್ದಲ್ಲದೆ ನಾಲೆಗಳ ನೀರು ಕೊನೆ ಭಾಗದವರೆಗೂ ತಲುಪಲು 500 ಕೋಟಿಗೂ ಹೆಚ್ಚು ಹಣ ಖರ್ಚು ಮಾಡಿ ನಾಲೆಗಳ ಆಧುನೀಕರಣ ಮಾಡಲಾಗಿದೆ. ನಾನು ಶಾಸಕನಾಗುವ ಮೊದಲು ರೈತರು ಗದ್ದೆಗಳಲ್ಲಿ ನೀರು ಹಾಯಿಸಲು ಇಡೀ ರಾತ್ರಿ ನಾಲೆ ಏರಿ ಮೇಲೆ ಮಲಗುವ ಪರಿಸ್ಥಿತಿ ಇತ್ತು ಎಂದರು.

ಸಾಲಿಗ್ರಾಮ ಮತ್ತು ಕೆ.ಆರ್.ನಗರ ಅವಳಿ ತಾಲೂಕಿನಲ್ಲಿ 2021–22 ಮತ್ತು 2022–23ನೇ ಸಾಲಿನಲ್ಲಿ ರೈತರ ಆತ್ಮಹತ್ಯೆ ಪ್ರಕರಣ ಸೇರಿದಂತೆ ಜಮೀನಿನಲ್ಲಿ ಕೆಲಸ ಮಾಡುವಾಗ, ಕೃಷಿ ಪಂಪ್‌ಸೆಟ್ ಮೂಲಕ ವಿದ್ಯುತ್ ಅವಘಡ ಸಂಭವಿಸಿ ಮೃತರಾದ 200ಕ್ಕೂ ಹೆಚ್ಚು ಕುಟುಂಬಗಳಿಗೆ ಪರಿಹಾರ ಹಣದ ಚೆಕ್ ವಿತರಿಸಲಾಗಿದೆ. ಇದರಲ್ಲಿ ಯಾವುದೇ ಜಾತಿ ರಾಜಕಾರಣ ಮಾಡಿಲ್ಲ ಎಂದರು. ಅವಳಿ ತಾಲೂಕಿನಲ್ಲಿ 6 ರೈತ ಉತ್ಪಾದಕರ ಸಂಸ್ಥೆಗಳು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿವೆ. ಇದರಿಂದಾಗಿ ಹೆಚ್ಚು ರೈತರಿಗೆ ಅನುಕೂಲಕರವಾಗಲಿದೆ ಎಂದರು.

ಈ ವೇಳೆ ಶಾಸಕ ಸಾ.ರಾ.ಮಹೇಶ್ ವಿವಿಧ ಅವಘಡದಲ್ಲಿ ಮೃತರಾದ ರೈತ ಕುಟುಂಬದವರಿಗೆ ತಲಾ 5 ಲಕ್ಷ ಪರಿಹಾರ ಚೆಕ್ ವಿತರಣೆ ಮಾಡಿದರು. ಜಿಲ್ಲಾ ಮಟ್ಟದ ಕೃಷಿ ಮೇಳದಲ್ಲಿ ಸಾವಯವ ಕೃಷಿಗೆ ಸಂಬಂಧಿಸಿದಂತೆ ಪ್ರಥಮ, ದ್ವಿತೀಯ, ತೃತೀಯ ಮೂರು ಸ್ಥಾನ ಪಡೆದಿದ್ದ ರೈತರನ್ನು ಅಭಿನಂದಿಸಲಾಯಿತು.

ಗ್ರಾಪಂ ಅಧ್ಯಕ್ಷೆ ನೇತ್ರಾವತಿ, ಉಪಾಧ್ಯಕ್ಷೆ ಮಂಜುಳ, ಕೃಷಿ ಸಹಾಯಕ ನಿರ್ದೇಶಕ ಗುರುಪ್ರಸಾದ್, ಮಿರ್ಲೆ ರೈತ ಉತ್ಪಾದಕರ ಸಂಸ್ಥೆ ಅಧ್ಯಕ್ಷ ಕೃಷ್ಣೇಗೌಡ, ಮೈಸೂರು ಹಾಪ್‌ಕಾಮ್ಸ್ ಅಧ್ಯಕ್ಷ ಅಣ್ಣೇಗೌಡ, ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಧನಂಜಯ, ರೈತ ಉತ್ಪಾದಕ ಸಂಸ್ಥೆ ಸಂಯೋಜಕ ರಾಮ್ ಪ್ರಸಾದ್, ರೈತ ಉತ್ಪಾದಕರ ಸಂಸ್ಥೆಗಳ ಅಧ್ಯಕ್ಷ ರಾಮೇಗೌಡ, ದಾಮೋದರ್, ಬಸವರಾಜು, ಸಲಹೆಗಾರ ಕಾಂತರಾಜ್, ಪ್ರಗತಿಪರ ರೈತ ಮಹಿಳೆ ಇಂದ್ರಮ್ಮ ಸೇರಿದಂತೆ ಅನೇಕರಿದ್ದರು.

ವಿಶ್ವನಾಥ್ ಮನೆಗೆ ಡಿಕೆಶಿ ಭೇಟಿ: ಕಾಂಗ್ರೆಸ್‌ಗೆ ಆಹ್ವಾನ



ಕೆ.ಆರ್.ನಗರ, ಫೆ.16– ನೀವು ಶಾಸಕ, ಮಂತ್ರಿ, ಸಂಸದ, ವಿಧಾನಪರಿಷತ್ ಸದಸ್ಯನಾಗಿ ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಪಕ್ಷ ನೋಡಿ ಸಾಕಾಗಿದೆ. ಆದ್ದರಿಂದ ನಮ್ಮ ಪಕ್ಷಕ್ಕೆ ಬನ್ನಿ ಎಂದು ಆಹ್ವಾನಿಸಿದ್ದೇನೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಿಳಿಸಿದರು.

ಪಟ್ಟಣದ ಹಿರಿಯ ರಾಜಕಾರಣಿ, ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್. ವಿಶ್ವನಾಥ್ ಅವರ ಮನೆಗೆ ಭೇಟಿ ನೀಡಿ ಮಾತನಾಡಿದ ಅವರು, ಕಾಂಗ್ರೆಸ್‌ನಿಂದ ಪ್ರಜಾಧ್ವನಿ ಯಾತ್ರೆ ಕೈಗೊಂಡಿದ್ದು, ಕೆ.ಆರ್. ನಗರ ವಿಧಾನಸಭಾ ಕ್ಷೇತ್ರಕ್ಕೆ ಬಂದಿದ್ದೇನೆ. ನನ್ನ ಹಳೇ ಸ್ನೇಹಿತ ವಿಶ್ವನಾಥ್ ಮಾತನಾಡಿಸಿ, ಯೋಗಕ್ಷೇಮ ವಿಚಾರಿಸದಿದ್ದರೆ ಹೇಗೆ ಎಂದು ಅವರ ಮನೆಗೆ ಬಂದಿದ್ದೇನೆ ಎಂದು ತಿಳಿಸಿದರು.

ವಿಶ್ವನಾಥ್ ಕಾಂಗ್ರೆಸ್‌ನ ಕಟ್ಟಾಭಿಮಾನಿ. ಅವರು ಎಲ್ಲಾ ವಿಚಾರಗಳನ್ನು ತಿಳಿದುಕೊಂಡವರು. ಅಂತಹವರು ಕಾಂಗ್ರೆಸ್ ಪಕ್ಷಕ್ಕೆ ಬರುತ್ತಾರೆ ಎಂದರೆ ಸ್ವಾಗತ ಎಂದು ತಿಳಿಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಮಾಜಿ ಸಚಿವರಾದ ಹೆಚ್.ಸಿ.ಮಹದೇವಪ್ಪ, ಹೆಚ್.ಎಂ.ರೇವಣ್ಣ, ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ವಿ.ವಿಜಯ್ ಕುಮಾರ್, ಕಾಂಗ್ರೆಸ್ ಮುಖಂಡ ಡಿ.ರವಿಶಂಕರ್, ಅಮಿತ್ ದೇವರಹಟ್ಟಿ ಸೇರಿದಂತೆ ಅನೇಕರಿದ್ದರು.



ಹುಣಸೂರಿನ ಟ್ಯಾಲೆಂಟ್ ಶಿಕ್ಷಣ ಸಂಸ್ಥೆಯಿಂದ ನಗರದ ಅಂಬೇಡ್ಕರ್ ಭವನದಲ್ಲಿ **"Gratitude and Appreciation day"** ಆಚರಿಸಲಾಯಿತು. ಇದೇ ವೇಳೆ ವಿದ್ಯಾರ್ಥಿಗಳು, ಗಣ್ಯರನ್ನು ಸನ್ಮಾನಿಸಲಾಯಿತು. ಕರ್ನಾಟಕ ಬ್ಯಾಂಕ್ ವ್ಯವಸ್ಥಾಪಕ ಹರೀಶ್ ನಾಯಕ್, ಯೂನಿಯನ್ ಬ್ಯಾಂಕ್ ವ್ಯವಸ್ಥಾಪಕ ಸುಜಿತ್ ಕುಮಾರ್, ಝಬಿವುಲ್ಲಾ, ಸಂಸ್ಥೆ ಅಧ್ಯಕ್ಷ ನಾರಾಯಣ ರೈ, ಸಂಸ್ಥಾಪಕ ನಿರ್ದೇಶಕ ನವೀನ್ ರೈ, ನಿರ್ದೇಶಕರಾದ ಡಾ.ಶ್ರೀನಾಥ್, ಮಂಜುನಾಥ್ ಇತರರಿದ್ದರು.

ತಿ.ನರಸೀಪುರದಲ್ಲಿ 'ಕೈ' ಪ್ರಜಾಧ್ವನಿ ಯಾತ್ರೆ ಪೂರ್ವಭಾವಿ ಸಭೆ



> ನರಸೀಪುರ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಮಹದೇವಪ್ಪ ಅಥವಾ ನಾನು ಸ್ಪರ್ಧಿಸುತ್ತೇನೋ ಅದರ ಬಗ್ಗೆ ಕಾರ್ಯಕರ್ತರು ಹಾಗೂ ಮುಖಂಡರಲ್ಲಿ ಯಾವುದೇ ಗೊಂದಲ ಬೇಡ. ಕಾಂಗ್ರೆಸ್ ಗೆಲ್ಲುವುದು ಮುಖ್ಯವಾಗಬೇಕು. ಇಬ್ಬರಲ್ಲಿ ಹೈಕಮಾಂಡ್ ಸೂಚಿಸುವ ಒಬ್ಬರು ಕಣಕ್ಕಿಳಿಯುವುದು ಖಚಿತ.
>
> **–ಸುನೀಲ್ ಬೋಸ್, ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ.**

ತಿ.ನರಸೀಪುರ, ಫೆ.16– ಕಾಂಗ್ರೆಸ್‌ನ ಗೃಹಲಕ್ಷ್ಮಿ ಮತ್ತು ಗೃಹಜ್ಯೋತಿ ಯೋಜನೆಗಳು ರಾಜ್ಯಾದ್ಯಂತ ಮನೆ ಮಾತಾಗಿದ್ದು, ಮಹಿಳೆಯರಿಂದ ಕಾಂಗ್ರೆಸ್‌ಗೆ ಮಾತೃ ವಾತ್ಸಲ್ಯ ವ್ಯಕ್ತವಾಗುತ್ತಿದೆ ಎಂದು ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಸುನೀಲ್ ಬೋಸ್ ತಿಳಿಸಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಪ್ರಜಾಧ್ವನಿ ಯಾತ್ರೆ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಪ್ರತಿ ಮನೆಗೆ 200 ಯೂನಿಟ್ ಉಚಿತ ವಿದ್ಯುತ್ ಕಲ್ಪಿಸುವ ಗೃಹಜ್ಯೋತಿ ಹಾಗೂ ಕುಟುಂಬದ ಮಹಿಳೆಗೆ ಮಾಸಿಕ 2 ಸಾವಿರ ರೂ.ಸಹಾಯಧನ ನೀಡುವ ಕಾಂಗ್ರೆಸ್ ಪಕ್ಷದ ಭರವಸೆಗೆ ಪ್ರತಿಯೊಬ್ಬ ಮಹಿಳೆಯರಿಂದ ಮಮಕಾರ ವ್ಯಕ್ತವಾಗಿದ್ದು, ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನ ಮತ್ತೆ ಅಧಿಕಾರಕ್ಕೆ ತರಲು ಪ್ರತಿಯೊಬ್ಬರೂ ಚುನಾವಣೆ ನಿರೀಕ್ಷೆಯಲ್ಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಫೆ.20ರಂದು ಪ್ರಜಾಧ್ವನಿ ಯಾತ್ರೆ ಬನ್ನೂರಲ್ಲಿ ನಡೆಯಲಿದ್ದು, ಮಂಡ್ಯ ಮಾರ್ಗವಾಗಿ ತಿ.ನರಸೀಪುರ ಕ್ಷೇತ್ರ ಪ್ರವೇಶಿಸುವ ಯಾತ್ರೆಯನ್ನು ಅದ್ದೂರಿಯಾಗಿ ಬರಮಾಡಿಕೊಂಡು, ಕನಿಷ್ಠ 10 ಸಾವಿರ ಜನರನ್ನು ಸೇರಿಸಿ ಸಮಾವೇಶವನ್ನು ಯಶಸ್ವಿಗೊಳಿಸುವ ಜವಾಬ್ದಾರಿ ಪ್ರತಿಯೊಬ್ಬ ಕಾರ್ಯಕರ್ತರು ಮತ್ತು ಮುಖಂಡರ ಮೇಲಿದೆ. ಅಲ್ಲದೆ ಕ್ಷೇತ್ರದಲ್ಲಿ ಕಾಂಗ್ರೆಸ್ ಬಲಿಷ್ಠವಾಗಿದೆ ಎಂಬ ಸಂದೇಶವನ್ನು ಹೈಕಮಾಂಡ್ ಗಮನಕ್ಕೆ ತರಬೇಕಿರುವ ಹಿನ್ನೆಲೆಯಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಸಂಘಟಿತರಾಗಬೇಕು ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು ಮಾತನಾಡಿದರು. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಪಿಕಾರ್ಡ್ ಮಾಜಿ ಅಧ್ಯಕ್ಷ ಎಂ.ಎಸ್.ಶಿವಮೂರ್ತಿ, ಎಪಿಎಂಸಿ ಮಾಜಿ ನಿರ್ದೇಶಕ ಬಸವಣ್ಣ, ಕಾಡ ಮಾಜಿ ನಿರ್ದೇಶಕ ವೀರೇಂದ್ರ, ಎಸ್‌ಸಿ–ಎಸ್‌ಟಿ ಹಿತಾರಕ್ಷಣಾ ಸಮಿತಿ ಸದಸ್ಯ ಮಹದೇವಸ್ವಾಮಿ, ತಾಪಂ ಮಾಜಿ ಸದಸ್ಯ ಗಣೇಶ, ರಾಮಲಿಂಗಯ್ಯ, ಮೃಗಾಲಯ ಪ್ರಾಧಿಕಾರದ ಮಾಜಿ ನಿರ್ದೇಶಕಿ ಲತಾ ಜಗದೀಶ್, ಕುರುಬರ ಸಂಘದ ಕಾರ್ಯಾಧ್ಯಕ್ಷ ಮಾದೇಶ, ಪ್ರಧಾನ ಕಾರ್ಯದರ್ಶಿ ಬಸವರಾಜು, ಗ್ರಾಪಂ ಅಧ್ಯಕ್ಷರಾದ ಎಂ.ಮಹೇಶ್, ಕೆ.ಎಂ.ರಮೇಶ್, ಡಾ.ಡಿ. ಮಹದೇವಸ್ವಾಮಿ, ಸದಸ್ಯ ಮಾದೇಶ, ಶಿವಣ್ಣ, ಸುಂದರ, ಮಾಜಿ ಸದಸ್ಯ ನಿಂಗಯ್ಯ, ಜಿಲ್ಲಾ ಕಾಂಗ್ರೆಸ್ ವಕ್ತಾರ ಲಕ್ಷ್ಮಣ್, ಬಸವಣ್ಣ, ನಿವೃತ್ತ ಮುಖ್ಯ ಲೆಕ್ಕಾಧಿಕಾರಿ ಜೆ.ಶಿವಸ್ವಾಮಿ, ಪಿಎಸಿಎಸ್ ಮಾಜಿ ಅಧ್ಯಕ್ಷ ಎ.ಬಿ.ಮಂಜುನಾಥ, ಪುರಸಭೆ ಮಾಜಿ ಸದಸ್ಯ ರಾಘವೇಂದ್ರ, ಮುಖಂಡರಾದ ಚಂದ್ರಧರ, ವಿಜಯಕುಮಾರ್, ಎಲ್.ಮಹದೇವಪ್ಪ ಮಹೇಶ, ಸಿದ್ದರಾಜು, ಅನೂಪ್‌ಗೌಡ, ಮಹದೇವ, ರವಿ ಇನ್ನಿತರರಿದ್ದರು.

ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ: ಡಿಕೆಶಿ



ಬೆಟ್ಟದಪುರ, ಫೆ.16– ರಾಜ್ಯ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದ್ದು, ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಖಚಿತ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಿಳಿಸಿದರು.

ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದಲ್ಲಿ ಕಾಂಗ್ರೆಸ್ ಪ್ರಜಾಧ್ವನಿ ಯಾತ್ರೆ ಅಂಗವಾಗಿ ಗುರುವಾರ ಆಯೋಜಿಸಿದ್ದ ಸಮಾವೇಶವನ್ನು ನಗಾರಿ ಬಾರಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಜಾಧ್ವನಿ ಯಾತ್ರೆ ಕಂಡು ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳಿಗೆ ಈಗಾಗಲೇ ನಡುಕ ಶುರುವಾಗಿದೆ. ಪ್ರಜಾಧ್ವನಿ ಯಾತ್ರೆ ಮೂಲಕ ಜನರ ಧ್ವನಿ ತಿಳಿದುಕೊಂಡು, ಪ್ರಜೆಗಳಿಗೆ ಧ್ವನಿಯಾಗುವಂತಹ ಯೋಜನೆ ನೀಡಲು ಬಂದಿದ್ದೇವೆ. ಅಂತಹ ಯೋಜನೆಗಳನ್ನು ರೂಪಿಸಲು ಕಾಂಗ್ರೆಸ್ ಪಕ್ಷ ಮುಂದಿನ ಚುನಾವಣೆಯಲ್ಲಿ 160ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲಬೇಕು. ಆ ಸ್ಥಾನಗಳಲ್ಲಿ ಪಿರಿಯಾಪಟ್ಟಣ ಕ್ಷೇತ್ರವು ಒಂದು. ಹೀಗಾಗಿ ಕೆ.ವೆಂಕಟೇಶ್ ಅವರನ್ನು 20 ಸಾವಿರಕ್ಕೂ ಅಧಿಕ ಮತಗಳಿಂದ ಗೆಲ್ಲಿಸಿಕೊಟ್ಟರೆ ಅವರಿಗೆ ಕಾಂಗ್ರೆಸ್ ಸರ್ಕಾರದಲ್ಲಿ ಸಚಿವ ಸ್ಥಾನ ನೀಡಿ ನಾವು ಅವರ ಕೈ ಹಿಡಿಯುತ್ತೇವೆ ಎಂದು ತಿಳಿಸಿದರು.

ಕೊಟ್ಟ ಕುದುರೆ ಏರದ ಕುಮಾರಸ್ವಾಮಿ ಪಕ್ಷಕ್ಕೆ ಮತ ನೀಡಿದರೆ ಯಾವುದೇ ಪ್ರಯೋಜನವಿಲ್ಲ. ಅವರು ಕನಸು ಕಾಣುತ್ತಿದ್ದಾರೆ ಅಷ್ಟೇ. ರಾಜ್ಯದಲ್ಲಿ ಅವರು ಕೇವಲ 20 ರಿಂದ 25 ಸ್ಥಾನಗಳಿಗೆ ಸೀಮಿತ. ಆದ್ದರಿಂದ ಕಾಂಗ್ರೆಸ್ ಪಕ್ಷ ಬೆಂಬಲಿಸಿ ಅಧಿಕಾರಕ್ಕೆ ತರುವುದು ನಿಮ್ಮ ಗುರಿಯಾಗಬೇಕು ಎಂದರು.

ಶಾಸಕ ಕೆ.ವೆಂಕಟೇಶ್ ಮಾತನಾಡಿ, ಜೆಡಿಎಸ್‌ಗೆ ಯಾವುದೇ ತತ್ವ ಸಿದ್ಧಾಂತ ಇಲ್ಲ. ಅದೊಂದು ಅವಕಾಶವಾದಿ ಪಕ್ಷ ಹಾಗಾಗಿ ಪ್ರಜ್ಞಾವಂತ ಮತದಾರರು ಆಲೋಚಿಸಿ ಕಾಂಗ್ರೆಸ್ ಪಕ್ಷ ಬೆಂಬಲಿಸಬೇಕು. ಪಿರಿಯಾಪಟ್ಟಣ ಅಭಿವೃದ್ಧಿಗೆ ನಾನು ಶ್ರಮಿಸಿರುವಷ್ಟು ಮತ್ಯಾರು ಶ್ರಮಿಸಿಲ್ಲ ಎಂಬುದಕ್ಕೆ ಸಾಕ್ಷ್ಯಾಧಾರಗಳಿಗಿವೆ. ನನ್ನ ಪ್ರತಿಸ್ಪರ್ಧಿ ಕೆ.ಮಹದೇವು ಹಾಗೂ ಅವರ ಪುತ್ರ ಮೈಮುಲ್ ಅಧ್ಯಕ್ಷ ಪ್ರಸನ್ನ ನನ್ನ ವಿರುದ್ಧ ಇಲ್ಲಸಲ್ಲದ ಅಪಪ್ರಚಾರ ಮಾಡುತ್ತ ತಾಲೂಕಿನ ಜನತೆಯ ದಿಕ್ಕು ತಪ್ಪಿಸುತ್ತಿದ್ದಾರೆ ಎಂದರು.

ಯಾತ್ರೆಯಲ್ಲಿ ಮಾಜಿ ಸಂಸದ ಆರ್.ಧ್ರುವನಾರಾಯಣ್, ಹೆಚ್.ಎಂ.ರೇವಣ್ಣ ಮಾತನಾಡಿದರು. ಇದೇ ವೇಳೆ ಹಲವು ಮಂದಿ ಡಿ.ಕೆ.ಶಿವಕುಮಾರ್ ಸಮ್ಮುಖದಲ್ಲಿ ಜೆಡಿಎಸ್ ತೊರೆದು ಕಾಂಗ್ರೆಸ್ ಪಕ್ಷ ಸೇರ್ಪಡೆಗೊಂಡರು.

ಪ್ರಜಾಧ್ವನಿ ಯಾತ್ರೆ ಸಂಚಾಲಕ ಬಿ.ಸಿ.ಚಂದ್ರಶೇಖರ್, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ಮಹಿಳಾಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ಮಾಜಿ ಸಚಿವೆ ರಾಣಿ ಸತೀಶ್, ವೀಣಾ ಅಚ್ಚಯ್ಯ, ಕೆ.ಆರ್.ನಗರ ಕಾಂಗ್ರೆಸ್ ಅಭ್ಯರ್ಥಿ ರವಿಶಂಕರ್, ಕಾಂಗ್ರೆಸ್ ಯೂತ್ ಅಧ್ಯಕ್ಷ ನಲಪಾಡ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಗಣೇಶ್, ರಾಹಮತ್ ಜಾನ್‌ಬಾಬು, ನಿತಿನ್ ವೆಂಕಟೇಶ್, ಸಮಿಉಲ್ಲಾ ಖಾನ್, ಕರೀಗೌಡ ಸೇರಿದಂತೆ ಮುಖಂಡರು, ಕಾರ್ಯಕರ್ತರು ಇದ್ದರು.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಇವರು ದಿ: 08.02. 2023 ಬುಧವಾರ ದೈವಾಧೀನರಾಗಿದ್ದು. ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ: 18.02. 2023 ಶನಿವಾರ ಬೆಳಗ್ಗೆ 11.30ಕ್ಕೆ ಮೃತರ ಸ್ವಗೃಹ ಮಹದೇವಪುರ ಗ್ರಾಮ, ಕಸಬಾ ಹೋ।।, ಶ್ರೀರಂಗಪಟ್ಟಣ ತಾ।। ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಧರ್ಮಪತ್ನಿ ಶ್ರೀಮತಿ ಶಾಂತಮ್ಮ, ಸಹೋದರ, ಸಹೋದರಿಯರು, ಹೆಣ್ಣುಮಕ್ಕಳು, ಅಳಿಯಂದಿರು, ಗಂಡುಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಕುಟುಂಬವರ್ಗದವರು, ಗ್ರಾಮಸ್ಥರು.

ಶ್ರೀಮಾನ್ ಅಂಗಡಿ ತಿಮ್ಮೇಗೌಡ

ಶ್ರೀ ನಾಗಲಿಂಗೇಶ್ವರ ಭೋಗೇಶ್ವರ ಸಪ್ತ ಮಾತೃಕಾ ಹಿರಿದೇವಮ್ಮ ದೇವಾಲಯ

ಬೋಗಾದಿ ರಿಂಗ್ ರಸ್ತೆ, ಮೈಸೂರು-26

ಶಿವರಾತ್ರಿ ಜಾತ್ರಾ ಮಹೋತ್ಸವ



ದಿ. 18.02.2023ನೇ ಶನಿವಾರ ಬೆಳಿಗ್ಗೆ 5 ಗಂಟೆಯಿಂದ ಮಧ್ಯರಾತ್ರಿ 3 ಗಂಟೆಯವರೆಗೆ 4 ಯಾಮದ ವಿಶೇಷ ಪೂಜೆಗಳು ಹಾಗೂ ಬೆಳಿಗ್ಗೆ 6ರಿಂದ ರಾತ್ರಿ 12 ಗಂಟೆವರೆಗೆ ಪ್ರಸಾದ ವಿನಿಯೋಗವಿರುತ್ತದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಭಗವಂತನ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮವಿರುತ್ತದೆ.

ಸಾರ್ವಜನಿಕ ನೋಟೀಸ್

ಮೈಸೂರು ಜಿಲ್ಲೆ, ಕೆ.ಆರ್.ನಗರ ತಾಲ್ಲೂಕು, ಸಾಲಿಗ್ರಾಮದ,ಮಹಾವೀರ ರಸ್ತೆ, ನಿವಾಸಿ, ನಮ್ಮ ಕಕ್ಷಿದಾರರಾದ ಅಮರ್‌ಜಿತ್.ಎಸ್.ಜಿ ಬಿನ್ ಲೇಟ್ ಗೊಮಟರಾಜಯ್ಯ ಎಸ್.ವಿ. ಅವರು ಮಂಡ್ಯ ಜಿಲ್ಲೆ, ಚಿನಕುರಳಿ ಹೋಬಳಿ, ಬನ್ನಂಗಾಡಿ ಗ್ರಾಮದ ನಿವಾಸಿ, ಬಲರಾಮಶೆಟ್ಟಿ ಬಿನ್ ಪಾಪಶೆಟ್ಟಿ ಮತ್ತು ಅವರ ಕುಟುಂಬಸ್ಥರಿಂದ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆಯುವ ಸಂಬಂಧ ವ್ಯವಹರಿಸುತ್ತಿರುತ್ತಾರೆ. ಈ ಸಂಬಂಧ ಸಾರ್ವಜನಿಕವಾಗಿ ಹಾಗೂ ಸಂಬಂಧಪಟ್ಟವರಿಗೆ ತಿಳಿಯಪಡಿಸುವುದೇನೆಂದರೆ.

ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಿಗಾದರೂ ಯಾವುದೇ ಹಕ್ಕು ಅಧಿಕಾರ, ಭಾಗಾಂಶ ಅಥವಾ ಸ್ವಾಧೀನ ಇದ್ದಲ್ಲಿ, ಅಥವಾ ಈ ಸಂಬಂಧ ಯಾವುದೇ ನ್ಯಾಯಾಲಯದಲ್ಲಿ ಯಾವುದೇ ಪ್ರಕರಣ ಇತ್ಯರ್ಥಕ್ಕೆ ಬಾಕಿ ಇದ್ದಲ್ಲಿ, ಅಥವಾ ಈ ಬಗ್ಗೆ ಯಾವುದೇ ಕಾನೂನು ಕ್ರಮ ಕೈಗೊಳ್ಳಲು ಇಚ್ಛಿಸಿದ್ದಲ್ಲಿ, ಅಥವಾ ಯಾವುದೇ ಆಕ್ಷೇಪಣೆ ಇದ್ದಲ್ಲಿ, ಸಂಬಂಧ ಪಟ್ಟ ದಾಖಲಾತಿಗಳೊಂದಿಗೆ, ನಮ್ಮ ಕಕ್ಷಿದಾರರಿಗಾಗಲೀ, ಅಥವಾ ನಮ್ಮ ವಿಳಾಸಕ್ಕಾಗಲೀ ದಿನಾಂಕ 23-2-2023 ರ ಒಳಗಾಗಿ ಮಾಹಿತಿ ನೀಡತಕ್ಕದ್ದು. ತಪ್ಪಿದಲ್ಲಿ ಯಾವುದೇ ಆಕ್ಷೇಪಣೆ ಇಲ್ಲವೆಂದು ಪರಿಭಾವಿಸಿ ಕ್ರಯದ ವ್ಯವಹಾರವನ್ನು ನಡೆಸಲಾಗುವುದು ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್

ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು, ಚಿನಕುರಳಿ ಹೋಬಳಿ, ಬನ್ನಂಗಾಡಿ ಗ್ರಾಮದ ಸರ್ವೆ ನಂಬರ್, 109/2 ವಿಸ್ತೀರ್ಣ 0.09 (ಒಂಬತ್ತುಗುಂಟೆ). ಸರ್ವೆ ನಂಬರ್, 109/3 ವಿಸ್ತೀರ್ಣ 0.05 (ಐದುಗುಂಟೆ) ಮತ್ತು 109/6 ವಿಸ್ತೀರ್ಣ 0.05 (ಐದುಗುಂಟೆ) ಜಮೀನು ಒಟ್ಟು ವಿಸ್ತೀರ್ಣ 0.19 ಹತ್ತೊಂಭತ್ತು ಗುಂಟೆ) ಜಮೀನಿನ ಚಕ್ಕುಬಂದಿ: ಪೂರ್ವಕ್ಕೆ: ಅಮರ್‌ಜಿತ್ ಜೈನ್, ನವೀನ್ ಕುಮಾರ್.ಟಿ ಮತ್ತು ಚರಣ್.ಎಂ. ಅವರ ಜಮೀನು. ಪಶ್ಚಿಮಕ್ಕೆ: ವೇಣುಗೋಪಾಲ್ ರವರ ಜಮೀನು, ಉತ್ತರಕ್ಕೆ: ಬಿ.ಆರ್. ಜಯರಾಮು ಮತ್ತು ಬಲರಾಮ್ ಶೆಟ್ಟಿರವರ ಜಮೀನು. ಮತ್ತು ದಕ್ಷಿಣಕ್ಕೆ: ಸರ್ಕಾರಿ ಹಳ್ಳ.

SD/- S. Kumara,B.Com., LL.,B., Advocate, KAR/1912/95, Opp. KSRTC Bus Stand, Pandavapura Town-571 434
Email: kumaramsk6@gmail.com
Mob: 9901821295

ದಿನಾಂಕ: 17.02.2023

ನಗರಸಭಾ ಕಾರ್ಯಾಲಯ, ಹೂಟಗಳ್ಳಿ

ಎಸ್.ಆರ್.ಎಸ್.ಸ್ಟೇಷನ್ ಎದುರು, ಹೈಟೆನ್ಷನ್ ಜೋಡಿ ರಸ್ತೆ, ಹೂಟಗಳ್ಳಿ, ಮೈಸೂರು-570018. ದೂ:0821-2001737
ವೆಬ್‌ಸೈಟ್:http://www.hootagallicity.mrc.gov.in ಇಮೇಲ್: itstaff_ulb_hootagalli@yahoo.com

ಸಂಖ್ಯೆ:ನಸಹೂ/ತಾಂತ್ರಿಕ/ಟೆಂಡರ್/ಸಿ.ಆರ್-25/2022-23 ದಿನಾಂಕ:15.02.2023

ಟೆಂಡರ್ ಪ್ರಕಟಣೆ (ಇ-ಪೋರ್ಟಲ್ ಮೂಲಕ ಎರಡನೇ ಕರೆ)

ಹೂಟಗಳ್ಳಿ ನಗರಸಭೆ ವ್ಯಾಪ್ತಿಯಲ್ಲಿ 2022-23ನೇ ಸಾಲಿನ ನಗರಸಭಾ ಸಾಮಾನ್ಯ ನಿಧಿಯಲ್ಲಿ ಕೆ.ಟಿ.ಪಿ.ಪಿ ಕಾಯ್ದೆ 2000ರ ಪ್ರಕಾರ ಕೆ.ಡಬ್ಲ್ಯೂ-01 ಮತ್ತು 02ರ ನಿಯಮದಂತೆ ಇ-ಪೋರ್ಟಲ್ ಎರಡನೇ ಕರೆಯ 04 ಸಂಖ್ಯೆಯ ಕಾಮಗಾರಿಗಳಿಗೆ ಐಟಂವಾರು ಟೆಂಡರ್ ಕರೆಯಲಾಗಿದ್ದು, ಪರಿಶಿಷ್ಟ ಪಂಗಡದ ಗುತ್ತಿಗೆದಾರರಿಗೆ 01 ಕಾಮಗಾರಿ ಮೀಸಲಾಗಿಡಲಾಗಿದೆ. ಕಾಮಗಾರಿಗಳ ಕನಿಷ್ಠ ಮೊತ್ತ ರೂ.10.00 ಲಕ್ಷಗಳು ಮತ್ತು ಗರಿಷ್ಠ ಮೊತ್ತ ರೂ.50.00 ಲಕ್ಷಗಳಾಗಿದ್ದು, ಲೋಕೋಪಯೋಗಿ ಇಲಾಖೆಯ ಅರ್ಹ ನೋಂದಾಯಿತ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು **https://eproc.karnataka.gov.in** ಇ-ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ 01.03.2023 ಸಂಜೆ 5:30 ಗಂಟೆಯವರೆಗೆ** ಹಾಗೂ ಟೆಂಡರ್ ತೆರೆಯುವ **ದಿನಾಂಕ: 03.03.2023 ಬೆಳಗ್ಗೆ 11:00 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ಕಛೇರಿ ತಾಂತ್ರಿಕ ಶಾಖೆ ಹಾಗೂ ಕಛೇರಿ ವೆಬ್‌ಸೈಟ್‌ಅನ್ನು ಸಂಪರ್ಕಿಸಬಹುದಾಗಿದೆ. ಟೆಂಡರ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ. ಕಾಮಗಾರಿಗಳಿಗೆ ಜಿ.ಎಸ್.ಟಿ ಯನ್ನು ಪ್ರತ್ಯೇಕವಾಗಿ ಪಾವತಿಸಲಾಗುವುದು. **ಷರತ್ತು:** ಪೂರ್ಣಗೊಂಡ ಕಾಮಗಾರಿಗಳಿಗೆ ನಗರಸಭೆಯ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಬಿಲ್ ಪಾವತಿಸಲಾಗುವುದು.

ಸಹಿ/-ಪೌರಾಯುಕ್ತರು
ನಗರಸಭೆ, ಹೂಟಗಳ್ಳಿ

DIPR/MYS/KAVITA/1025/2022-23

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು ಷೆಡ್ಯೂಲ್‌ನಲ್ಲಿ ನಮೂದು ಮಾಡಿರುವ ಸ್ವತ್ತನ್ನು ಸದರಿ ಸ್ವತ್ತಿನ ಮಾಲೀಕರಿಂದ ಶುದ್ಧ ಕ್ರಯಕ್ಕೆ ಪಡೆದುಕೊಳ್ಳುವ ಇಚ್ಛೆಯನ್ನು ಹೊಂದಿದ್ದು, ಈ ಸಂಬಂಧ ಕೆಳಕಂಡಂತೆ ಸಾರ್ವಜನಿಕ ಪ್ರಕಟಣೆಯನ್ನು ನೀಡುತ್ತಿದ್ದಾರೆ.

ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿ/ವ್ಯಕ್ತಿಗಳು/ಸಂಘ ಸಂಸ್ಥೆಗಳು ಅಥವಾ ಷೆಡ್ಯೂಲ್ ಸ್ವತ್ತಿನ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಹಕ್ಕು, ವಾರಸು, ಮಾಲೀಕತ್ವ ಹಾಗೂ ಇನ್ನಿತರೆ ಯಾವುದೇ ರೀತಿಯ ಮಾಲೀಕತ್ವವನ್ನು ಹೊಂದಿದ್ದಂತಹ ಪಕ್ಷದಲ್ಲಿ ಅಂತಹ ವ್ಯಕ್ತಿಗಳು ಈ ಕೆಳಗೆ ಸಹಿ ಮಾಡಿರುವ ವಕೀಲರ ವಿಳಾಸಕ್ಕೆ ಸೂಕ್ತ ದಾಖಲಾತಿಗಳ ಸಮೇತ ಹಾಜರಾಗಿ ತಮ್ಮ ಆಕ್ಷೇಪಣೆಯನ್ನು ಈ ಸಾರ್ವಜನಿಕ ಪ್ರಕಟಣೆ ಪ್ರಕಟವಾದಂತಹ ಏಳು (07) ದಿನಗಳೊಳಗಾಗಿ ಲಿಖಿತವಾಗಿ ಸಲ್ಲಿಸುವಂತೆ ಈ ಮೂಲಕ ಸೂಚಿಸಲಾಗಿದೆ. ಒಂದು ವೇಳೆ ಮೇಲೆ ತಿಳಿಸಿದಂತಹ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಬಾರದೇ ಇದ್ದಂತಹ ಪಕ್ಷದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಕ್ರಯದ ವ್ಯವಹಾರವನ್ನು ಪೂರ್ಣಗೊಳಿಸುತ್ತಾರೆಂತಲೂ ಮತ್ತು ಆನಂತರ ಬರುವಂತಹ ಯಾವುದೇ ಆಕ್ಷೇಪಣೆಗಳಿಗೆ ನಮ್ಮ ಕಕ್ಷಿದಾರರು ಜವಾಬ್ದಾರರಲ್ಲವೆಂತಲೂ ಈ ಮೂಲಕ ತಿಳಿಯಪಡಿಸಲಾಗುತ್ತಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಗುಂಡ್ಲುಪೇಟೆ ತಾಲ್ಲೂಕು, ಬೇಗೂರು ಹೋಬಳಿ, ಬೊಗ್ಗನಪುರ ಗ್ರಾಮದ ಸರ್ವೆ ನಂ. 56/2 ರ ವಿಸ್ತೀರ್ಣ 1 ಎಕರೆ 30 ಗುಂಟೆ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಬೀರೇಶ ಉರುಫ್ ಬೀರೇಗೌಡರ ಜಮೀನು, ಪಶ್ಚಿಮಕ್ಕೆ: ಮಾದೇಗೌಡರವರ ಜಮೀನು, ಉತ್ತರಕ್ಕೆ: ಸರ್ಕಾರಿ ರಸ್ತೆ, ದಕ್ಷಿಣಕ್ಕೆ: ಮಾದೇಗೌಡ ಮತ್ತು ಬೀರೇಶ ಉರುಫ್ ಬೀರೇಗೌಡರವರ ಜಮೀನು.

SD/- Jayakumar, Advocate, Office: No. 565/A, 20th Cross, 4th Main, 1st Stage, Vidyaranyapuram, Mysore-08
Mob: 9844539729
ದಿನಾಂಕ: 15.02.2023, ಸ್ಥಳ: ಮೈಸೂರು

JSS MAHAVIDYAPEETHA
JSS TECHNICAL EDUCATION DIVISION
JSS Technical Institutions Campus, Mysuru – 570 006

TENDER NOTIFICATION

No. JSSSTU/Tender for Security/2022-23 Dt: 16.02.2023

Sealed Tenders are invited from the reputed Registered Contractor / Service Provider for **providing Security Services** at JSS Technical Institutions Campus, Mysuru.

- **For more details visit: www.jssstuniv.in**
- **Last date for submission of Tender Form is 27-02-2023 before 5.30 p.m.**

Sd/-
Director

ಫಾರ್ಮ್ ನಂ. ಯುಆರ್‌ಸಿ-2

ಬಗ್ಗೆ ಸೂಚನೆ ನೀಡುವ ಜಾಹೀರಾತು ಕಾಯ್ದೆಯ ಅಧ್ಯಾಯ 21ರ ಭಾಗ 1ರ ಅಡಿಯಲ್ಲಿ ನೋಂದಣಿ ಬಗ್ಗೆ ನೋಟಿಸ್ ನೀಡುವ ಜಾಹೀರಾತು [ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 374 (ಬಿ) ಅನ್ವಯ ಮತ್ತು ಕಂಪನಿಗಳ (ನೋಂದಣಿ ಮಾಡುವ ಅಧಿಕಾರ) ನಿಯಮಗಳು, 2014ರ ನಿಯಮ 4(1)ಅನ್ವಯ]

1. ಈ ಮೂಲಕ ತಿಳಿಯಪಡಿಸುವುದೇನೆಂದರೆ ಕಂಪನಿಗಳ ಕಾಯ್ದೆ-2013 ರ ಸೆಕ್ಷನ್ 366, ಉಪಸೆಕ್ಷನ್ (2) ಅನುಸಾರ ಮುಂದಿನ ಹದಿನೈದು ದಿನಗಳ ಬಳಿಕ ಆದರೆ ಮೂವತ್ತು ದಿನಗಳು ಕಳೆಯುವ ಮುನ್ನ **ಸೆಂಟ್ರಲ್ ರಿಜಿಸ್ಟ್ರೇಷನ್ ಸೆಂಟರ್ (ಸಿಆರ್‌ಸಿ), ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕಾರ್ಪೋರೇಟ್ ಅಫೇರ್ಸ್ (ಐಐಸಿಎ) ಪ್ಲಾಟ್ ನಂ.6, 7, 8, ಸೆಕ್ಟರ್ 5, ಐಎಂಟಿ ಮನೇಸರ್, ಜಿಲ್ಲೆ ಗುರುಗಾಂವ್ (ಹರ್ಯಾಣ) ಪಿನ್‌ಕೋಡ್-122050** ವಿಳಾಸದಲ್ಲಿರುವ ರಿಜಿಸ್ಟ್ರಾರ್ ರವರಿಗೆ " ಮೆ॥ ನೇಚರ್ ಅಸೋಸಿಯೇಟ್ಸ್ ಮೈಸೂರು" ಎಂಬ ಪಾಲುದಾರಿಕೆ ಉದ್ಯಮವನ್ನು ಕಂಪನಿಗಳ ಕಾಯ್ದೆ 2013ರ ಅಧ್ಯಾಯ 21ರ ಭಾಗ 1ರ ಅಡಿಯಲ್ಲಿ ಷೇರುಗಳಿಂದ ಸೀಮಿತವಾದ ಕಂಪನಿಯಾಗಿ ನೋಂದಣಿ ಮಾಡುವ ಸಂಬಂಧ ಅರ್ಜಿ ಸಲ್ಲಿಸಲು ಪ್ರಸ್ತಾವಿಸಲಾಗಿದೆ.
2. **ಕಂಪನಿಯ ಪ್ರಮುಖ ಉದ್ದೇಶಗಳು ಈ ಕೆಳಗಿನಂತಿವೆ:** ಅ) ವ್ಯಾಪಾರ/ ಒಳಾಂಗಣ ಮತ್ತು ಹೊರಾಂಗಣ ಕ್ರೀಡೆಗಳ ಸೇವೆ, ಮನರಂಜನಾ ಚಟುವಟಿಕೆಗಳು, ಕನ್ವೆನ್ಷನ್ ಹಾಲ್, ರೆಸಾರ್ಟ್‌ಗಳು, ಇತ್ಯಾದಿ ಮತ್ತು ಸಂಬಂಧಿತ ಸೇವೆಗಳು.
3. ಕರಡು ಮೆಮೊರಾಂಡಮ್‌ನ ಪ್ರತಿ ಮತ್ತು ಪ್ರಸ್ತಾವಿತ ಕಂಪನಿಯ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ಸ್ ಪ್ರತಿಯನ್ನು ರಿಜಿಸ್ಟರ್ಡ್ ಆಫೀಸ್ **ನಂ. 2270, 1ನೇ ಮಹಡಿ, 5ನೇ ಮೇನ್**, ವಿ.ವಿ ಮೊಹಲ್ಲಾ, ಮೈಸೂರು, ಕರ್ನಾಟಕ-**570002** ವಿಳಾಸದಲ್ಲಿರುವ ಕಛೇರಿಯಲ್ಲಿ ವೀಕ್ಷಿಸಬಹುದು.
4. ಈ ಮೂಲಕ ತಿಳಿಯಪಡಿಸುವುದೇನೆಂದರೆ ಯಾವುದೇ ವ್ಯಕ್ತಿಗಳಿಂದ ಈ ಅರ್ಜಿಗೆ ಆಕ್ಷೇಪಣೆಗಳು ಇದ್ದಲ್ಲಿ ತಮ್ಮ ಆಕ್ಷೇಪಣೆಗಳನ್ನು ಲಿಖಿತವಾಗಿ **ರಿಜಿಸ್ಟ್ರಾರ್, ಸೆಂಟ್ರಲ್ ರಿಜಿಸ್ಟ್ರೇಷನ್ ಸೆಂಟರ್ (ಸಿಆರ್‌ಸಿ), ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕಾರ್ಪೋರೇಟ್ ಅಫೇರ್ಸ್ (ಐಐಸಿಎ) ಪ್ಲಾಟ್ ನಂ. 6, 7, 8, ಸೆಕ್ಟರ್ 5, ಐಎಂಟಿ ಮನೇಸರ್, ಜಿಲ್ಲೆ ಗುರುಗಾಂವ್ (ಹರ್ಯಾಣ) ಪಿನ್‌ಕೋಡ್-122050** ಇವರಿಗೆ ಈ ನೋಟಿಸ್ ಪ್ರಕಟವಾದ ಇಪ್ಪತ್ತೊಂದು(21) ದಿನಗಳ ಒಳಗಾಗಿ ಸಲ್ಲಿಸಬೇಕು ಹಾಗೂ ಇದರ ಪ್ರತಿಯನ್ನು ಕಂಪನಿಯ ನೋಂದಾಯಿತ ಕಛೇರಿಗೆ ಕಳುಹಿಸಬೇಕು.

ನೇಚರ್ ಅಸೋಸಿಯೇಟ್ಸ್ ಮೈಸೂರು ಪರವಾಗಿ
ಸಹಿ/- 1. ಬಿ ಸಿದ್ದರಾಜು (ಪಾಲುದಾರರು)
2.ಶಿವರಾಜು ಎನ್ (ಪಾಲುದಾರರು)
3. ನಾಗೇಂದ್ರ ಕೆ.ಎಲ್ (ಪಾಲುದಾರರು)
ದಿನಾಂಕ: 17.2.2023 ಸ್ಥಳ: ಮೈಸೂರು

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಲೇಟ್. ದಾಕ್ಷಾಯಿಣಿ ರವರ ಮಗಳು ಮತ್ತು ಶ್ರೀ. ಧ್ರುವ ಜ್ಯೋತಿ ಅರಸ್ ಎಂ.ಎನ್., ರವರ ಧರ್ಮಪತ್ನಿ ಶ್ರೀಮತಿ ಸುಷ್ಮ ಧ್ರುವ ರವರು, ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ, ಬ್ಯಾಂಕ್ / ಹಣಕಾಸು ಸಂಸ್ಥೆ ಒಳಗೊಂಡಂತೆ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ-ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 07 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ-ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ನಗರ, ಸರಸ್ವತಿಪುರಂ ವೆಸ್ಟ್ ಆಫ್ ತೊಣಚಿಕೊಪ್ಪಲು 4ನೇ ಹಂತ (SWT ಕೊಪ್ಪಲು 4ನೇ ಹಂತ) ಬಡಾವಣೆಯಲ್ಲಿರುವ ನಿವೇಶನ ಸಂಖ್ಯೆ 1311/ಐ, ಉಳ್ಳ ಸ್ವತ್ತಿನ ವಿಸ್ತೀರ್ಣ ಪೂರ್ವ-ಪಶ್ಚಿಮ : 24 ಮೀಟರ್‌ಗಳು ಮತ್ತು ಉತ್ತರ-ದಕ್ಷಿಣ: 15 ಮೀಟರ್‌ಗಳು, ಒಟ್ಟು ವಿಸ್ತೀರ್ಣ: 360.00 ಚದರ ಮೀಟರ್‌ಗಳುಳ್ಳ ಸ್ವತ್ತಿಗೆ ಚಕ್ಕುಬಂದಿ, ಪೂರ್ವಕ್ಕೆ: 60 ಅಡಿ ಅಗಲದ ರಸ್ತೆ-ಪಡುವಣ ರಸ್ತೆ, ಪಶ್ಚಿಮಕ್ಕೆ: ದಟ್ಟಗಳ್ಳಿ ಗ್ರಾಮದ ಗಡಿ, ಉತ್ತರಕ್ಕೆ: ನಿವೇಶನ ಸಂಖ್ಯೆ 1311/ಹೆಚ್ ಮತ್ತು ದಕ್ಷಿಣಕ್ಕೆ: ನಿವೇಶನ ಸಂಖ್ಯೆ 1311/ಜೆ.

ಸಹಿ/- ಶ್ರೀಲತಾ ದೀಕ್ಷಿತ್, ವಕೀಲರು, ಎಸ್‌ಎಲ್‌ಡಿ ಲಾ ಫರ್ಮ್, ನಂ. 1458/ಎ, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು. ಮೊ: 9844640641,
email: sldlawfirm2021@gmail.com

PUBLIC NOTICE

This is to inform the general public that our client intends to purchase the below explain Schedule Property, from the property owner namely, **Mr. SUNIL B**, Son of Mr. T.B. Balagavi, Residing at No. 120, MIG, KHB Colony, Basaveshwara Nagar, Bangalore – 560079, Karnataka, India.

Any person having or claiming any right, title, estate or interest by waiver, inheritance, share, sale, mortgage, transfer, lease, tenancy, lien, charge, trust, maintenance, easement, gift, devise bequest, exchange, pre-emption, possession or encumbrance or otherwise howsoever into or upon the Schedule Property described herein below are called upon to intimate the same in writing to the undersigned at the below given address along with all the documents relating to such claim within 10 days from the date of publication of this notice, failing which, any such claim of any party shall be deemed to have been waived for all legal practical purposes and shall not be entertained after such period and our client will proceed with the proposed purchase of the Scheduled Property on the basis that there are no claims whatsoever with respect thereto.

SCHEDULE PROPERTY

ITEM NO. I: All that piece and parcel of the immoveable Commercially Converted Land bearing Survey No. 75/7 (earlier No. 75/3, old No. 75/1), measuring 06 guntas (out of 13 guntas), Situated at Belavatha Village, Kasaba Hobli, Mysuru Taluk, Mysuru District and bounded on the: East By:Sy No. 89/5;West By:Sy No. 75/1;North By:Sy No. 74/4;South By: Ring Road.

ITEM NO. II: All that piece and parcel of the immoveable Commercially Converted Land bearing Survey No. 89/5 (earlier No. 89/3, old No. 89-P), measuring 24 guntas, Situated at Belavatha Village, Kasaba Hobli, Mysuru Taluk, Mysuru District and bounded on the: East By:Sy No. 89/10;West By:Sy No. 75/7;North By: Sy No. 90/1;South By: Ring Road.

ITEM NO. III: All that piece and parcel of the immoveable Commercially Converted Land bearing Survey No. 90/1 (old No. 90), measuring 37 guntas, Situated at Belavatha Village, Kasaba Hobli, Mysuru Taluk, Mysuru District and bounded on the:East By:Sy No. 90/2 & 91/1;West By:Sy Nos. 74/1 & 74/4;North By: Halla;South By: Sy Nos. 89/5 & 90/2.

Sd/- **Manoj B.V/ Nagendra Prasad D.G.**, India Law Practice – ILP, Advocates and Attorneys, No. 663, 1st Floor, 17th Main, Near Poornima Hospital, Saraswathipuram, Mysuru City-570009. Ph: 0821-4241296/4262520.
e-mail: manoj@ilplaw.co.in,nagendra@ilplaw.co.in

Date:16.02.2023,Place: Mysuru

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ಮೈಸೂರು ವಿಭಾಗ : ಮೈಸೂರು

ಸಂ:ಕರಾಸಾ/ಮೈವಿ/ಸಂ/ವಾ/4180/2022-23 ದಿನಾಂಕ: 13.02.2023

ಟೆಂಡರ್ ಪ್ರಕಟಣೆ ಸಂ.05/2022-23

(ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) ಕಾಲಾವಕಾಶವನ್ನು ವಿಸ್ತರಿಸಲಾಗಿದೆ.

ಮೈಸೂರು ವಿಭಾಗದ ವ್ಯಾಪ್ತಿಯ ಸಾತಗಳ್ಳಿ ಬಸ್ ನಿಲ್ದಾಣದ ವಾಣಿಜ್ಯ ಸ್ಥಳಗಳಿಗೆ **"ಎಲ್ಲಿದೆಯೋ ಹಾಗೂ ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ"** ಆಧಾರದ ಮೇಲೆ ಪರವಾನಗಿದಾರರನ್ನು ಆಯ್ಕೆಗಾಗಿ ಅರ್ಹ ವ್ಯಕ್ತಿ/ಕಂಪನಿ/ಸಂಸ್ಥೆಗಳಿಂದ ಅರ್ಜಿಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾಗಿದ್ದು, ಕಾಲಾವಕಾಶವನ್ನು ವಿಸ್ತರಿಸಲಾಗಿದೆ. **ಇ-ಟೆಂಡರ್ ವಿವರಗಳು :** 1) ಇ-ಟೆಂಡರ್ ವಿಚಾರಣೆಗೆ ಕಡೆಯ ದಿನಾಂಕ : **18/02/2023 ಸಮಯ : 12.00 ಗಂಟೆ.** 2) ಇ-ಟೆಂಡರ್/ಅರ್ಜಿ ಸ್ವೀಕರಿಸಲು ಕಡೆಯ ದಿನಾಂಕ : **20/02/2023 ಸಮಯ : 14.00 ಗಂಟೆ.** 3) ಡಿ.ಡಿಗಳನ್ನು ವಿಭಾಗೀಯ ಕಛೇರಿಗೆ ಸಲ್ಲಿಸುವ ದಿನಾಂಕ : **20/02/2023 ಸಮಯ: 17.00 ಗಂಟೆ.** 4) ಇ-ಟೆಂಡರ್ ತೆರೆಯುವ ದಿನಾಂಕ : **22/02/2023 ಸಮಯ: 15.00 ಗಂಟೆ.**

ಹೆಚ್ಚಿನ ಮಾಹಿತಿಗಾಗಿ/ವಿವರಗಳಿಗಾಗಿ ಸಂಪರ್ಕಿಸಿ : ಸಹಾಯವಾಣಿ ಸಂಖ್ಯೆ: 7760990802, 7760990811, 7019026615, 9343554555.

ಇ-ಪೋರ್ಟಲ್ ವಿಳಾಸ : www.eproc.karnataka.gov.in

ಸಹಿ/-
ವಿಭಾಗೀಯ ನಿಯಂತ್ರಣಾಧಿಕಾರಿ

DIPR/CP/VCPL/4750/2022-23